MARUCHINTANE- A collection of critical Essays on
ınnada Literature by Prof. K.G. Nagarajappa, published by
ıiketana, Sahithya Samskruthika Samshodhana Kendra,
ımkur. Second Edition: March 1998, Price: Rs. 70/-

' 141+XXVI

ೂದಲ ಮುದ್ರಣ : ಜೂನ್ 1985

'ಡನೆಯ ಮುದ್ರಣ : 8-8-1998

ಖಪುಟ ವಿನ್ಯಾಸ : ಎಂ. ವಿಶ್ವನಾಥ್.

: ಎಪ್ಪತ್ತು ರೂಪಾಯಿಗಳು

ಪ್ರಕಾಶಕರು:
ಅನಿಕೇತನ
ತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ
ತುಮಕೂರು

ಪ್ರತಿಗಳಿಗೆ :
ಎಂ.ಎಚ್. ನಾಗರಾಜು
ನಂ 202, ಮೂರನೇ ತಿರುವು
ಹೊಸ ಬಡಾವಣೆ
ಗುಬ್ಬಿ-572216.

ರ ಜೋಡಣೆ : ಬೆನಕ ಡಿಟಿಪಿ ಕಾಟೇಜ್, ತುಮಕೂರು.

ದ್ರಕರು : ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು.

Nagarajappa, K.G. 1985. *Maruchintane*. Tumkur: Aniketana, Sahitya

ಪರಿವಿಡಿ

ಹಂತಕ್ಕೆ ವಿಕಾಸವಾಗುವಂತೆ, ನಿರಂತರ ಸಾಧನೆಯಲ್ಲಿ ಆಸೆ ಆಮಿಷಗಳಿಗೆ ಬಲಿಯಾಗದಂತೆ ಕಣ್ಣಲ್ಲಿ ಕಣ್ಣಿಟ್ಟು ಕಾಯ್ದುಕೊಂಡಿರುವ ಸದಾ ಎಚ್ಚರಿಕೆಯ ಗಂಟೆಯೇ ಶಿಕ್ಷೆ. ಶಿಕ್ಷೆ ಆತ್ಮ ವಿಕಾಸವಾಗುವ ಹಂತ ಹಂತದಲ್ಲಿ ವಿಜಯವನ್ನು ಸೂಚಿಸಿ ಆತ್ಮವಿಶ್ವಾಸ ಮೂಡಿಸುವ ಮೆಟ್ಟಲುಗಳು. ಯುಗಗಳು ಆತ್ಮವಿಕಾಸದ ಬದಲಾವಣೆಯ ಸ್ಥಲವಾದರೆ, ಶಿಕ್ಷೆ ಆಯಾ ಹಂತಗಳ ಸಾಧನೆಯ ಸಿದ್ಧಿಯ ನಿರ್ಣಾಯಕ ಘಟ್ಟಗಳಾಗಿ, ಶಿಷ್ಯನ ಆತ್ಮವಿಶ್ವಾಸ ಘಟ್ಟಿಗೊಂಡು ಸಾಧನೆ ಸಹಜವಾಗುತ್ತಿರುವ ಸೂಚಿಯಾಗುತ್ತದೆ. ಸಾಧನೆಗೆ ಬಲಾತ್ಕಾರವಿಲ್ಲ, ಒತ್ತಾಯವಿಲ್ಲ. ಸಾಧನೆಗೆ ಸಹಜವಾಗಿ ಅರಿವು ನೆಲೆಗೊಳ್ಳಬೇಕು, ಮೊಗ್ಗನ್ನು ಕಿತ್ತು ಮುಡಿದರೆ ಸುವಾಸನೆ ಬರದು. ಶಿಷ್ಯನಿಗೆ ಶಿಕ್ಷೆಯಿಂದ ಸಿದ್ಧಿ ಲಭಿಸುವುದು. ಅದು ಬರುವ ಕಾಲಕ್ಕೆ ಬಂದೇ ಬರುತ್ತದೆ. ಹೂವು ಹಣ್ಣು ಕಾಲವಶವಾಗಿರುವಂತೆ ಸಿದ್ಧಿ, ಸಾಧನೆಯ ವಶವಾಗಿರುತ್ತದೆ. ಆದರಿಂದ ಬರುವುದು ಕಾಯ ಸಮಾಧಿಯಲ್ಲ, ಜೀವ ಸಮಾಧಿಯಲ್ಲ, ಸಹಜ ಸಮಾಧಿ. ಸಾಯದೆ, ನೋಯದೆ ಸ್ವತಂತ್ರನಾಗುವ ಒಂದು ಸ್ಥಿತಿಯೇ ಅರಿವು ಸ್ವಯವಾಗುವುದರ ಲಕ್ಷಣ. ಅದು ತನ್ನಲ್ಲಿನ ಪರಿಮಳ ಅರಳಿದಂತೆ ಶಿಷ್ಯ ಮೊದಲು ಎಲ್ಲಿಂದ ಬಂದನೊ ಅಲ್ಲಿಗೇ ಹೋಗಿ ನಿತ್ಯನಾಗಿರುವುದು.

ಯುಗ ಕಿಂಚಿತ್ತಾಗುವ, ಶಿಷ್ಯ ಗುರುವಾಗುವ, ಮರೆವು ಅರಿವಾಗುವ, ಶಿಕ್ಷೆ ಅನುಗ್ರಹವಾಗುವ, ಅನಂತರ ಉಭಯ ನಷ್ಟವಾಗಿ ತಾನೆ ತಾನಾಗುವ ಸಾಧಕನ ಸಿದ್ಧಿ ಕಂಡು ಅಲ್ಲಮ ಬೆರಗಾಗುತ್ತಾನೆ. ಕಾಲದಲ್ಲಿ ಬದುಕಿ ಕಾಲವಶವಾಗುವ ಭಕ್ತ, ತನ್ನ ಅರಿವಿನಿಂದ ಕಾಲಾತೀತನಾಗುವುದಕ್ಕೆ ಅವಕಾಶ ಒದಗಿಸಿರುವ ಶಿವನ ಕಾಲದ ಕಟ್ಟಳೆ ಕಂಡು ಅಲ್ಲಮ ಬೆರಗಾಗುತ್ತಾನೆ. ಕತ್ತಲು ಕತ್ತಲನ್ನು ನಿವೃತ್ತಿ ಮಾಡಲಾರದು. ಆದರೆ ಕತ್ತಲಿನ ಬಸುರಿನ ಬೆಳಕು ವಿಕಾಸವಾಗಿ ಕತ್ತಲನ್ನು ನಿವಾರಣೆ ಮಾಡಬಲ್ಲದು. ಕಾಲ ಜೀವಿಯನ್ನು ನುಂಗುತ್ತದೆ. ಆದರೆ ಭಕ್ತನಲ್ಲಿನ ಅರಿವು ತನ್ನ ಬದುಕಿನ ಕಾಲವನ್ನೂ ನುಂಗುವುದಲ್ಲದೆ, ಯುಗದ ಕಾಲವನ್ನೂ (ಹರಿವಕಾಲ Time -Flow) ನುಂಗಿ ಕಾಲಾತೀತನಾಗುವುದು ವಿಸ್ಮಯವನ್ನು ತರುತ್ತದೆ. ಕಾಲದಿಂದಲೇ ಕಾಲವನ್ನು ಗೆಲ್ಲುವುದು, ಶರಣನ ಪ್ರಳಯದ ವಿಜಯವಾಗುತ್ತದೆ. ♦

3. ಶರಣರು-ಏಕಮುಖ ಚಿಂತಕರು

3-11-82 ರ ಪ್ರಪಂಚ ಸಂಚಿಕೆಯಲ್ಲಿ 'ಬಸವಣ್ಣ ಬಾಗೇವಾಡಿ ಬಿಟ್ಟಿದ್ದೇಕೆ? ವಾಲಿಕಾರರ ಹೊಸ ಸಂಶೋಧನೆ' ಎಂಬ ಶ್ರೀ ಎಸ್.ಜಿ. ಸ್ವಾಮಿಯವರ ಲೇಖನವೇ 5-9-82 ರ ಲಂಕೇಶ್ ಪತ್ರಿಕೆಯಲ್ಲಿ 'ವಾಲಿಕಾರರ ಸಂಶೋಧನೆಯ ವೈಖರಿ' ಎಂದು ಪ್ರಕಟನೆಗೊಂಡಿದೆ. 19-9-82ರ ಲಂಕೇಶ್ ಪತ್ರಿಕೆಯ 'ನಿರುತ್ತರ'ದಲ್ಲಿ ಡಾ|| ಎಂ. ಚಿದಾನಂದಮೂರ್ತಿಯವರು ವಾಲಿಕಾರರು ತಮ್ಮೊಂದಿಗೆ ಅದೇ ವಿಷಯವನ್ನು ಚರ್ಚಿಸಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಡಾ|| ಕಲ್ಬುರ್ಗಿಯವರು ಇದುವರೆವಿಗೂ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿಲ್ಲ. ಆದರೆ ಚನ್ನಣ್ಣ ವಾಲಿಕಾರರು ತರಗತಿಯಲ್ಲಿ ಹರಿಹರನ ಬಸವರಾಜ ದೇವರ ರಗಳೆಯನ್ನು ಪಾಠ ಹೇಳುವಾಗ ಇಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲವೇ, ಮೇಲ್ಕಂಡ ವಿದ್ವಾಂಸರೊಂದಿಗೆ ಎಂದು ಯಾವಾಗ ಚರ್ಚಿಸಿದ್ದರು ಎಂಬ ವಿವರಗಳ ಬಗ್ಗೆ ಬಾಯಿ ತೆರೆಯದೆ ತಟಸ್ಥವಾಗಿದ್ದು ಇಂಥ ಖಾಸಗಿ ಚರ್ಚೆಯನ್ನು ಎಲ್ಲಿಯೂ ದಾಖಲೆಗೊಳಿಸಿದಂತೆ ಕಂಡು ಬರುವುದಿಲ್ಲ. ಆದರೆ ಪ್ರಮುಖ ಶರಣರ ಬದುಕು ಹುಟ್ಟಿನಿಂದ ಹಿಡಿದು ದೀಕ್ಷೆಯನ್ನು ಒಳಗೊಂಡಂತೆ ಐಕ್ಯದವರೆವಿಗೂ ಸಮಸ್ಯೆ ಸುಳಿಗೆ ಸಿಕ್ಕಿ ಶರಣ ಸಾಹಿತ್ಯ ಅಧ್ಯಯನಾಕಾಂಕ್ಷಿಗಳಲ್ಲಿ ಅನೇಕ ಸಂಶಯಗಳು ತಲೆದೋರಿ ಪರಿಹಾರ ಸಿಗದೆ ಗೊಂದಲದಲ್ಲಿದ್ದಾರೆ. ಅಂಥ ಸಮಸ್ಯೆಗಳಲ್ಲಿ ಚನ್ನಬಸವಣ್ಣನ ಹುಟ್ಟಿನ ಸಮಸ್ಯೆ ಪ್ರಮುಖವಾದುದು. ಈಗಾಗಲೇ ಹಿಂದಿನ ಚಿಂತನಶೀಲ ಸಂವೇದನಾತ್ಮಕ ಮನೋಭಾವದ ಶರಣರು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಚನ್ನಬಸವಣ್ಣ ಶಿವನ ಪ್ರಸಾದದಿಂದ ಹುಟ್ಟಿದ, ಬಸವಣ್ಣನ ಪ್ರಸಾದದಿಂದ ಹುಟ್ಟಿದ, ಕಕ್ಕಯ್ಯನ ಪ್ರಸಾದದಿಂದ ಹುಟ್ಟಿದ-ಎಂಬಿವು ಪ್ರಸಾದವಾದದ ಸಿದ್ಧಾಂತಗಳಾದರೆ, ಮತ್ತೊಂದು 'ಶಿವಸ್ವಾಮಿ' ಯ ಮಗ ಚನ್ನಬಸವಣ್ಣ ಎಂಬ ಏಕೈಕ ಕವಿಯ ಸಿದ್ಧಾಂತವಿದೆ. ಈ ಸಿದ್ಧಾಂತಗಳು ಭಿನ್ನ ಭಿನ್ನ ಅಭಿಪ್ರಾಯಗಳನ್ನು ಸೂಚಿಸುತ್ತವೆ. ಈ ಭಿನ್ನಾಭಿಪ್ರಾಯಗಳೇ ಚನ್ನಬಸವಣ್ಣನ ಹುಟ್ಟಿನ ನಿಗೂಢತೆಗೆ ಸಾಕ್ಷಿಯಾಗಿವೆ. ಚನ್ನಬಸವಣ್ಣನವರ ಹುಟ್ಟಿನ ತೊಡಕಿನ ಸಮಸ್ಯೆ ಮೇಲು ನೋಟಕ್ಕೆ ಸರಳವಾಗಿ ಕಂಡರೂ, ಅತ್ಯಂತ ಸಂಕೀರ್ಣವಾಗಿದ್ದು ಅಂದಿನ ಅನೇಕ ಸಮಸ್ಯೆಗಳ ರಹಸ್ಯ ದಾಖಲೆಯ ಪೆಟ್ಟಿಗೆಗೆ ಒಂದು ಕೀಲಿಕೈ ಆಗಬಹುದೆಂಬುದು ಮುಖ್ಯವಾದುದು. ಕಕ್ಕಯ್ಯನ ಪ್ರಸಾದದಿಂದ ಹುಟ್ಟಿದ ಎಂಬ ಸಿದ್ಧಾಂತ ಚರ್ಚೆಗೆ ಬಂದಾಗ ಮಿಕ್ಕ ಸಿದ್ಧಾಂತ ಚರ್ಚೆಗಿಂತ ಭಿನ್ನವಾಗಿ ಭಾವೋದ್ರೇಕದ ಸೂಕ್ಷ್ಮ ವಾತಾವರಣ ಸೃಷ್ಟಿಗೆ ಕಾರಣವಾಗುತ್ತಿರುವುದು ಯಾವ ನಿಷ್ಪಕ್ಷಪಾತ ಮನೋಭಾವದ ಸಂಶೋಧಕನಿಗೂ ಆಶ್ಚರ್ಯವನ್ನು ಉಂಟುಮಾಡದೆ ಇರದು. ಚನ್ನಬಸವಣ್ಣ ಕಕ್ಕಯ್ಯನ ಪ್ರಸಾದಕ್ಕೆ ಹುಟ್ಟಿರಲಿ ಬಿಡಲಿ ಅದು ಅಮುಖ್ಯ. ಇರುವ ಆಧಾರಗಳು ಅದನ್ನು ನಿರ್ಣಯಿಸುತ್ತವೆ. ಆ ವಿಷಯ ಚರ್ಚೆಗೆ ಬಂದೊಡನೆ ತಡೆಯೊಡ್ಡಿ ಚಿಂತನೆಯನ್ನು ಮೊಟಕುಗೊಳಿಸುವ ಆಧುನಿಕ ಶರಣತತ್ತ್ವ ಚಿಂತಕರ ಮನೋಭಾವ, ಸಹೃದಯರಲ್ಲಿ ಚನ್ನಬಸವಣ್ಣನವರ ಹುಟ್ಟಿನ ನಿಗೂಢ ಸಮಸ್ಯೆ ಬಗ್ಗೆ ಮತ್ತೆ ಕುತೂಹಲವನ್ನು ಕೆರಳಿಸುತ್ತದೆ.

ಡಾ|| ಚಿದಾನಂದಮೂರ್ತಿಯವರು ('ನಿರುತ್ತರ'- ಲಂಕೇಶ್ ಪತ್ರಿಕೆ 19-9-82) "ಶ್ರೀ ವಾಲಿಕಾರ ಚನ್ನಣ್ಣ ಅವರು ಚನ್ನಬಸವಣ್ಣನ ಬಗ್ಗೆ ನನ್ನನ್ನು ಪ್ರಶ್ನಿಸಿದ್ದು ನಿಜ. ಅವನು ಡೋಹರ ಕಕ್ಕಯ್ಯನ ಮಗ ಎಂದು ಹೇಳಲು ಆಧಾರಗಳಿಲ್ಲವೆಂದೂ, ಅಷ್ಟೇ ಅಲ್ಲ, ಕೆಲವು ಸಾಕ್ಷಿಗಳು ಅಂತಹ ವಾದಕ್ಕೆ ವಿರೋಧವಾಗಿವೆಯೆಂದೂ ನಾನು ಅವರಿಗೆ ಹೇಳಿದ್ದೆ.... ಅವನ ತಾಯಿಯ ಹೆಸರನ್ನು ಉಳಿಸಿರುವ ಇತಿಹಾಸ ತಂದೆಯ ಹೆಸರನ್ನು ಮರೆ ಮಾಡಿದೆಯೆಂದೂ ನಾನು ಹೇಳಿದ್ದು ಜ್ಞಾಪಕ (ಅವನು ಒಬ್ಬ ಶರಣನಿಗೆ ಹುಟ್ಟಿದ ಎಂದು ನಾನು ಬಹುಶಃ ಹೇಳಿಲ್ಲ). ಆ ಕಾರಣ ಆ ತಂದೆ ಯಾರು ಎಂಬುದರ ಊಹೆ ಮಾಡುತ್ತ ಹೋಗುವುದು ವ್ಯರ್ಥವಾಗುತ್ತದೆ. ಈ ಬಗ್ಗೆ ಹೆಚ್ಚಿನ ಮಾತುಗಳನ್ನಾಡಲು ಸಮಸ್ಯೆಯ ಸೂಕ್ಷ್ಮತೆ ಅಡ್ಡಿ ಬರುತ್ತದೆ. ನನ್ನದೇ ಆದ ಕೆಲವು ತಾತ್ಕಾಲಿಕ ತೀರ್ಮಾನಗಳಿಗೆ ನಾನು ಬಂದಿರುವೆನಾದರೂ ಅವನ್ನು ಅವು ಸಾಕಷ್ಟು ಅಪಕ್ವವಾಗಿರುವುದರಿಂದ, ಬಹಿರಂಗಪಡಿಸಲಾರೆ. ಚನ್ನಬಸವಣ್ಣನ ಹುಟ್ಟಿನ ಚರ್ಚೆ ಅಸಮಾಧಾನವನ್ನು ಬಿಟ್ಟು ಬೇರೇನನ್ನೂ ಆಗಿಸುವುದಿಲ್ಲವಾದ್ದರಿಂದ ಅದನ್ನು ಕೈ ಬಿಡುವುದು ಮೇಲೆಂದು ನನ್ನ ಸ್ಪಷ್ಟ ಅಭಿಪ್ರಾಯ" ಎಂದು ಬರೆಯುತ್ತಾರೆ.

ನ್ಯಾಯ ನಿಷ್ಠುರಿಯೊಬ್ಬನನ್ನು ಪ್ರಶ್ನಿಸಲು ಕುತೂಹಲ ಕೆರಳಿಸಿ ಕೇಳುವ ಮೊದಲೇ ಬಾಯಿಗೆ ಬಟ್ಟೆ ತುರುಕಿ ನಿಸ್ಸಹಾಯಕನನ್ನಾಗಿಸಿ ಉತ್ತರಿಸಿದಂತಿದೆ. ಡಾ|| ಎಂ. ಚಿದಾನಂದಮೂರ್ತಿಯವರ 'ನಿರುತ್ತರ'. ಅದನ್ನು ಮೀರಿ ಚರ್ಚಿಸುವ ಅನ್ಯರಿಗೆ ಅಪಾಯದ ಸೂಚನೆಯ ಧ್ವನಿಯೂ ಇದೆ. ಹಾಗಾದರೆ "..... ಬಸವಣ್ಣ ಶಿವನೇ ದೈವ ಎಂದು ಒತ್ತಿ ಹೇಳಿ.... ತಲೆಯ ಮೇಲೆ ಮಲದ ಬುಟ್ಟಿ ಹೊರುವುದು ಇತ್ಯಾದಿ ಅನಾಗರಿಕ ಮತೀಯ ಆಚರಣೆಗಳು ತಾವಾಗಿ ಅಳಿಸಿ ಹೋದವು" (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ವಚನ ಸಾಹಿತ್ಯ-ಡಾ|| ಎಂ. ಚಿದಾನಂದಮೂರ್ತಿ, ಪುಟ 42) -ಆಧಾರ ಸೂಚಿಸದ ಇಂಥ ಮಾತಿಗೆ ಸಮಸ್ಯೆಯ ಸೂಕ್ಷ್ಮತೆ ಅಡ್ಡಿಬರದೆ, ಅಭಿಪ್ರಾಯ ಅಪಕ್ವವಾಗದೆ ಅದು ಸಾರ್ಥಕವಾಗುವುದಾದರೂ ಹೇಗೆ?

ಶ್ರೀ ಸಿ. ವೀರಣ್ಣನವರು ಹನ್ನೆರಡನೆಯ ಶತಮಾನದ **ಕಾಯಕ ಜೀವಿಗಳ ಚಳುವಳಿ** (1980)ಎಂಬ ಕೃತಿಯಲ್ಲಿ ಬಸವಣ್ಣ ಬಾಗೇವಾಡಿ ಬಿಡಲು ಒದಗಿದ ಸಂದರ್ಭ ಕುರಿತು "ಬಸವನ ತಂದೆ ಸತ್ತ ನಂತರ ಅವನು ಅನಾಥನಾಗಿದ್ದಾನೆ. ಮಹಾಜನಕ್ಕೆ ಮುಖ್ಯಸ್ಥನಾದವನ ಹಕ್ಕು ಬಾಧ್ಯತೆಗಳನ್ನು ಬಾಲಕನಾದ ಬಸವಣ್ಣನಿಂದ ಬೇರೆಯವರು ಕಿತ್ತುಕೊಂಡಿರಬೇಕು. ಬಸವಣ್ಣನಿಗೆ ಬ್ರಾಹ್ಮಣರು ಹೇಳುವುದೊಂದು ಮಾಡುವುದೊಂದರ ಪರಿಚಯ ತನ್ನ ಊರಿನಲ್ಲಿಯೇ ಆಗಿದೆ... ಇದರ ಜೊತೆಗೆ ತನ್ನ ಸೋದರಿ ಅಕ್ಕ ನಾಗಮ್ಮನನ್ನು ಆ ವಯಸ್ಸಿನಲ್ಲಿ ಕರೆದುಕೊಂಡು ಹೋಗುವಂತೆ ಮಾಡಿದ ಆ ಅಗ್ರಹಾರದ ಕ್ರೂರತನ ಅವನ ಮನಸ್ಸಿನಲ್ಲಿ ಅಚ್ಚಳಿಯದರತೆ ಉಳಿದಿರಬೇಕು. ಹೀಗೆ ಊರು ಬಿಟ್ಟು ಹೊರಟವನು ಕೂಡಲಸಂಗಮಕ್ಕೆ ಹೋಗಿದ್ದಾನೆ"

ಎಂದು ಹೇಳಿ, ಚನ್ನಬಸವಣ್ಣನ ಹುಟ್ಟಿನ ಬಗ್ಗೆ ಬರೆಯುತ್ತ "ಶೈವ ಮಠಗಳು ಕೆಲಸ ಮಾಡುತ್ತಿದ್ದ ರೀತಿ ನೀತಿಗಳಿಂದಲೂ ಪೇಚಿಗೆ ಸಿಕ್ಕಿ ಕೊಳ್ಳಬಹುದಾದ ಒಂದು ಘಟನೆಯಿಂದಾಗಿಯೂ ಬಸವ ಹೊಟ್ಟೆಪಾಡನ್ನು ಹುಡುಕುತ್ತ ಹೊರಟಿರಬೇಕು... ಅದು ಮತ್ತೇನೂ ಆಗಿರದೆ ಚನ್ನಬಸವಣ್ಣನ ಹುಟ್ಟಿಗೆ ಕಾರಣವಾದದ್ದು. ಚನ್ನಬಸವಣ್ಣನು ಕಕ್ಕಯ್ಯನ ಪ್ರಸಾದದಿಂದ ಹುಟ್ಟಿದ ಇದೇ ಮೊದಲಾದ ಪೌರಾಣಿಕ ಮಾತುಗಳಿಗೆ ಎಷ್ಟು ಅರ್ಥವಿದೆ ಎಂದು ನಮಗೆಲ್ಲ ಗೊತ್ತಿರುವ ವಿಚಾರವೆ? ಚನ್ನಬಸವಣ್ಣ ತಂದೆ ಇಲ್ಲದೆ ಹುಟ್ಟಿದ್ದಕ್ಕೆ ಕೂಡಲ ಸಂಗಮ ಮಠವೇ ಒಂದಲ್ಲ ಒಂದು ರೀತಿಯಲ್ಲಿ ಕಾರಣವೆಂದು ಊಹಿಸಲು ತಪ್ಪಾಗಲಾರದು" ಎಂದಿದ್ದಾರೆ. ಅಲ್ಲದೆ ಅದೇ ಪುಸ್ತಕದ 'ನನ್ನ ಮಾತು' ಎಂಬಲ್ಲಿ ಶ್ರೀ ಸಿ. ವೀರಣ್ಣನವರು " ನಾನು ಈ ಕೃತಿಯನ್ನು ಬರೆಯಬೇಕೆಂದು ಸಂಕಲ್ಪಿಸಿಕೊಂಡು ಕೆಲಸ ಮಾಡಲು ತೊಡಗಿದಾಗಿನಿಂದ ದೊರೆತ ಪ್ರತಿ ಅಂಶವನ್ನು ನನ್ನೊಂದಿಗೆ ಸಹೃದಯತೆಯಿಂದ ಚರ್ಚಿಸಿ, ಅನೇಕ ಉತ್ತಮ ಸಲಹೆಗಳನ್ನು ಇತ್ತದಲ್ಲದೆ, ಈ ಕೃತಿಯ ಮುನ್ನುಡಿಯನ್ನು ಬರೆದುಕೊಟ್ಟಿರುವ ಹಿರಿಯರಾದ ಡಾ|| ಚಿದಾನಂದಮೂರ್ತಿಯವರಿಗೆ ನಾನು ಕೃತಜ್ಞನಾಗಿದ್ದೇನೆ" ಎಂದಿದ್ದಾರೆ. ಅದೇ ಗ್ರಂಥಕ್ಕೆ ಮುನ್ನುಡಿ ಬರೆಯುತ್ತಾ ಡಾ|| ಚಿದಾನಂದಮೂರ್ತಿಯವರು "ಅಲ್ಲಲ್ಲಿ ಬರುವ ಕೆಲವು ವಿವರಗಳ ಐತಿಹಾಸಿಕತೆಯನ್ನು ಪ್ರಶ್ನಿಸುವ ಮನಸ್ಸಾಗುತ್ತದೆಯಾದರೂ (ಉದಾ: ಬಸವಣ್ಣ ತನ್ನ ಹುಟ್ಟೂರನ್ನು ತ್ಯಜಿಸಲು ಒದಗಿಬಂದ ಒತ್ತಡ) ಒಟ್ಟು ಪುಸ್ತಕದ ನಿಲುವು ಗಂಭೀರ ಚಿಂತನೆಗೆ ಯೋಗ್ಯವಾದುದು ಎಂಬ ಮಾತನ್ನು ಪುನರುಚ್ಚರಿಸುತ್ತೇನೆ" ಎಂದಿದ್ದಾರೆ. ಡಾ|| ಎಂ.ಚಿದಾನಂದ ಮೂರ್ತಿಯವರು ಅದೇ ಕೃತಿಯ ತಮ್ಮ ಮುನ್ನುಡಿಯಲ್ಲಿ ಮೇಲೆ ಉದ್ಧರಿಸಿದ ಚನ್ನಬಸವಣ್ಣನವರ ಹುಟ್ಟಿನ ವಿಷಯವನ್ನು ಅಂದೇ ಆಧಾರವಿಲ್ಲವೆಂದು ಪ್ರಶ್ನಿಸುವುದಕ್ಕಾಗಲಿ, ನಿರಾಕರಿಸುವುದಕ್ಕಾಗಲಿ ಹೋಗಿಲ್ಲ. ಅಂದ ಮೇಲೆ ಅದು ಗಂಭೀರ ಚಿಂತನೆಗೆ ಯೋಗ್ಯ ಎಂದು ಅಭಿಪ್ರಾಯವನ್ನು ಒಪ್ಪಿದಂತೆ ಕಾಣುತ್ತದೆ. ಆದರೆ ಅದೇ ಸಮಸ್ಯೆ ಇಂದು ಚರ್ಚೆಗೆ ಸೂಕ್ಷ್ಮವಾಗಿ ಅಡ್ಡಿ ಬರುವುದೆಂದು ಹೇಳುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಅಂದರೆ ಚನ್ನಬಸವಣ್ಣನ ಹುಟ್ಟಿದ ವಿಷಯ ದಾಖಲೆಗೊಂಡಾಗ ಸೂಕ್ಷ್ಮವಾಗದೆ, ತರಗತಿಯಲ್ಲಿ ಪಾಠ ಹೇಳುವಾಗ ಹೇಳಿದರಾಗಲಿ, ಖಾಸಗಿಯಾಗಿ ಚರ್ಚಿಸಿದರಾಗಲಿ ಸೂಕ್ಷ್ಮವಾಗುತ್ತದೆಯೇ? ಅಥವಾ ಶ್ರೀ ಸಿ. ವೀರಣ್ಣನವರು ಬರೆದಾಗ ಸೂಕ್ಷ್ಮವಾಗಿ ಅಸಮಾಧಾನ ತರದೆ, ಶ್ರೀ ಚನ್ನಣ್ಣವಾಲಿಕಾರರು ಹೇಳಿದಾಗ, ಅದೂ ಖಾಸಗಿಯಾಗಿ, ಸೂಕ್ಷ್ಮವಾಗಿ ಅಸಮಾಧಾನ ತರುವುದರ ರಹಸ್ಯವಾದರೂ ಏನು?

ಬಸವಣ್ಣನವರ "ಚನ್ನಯ್ಯನ ಮನೆಯ ದಾಸಿಯ ಮಗನು। ಕಕ್ಕಯ್ಯನ ಮನೆಯ ದಾಸಿಯ ಮಗಳು। ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು। ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮ ಸಾಕ್ಷಿಯಾಗಿ" ಎಂಬ ಮಾತಾಗಲಿ,

ಚನ್ನಬಸವಣ್ಣನವರ "ಬೀದಿಯ ಬಸವಂಗೆ ದೇಗುಲದ ಪಶುವಿಂಗೆ ಹುಟ್ಟಿದ। ಹೋರಿಗಳೆಲ್ಲ ಬಸವಗಳಪ್ಪುವೆ ಲಿಂಗ ಮುದ್ರೆಯನ್ನೊತ್ತದನ್ನಕ್ಕ। ಭಕ್ತಂಗೆಯೂ ಭಕ್ತಗೆಯೂ ಹುಟ್ಟಿದವೆಂದೆಡೆ। ಗುರುಕಾರುಣ್ಯದಿಂದ ಲಿಂಗ ಧಾರಣೆವಿಲ್ಲದಿದ್ದಡೆ ಭಕ್ತರಪ್ಪರೆ? ಅವರನೊಳಗಿಟ್ಟುಕೊಂಡು ನಡೆವರೆ ಭಕ್ತಿ ಹೀನರೆನಿಸಿತ್ತು। ಕೂಡಲ ಸಂಗಮದೇವರ ರಚನೆ" ಎಂಬ ಮಾತನ್ನೂ ಪರಿಶೀಲಿಸಿದರೆ ಶರಣರ ಇಂಥ ಮಾತುಗಳು ಸೂಕ್ಷ್ಮವಾಗಿ ಭಕ್ತರಿಗೆ ಅಸಮಾಧಾನವನ್ನು ತಂದಿಲ್ಲವೆ? ಅನೈತಿಕ ಸಂಬಂಧದಿಂದಲೂ ಹುಟ್ಟಿದ ಜೀವಿ ಲಿಂಗಧಾರಣೆಯಿಂದ ನೈತಿಕ ನೆಲೆಯನ್ನು ಪಡೆಯುತ್ತದೆ ಎಂದು ಚನ್ನಬಸವಣ್ಣನವರೇ ಹೇಳಿರುವಾಗ ಅವರ ಹುಟ್ಟಿನ ಸಮಸ್ಯೆ ಮುಕ್ತ ಚರ್ಚೆಯಲ್ಲಿ ಸೂಕ್ಷ್ಮವಾಗಿ ಅಡ್ಡಿ ಬಂದು ಅಸಮಾಧಾನ ತರುವುದಾದರೂ ಹೇಗೆ? ಚರ್ಚೆಗೆ ಅವಕಾಶ ಕೊಡದಿದ್ದರೆ ವರ್ಣಾಶ್ರಮ ಧರ್ಮಕ್ಕೂ, ವೀರಶೈವ ಧರ್ಮಕ್ಕೂ ವ್ಯತ್ಯಾಸವಾದರೂ ಏನು?

ವ್ಯಾಸ, ಮಾರ್ಕಂಡೇಯ, ಅಗಸ್ತ್ಯ, ಕೌಂಡಿನ್ಯ ಮುಂತಾದ ಋಷಿಗಳ ಹುಟ್ಟನ್ನು ನಿರ್ಭಯವಾಗಿ ಪ್ರಶ್ನಿಸುವ ಶರಣರೇ ಏಕೆ ಶರಣರ ಹುಟ್ಟನ್ನು ಮುಕ್ತ ಚರ್ಚೆಗೆ ಒಡ್ಡಲು ಹಿಂಜರಿಯುತ್ತಾರೆ? ಅಂದರೆ ಅನ್ಯನಿಂದೆ, ಆತ್ಮಸ್ತುತಿ, ನಡೆ ನುಡಿ ಸಿದ್ಧಾಂತದ ಮೂಲ ತತ್ವವೇ?

ಪಂಚಾಚಾರ್ಯರು ಬಸವಜಯಂತಿಯನ್ನೂ, ಬಸವ ಪಂಥದವರೂ ಮಾದಾರ ಚನ್ನಯ್ಯ, ದೇವರ ದಾಸಿಮಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ, ಸಿದ್ಧರಾಮ ಮುಂತಾದ ಶರಣರ ಜಯಂತಿಯನ್ನು ಆಚರಿಸುವುದಿಲ್ಲ. ಆಯಾ ಒಳ ಪಂಗಡದವರೇ ಆಯಾ ಜಾತಿಯ ಮುಖ್ಯಸ್ಥ ಶರಣರ ಜಯಂತಿಯನ್ನು ಆಚರಿಸಲು ಕಾರಣವೇನು? ಶರಣ ವಿದ್ವಾಂಸರು, ಸಂಶೋಧಕರು ಇಂಥ ಸತ್ಯವನ್ನು ಒಪ್ಪಲು ಸಿದ್ಧರಿಲ್ಲದಿದ್ದರೂ ಇರುವ ಆಚರಣೆಯನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ. ಅನುಭವ ಮಂಟಪಕ್ಕೆ ಅಧ್ಯಕ್ಷನಾಗಿದ್ದು, ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಶರಣರ ದೋಷವನ್ನು ತಿದ್ದಿ ದೊಡ್ಡ ಅನುಭಾವಿಯಾಗಿದ್ದ ಅಲ್ಲಮನ ಜಯಂತಿಯನ್ನು ಎಷ್ಟು ಪಂಗಡದವರು ಆಚರಿಸುತ್ತಿದ್ದಾರೆ? ಇತರ ಶರಣರಂತೆ ಅಲ್ಲಮನ ಶತಮಾನೋತ್ಸವವನ್ನು ಸರ್ವ ಪಂಗಡದವರು ಅದ್ದೂರಿಯಿಂದ ಆಚರಿಸದಿರಲು ಕಾರಣವೇನು? ಸ್ಥಾವರ ವಿರೋಧಿ ಶರಣರ ಸ್ಥಾವರ ಅಸ್ತಿತ್ವಕ್ಕೆ ಬಂದು, ಅಲ್ಲಮನ ಹೆಸರಿನ ಸ್ಥಾವರಗಳು ಅಸ್ತಿತ್ವಕ್ಕೆ ಬರದಿರಲು ಕಾರಣವೇನು? ಆಧಾರ ಸಿಕ್ಕದ ಆದರೆ ಆಚರಣೆಯಲ್ಲಿರುವ ಇಂಥ ಅನೇಕ ಸಮಸ್ಯೆಗಳು ಸೂಕ್ಷ್ಮವಾಗಿಲ್ಲ ಏಕೆ? ಈ ಹಿನ್ನೆಲೆಯಲ್ಲಿ ಹುಟ್ಟಿನ ಮಹತ್ವದ ಸಿದ್ಧಾಂತವನ್ನು ವಿರೋಧಿಸಿದ ಶರಣರೇ ಹುಟ್ಟಿನ ಮಹತ್ವದ ತತ್ವಕ್ಕೆ ಜೋತು ಬಿದ್ದಿದ್ದೇ ಸಮಸ್ಯೆ ಸೂಕ್ಷ್ಮವಾಗುತ್ತಿರುವುವರ ದುರಂತ ಎನ್ನಿಸದೆ?

ಹಚ್ಚಿದ ಸಿಡಿಮದ್ದನ್ನು ಮಡಿಲಲ್ಲಿ ಕಟ್ಟಿಕೊಂಡೇ ಮತ್ತೊಂದು ಗೂಡಾರಕ್ಕೆ ಸಿಡಿಮದ್ದು ಹಚ್ಚುವ ಸಾಹಸವೇ ಶರಣರ ಚಳುವಳಿ. ಶಿವಭಕ್ತರ ಕುಲ ಒಂದೇ ಎಂದು ಸಾರಿದರೂ ಸಮಾನತೆಯ ಮೇಲೆ ವೀರಶೈವ ಸಮಾಜ ರೂಪುಗೊಳ್ಳಲಿಲ್ಲ. ಆತ್ಮದ ವಿಷಯದಲ್ಲಿ ಸಮಾನತೆಯನ್ನು ಸಾರಿತೇ ಹೊರತು ಸಾಮಾಜಿಕ ಸಮಾನತೆಗೆ ಎಂದೂ ಹೋರಾಡಲಿಲ್ಲ. ಕೆಳ ವರ್ಗದವರ ಸಂಸ್ಕೃತಿಯನ್ನು ನಾಶ ಮಾಡುವುದಕ್ಕಾಗಿಯೇ, ಅನ್ಯದೇವರನ್ನು ಹಾದರ, ಪರಿವಾರ ದೇವತೆ ಎಂದು ಕರೆದು, ಏಕ ದೇವತೋಪಾಸನೆಯನ್ನು ಸಾಮಾನ್ಯರಿಗೆ ಬೋಧಿಸಿತು. ಇದು ರಾಜಕೀಯವಾಗಿ ಒಬ್ಬ ಸರ್ವಾಧಿಕಾರಿಯನ್ನು ನಾಯಕನನ್ನಾಗಿ ಒಪ್ಪಿಕೊಳ್ಳುವಂತೆ ಒತ್ತಾಯಿಸುವ ತತ್ವಕ್ಕಿಂತ ಭಿನ್ನವಾದುದಲ್ಲ. ಜಾತ್ಯಾತೀತ ಸಂಘಟನೆಯ ಹೆಸರಿನಲ್ಲಿ ಜಾತಿ ಜಾತಿಗಳನ್ನು ಒಡೆದು ದುರ್ಬಲಗೊಳಿಸಿ, ಮುಂದೆಂದೂ ಕೆಳ ವರ್ಗದವರು ತಲೆ ಎತ್ತದಂತೆ ಮಾಡಿ, ಪುರೋಹಿತ ರಹಿತ ಕೆಳವರ್ಗದ ಸಮಾಜವನ್ನು ಜಂಗಮ ಪುರೋಹಿತ ಸರ್ವಾಧಿಕಾರದ ಒಡೆತನಕ್ಕೆ ಒಳಗುಮಾಡಿತು.

ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನದ ಸಾಧನೆ ಸಂಚಿಕೆ 3. ಸಂಪುಟ 11, ಜುಲೈ-ಸೆಪ್ಟೆಂಬರ್ 1982 ರಲ್ಲಿ 'ಚನ್ನಬಸವಣ್ಣನ ತಾಯಿ ಅಕ್ಕನಾಗಮ್ಮನ ಬಗ್ಗೆ ಒಂದು ಚರ್ಚೆ' ಎಂಬ ಲೇಖನ ಪ್ರಕಟವಾಗಿದೆ. ಅದರಲ್ಲಿ ಬಸವಣ್ಣನವರಿಗೆ ಸಂಬಂಧಿಸಿದ ಒಂದು ಶಾಸನಕ್ಕೂ ಮತ್ತು ಕಾವ್ಯಗಳಲ್ಲಿ ಬರುವ ಬಸವಣ್ಣನವರ ಕುಟುಂಬಕ್ಕೆ ಸಂಬಂಧಿಸಿದ ವಿಷಯಕ್ಕೂ ಗಂಟು ಹಾಕಿ ಲೇಖಕರು 'ಊಹೆ'ಯ ಬಲದಿಂದ ಚನ್ನಬಸವಣ್ಣನ ಹುಟ್ಟಿನ ಸಮಸ್ಯೆಯನ್ನು ಬಿಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಆ ಲೇಖಕರು ತಾಯಿ ಅಕ್ಕನಾಗಮ್ಮನಿಗೆ ಮದುವೆ ಮಾಡಿಸಿ, ವಿಧವೆಯನ್ನಾಗಿಸಿದರೂ, ತಂದೆಯನ್ನು ಮಾತ್ರ ಗುರುತಿಸದೆ ವಿಫಲರಾಗಿದ್ದಾರೆ. ಆದರೆ ಕಕ್ಕಯ್ಯನ ಪ್ರಸಾದದ ಹುಟ್ಟಿನ ಸಿದ್ಧಾಂತವನ್ನು ನಿರಾಕರಿಸುವ ಪೂರ್ವ ತಳಹದಿಯನ್ನಾಗಿ ಶಾಸನವನ್ನು ಬಳಸಿಕೊಂಡಿದ್ದಾರೆ. ಅಲ್ಲದೆ ಇಳಿವಯಸ್ಸನ್ನು ಆಧಾರವಾಗಿ ಪರಿಗಣಿಸಿ ಕಕ್ಕಯ್ಯನ ಪ್ರಸಾದದ ಸಿದ್ಧಾಂತವನ್ನು ತಿರಸ್ಕರಿಸುತ್ತಾರೆ. ಕಕ್ಕಯ್ಯನ ಇಳಿವಯಸ್ಸಿನಲ್ಲಿ ಅದೂ ವಯಸ್ಸಾದ ಅಕ್ಕನಾಗಮ್ಮನವರಿಗೆ ಮಕ್ಕಳಾಗಲು ಸಾಧ್ಯವೆ ಎನ್ನುತ್ತಾರೆ. ವಯಸ್ಸಿನ ವಿಷಯವಾಗಿ ಶರಣ ಸಾಹಿತ್ಯಾಭಿಮಾನಿಗಳಲ್ಲಿ ಸಂಶಯ ತಲೆದೋರುತ್ತದೆ. ಸಿದ್ಧರಾಮನ ಹುಟ್ಟಿನ ಸಂದರ್ಭವನ್ನು ಲೇಖಕರು ಏಕೆ ಮರೆಯುತ್ತಾರೆ ಎನ್ನಿಸುತ್ತದೆ. ಶ್ರೀ ಎಂ.ಬಿ.ಕೊಟ್ರಶೆಟ್ಟಿ ಅವರು "ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾಗಿದ್ದ ರೇವಣಾಚಾರ್ಯರು, ಸಿದ್ಧರಾಮನ ಜನನ ಪೂರ್ವದಲ್ಲಿ ಸೊನ್ನಲಿಗೆಗೆ ಬಂದು ಸುಗ್ಗವ್ವೆಯ ಗರ್ಭವನ್ನು ಮುಟ್ಟಿ, ಸಿದ್ಧ ಶಿಶುವಿನ ಜನನದ ಸೂಚನೆಯನ್ನು ಕೊಡುತ್ತಾರೆ. ತನ್ನಂತಹ ವೃದ್ಧೆಗೆ ಮಗು ಜನಿಸುವುದೆಂತು? ಎಂದು ಸುಗ್ಗವ್ವೆ ವಿಸ್ಮಯಪಟ್ಟರೆ, ಅಪ್ರತಿಮ ಶಿವಯೋಗಿಯಾಗುವ ವ್ಯಕ್ತಿ, ಹಲವು ವಿಕಾರಗಳ ಬೀಡಾದ ಯೌವನದಲ್ಲಿ ಜನಿಸಲಾರನೆಂದೂ ವಿಕಾರ ರಹಿತವಾದ ಮುಪ್ಪೇ ಸಿದ್ಧನ ಜನನಕ್ಕೆ ತಕ್ಕ

ಕ್ಷೇತ್ರವೆಂದೂ ರೇವಣಾಚಾರ್ಯರು ಸಮಾಧಾನ ಹೇಳಿ, ಆಕೆಯ ವಿಸ್ಮಯವನ್ನು ದೂರೀಕರಿಸುವರು" (ಸಿದ್ಧರಾಮ ಶಿವಯೋಗಿ-ಪುಟ 75) ಎನ್ನುತ್ತಾರೆ.[1] ಇಳಿವಯಸ್ಸಿನ ಆಧಾರ ಚನ್ನಬಸವಣ್ಣನ ಹುಟ್ಟಿನ ಸಿದ್ಧಾಂತ ವಿಚಾರ ವಾದದಲ್ಲಿ ನಿರಾಕರಿಸಲ್ಪಟ್ಟು, ಸಿದ್ಧರಾಮನ ಪವಾಡದ ವಾದದಲ್ಲಿ ಸಮರ್ಥಿತವಾಗುವ ಔಚಿತ್ಯವಾದರೂ ಏನು? ಇದು ಆಳವಾದ ಅಧ್ಯಯನದ ಫಲದ ಸಂಶೋಧನೆಯೆ? ವಿಮರ್ಶಕರಿಗೆ ಆರೋಗ್ಯಕರ ಮನಸ್ಸು ಅಗತ್ಯ ಎನ್ನುತ್ತಾರೆ. ಅಂದರೆ ಅನುಕೂಲಕರ ಮನಸ್ಸಾದರೆ ಆರೋಗ್ಯಕರ ಮನಸ್ಸಿನ ಸೂತ್ರವೇ?

ಅದೇ ಲೇಖನದಲ್ಲಿ ಲೇಖಕರು ಇತ್ತೀಚಿನ ಮಲಿನರು ಐತಿಹಾಸಿಕ ಪಾತ್ರಗಳ ಮೇಲೆ ತಮ್ಮ ಮಲಿನತೆಯನ್ನು ಆರೋಪಿಸುವರು ಎಂದು ದೂಷಿಸುತ್ತಾರೆ. ಶರಣರು ಐತಿಹಾಸಿಕ ವ್ಯಕ್ತಿಗಳೊ ಅಥವಾ ಐತಿಹಾಸಿಕ ಪಾತ್ರಗಳೊ ಎಂಬುದನ್ನು ಲೇಖಕರು ಅಧ್ಯಯನ ಮಾಡಿ ಸ್ಪಷ್ಟಪಡಿಸಲಿ. ಶರಣರು ಐತಿಹಾಸಿಕ ವ್ಯಕ್ತಿಗಳಾಗಿದ್ದು ಐತಿಹಾಸಿಕ ಪಾತ್ರವಾಗಿದ್ದಾರೊ ಅಥವಾ ಐತಿಹಾಸಿಕ ಪಾತ್ರಗಳಿಗೆ ಶರಣರ ವ್ಯಕ್ತಿತ್ವ ಬಂದಿದೆಯೊ, ಇಲ್ಲವೆ ಪುರಾಣ ವ್ಯಕ್ತಿತ್ವದ ಬಣ್ಣ ಎಂದು ಬಂದಿತು ಎಂಬ ಚಾರಿತ್ರಿಕ ಸತ್ಯವನ್ನು ಗುರುತಿಸುವ ಸಾಚಾತನ ವ್ಯಕ್ತವಾಗಲಿ. ಅಂತೂ ಏಕಮುಖಿ ಸಾಹಿತ್ಯ ಸೃಷ್ಟಿ, ಏಕಮುಖಿ ಸಾಹಿತ್ಯಾರಾಧನೆ, ಏಕಮುಖಿ ಸಾಹಿತ್ಯ ಸಂಶೋಧನೆ ಮತ್ತು ಏಕಮುಖಿ ಸಾಹಿತ್ಯ ವಿಮರ್ಶೆಯ ಕ್ಷೇತ್ರಕ್ಕೆ 'ಸೂಕ್ಷ್ಮತೆ ಅಡ್ಡಿ ಬರುತ್ತದೆ', 'ಚರ್ಚೆ ಅಸಮಾಧಾನವನ್ನು ಬಿಟ್ಟು ಬೇರೇನನ್ನೂ ಆಗಿಸುವುದಿಲ್ಲ', ಇದು 'ನನ್ನ ಸ್ಪಷ್ಟ ಅಭಿಪ್ರಾಯ', 'ಆರೋಗ್ಯಕರವಾಗಿ', 'ಇವತ್ತು ಮಲಿನರಾಗಿದ್ದ', 'ದೃಷ್ಟಿ ದೋಷ'- ಮುಂತಾದ ಪದಗಳು ಏಕಮುಖಿ ಚಿಂತಕ ಶರಣರ ಅಪೂರ್ವ ಕೊಡಿಗೆಗಳೇ ಸರಿ.

[1]ಎನ್ನ ಹರೆಯಂ ಬಿಟ್ಟು ಜರೆವಟ್ಟು ಹೊಲೆಗೆಟ್ಟು
ಕೆನ್ನೆ ನರೆದೊಟ್ಟು ಶಿಥಿಲತ್ವವಳವಟ್ಟು ನೆರೆ
ಮುನ್ನಿನಂಗವಿಕಾರಮಂ ಬಿಟ್ಟುಹೋಗಿ ಧಾತುಗಳು ಪಲ್ಲಟವಾದವು।
ಇನ್ನು ನಾನೆತ್ತ ಮಗನಂ ಹಡೆವುದೆತ್ತಲಾ
ತನ್ನೆರೆದು ಕುಲವಳಿದು ಯೋಗಿಯಹುದೆತ್ತ ಲೋ
ಕಂ ನಗುವ ಮಾತನಾಡಿದಿರಿ ಹುಟ್ಟುವಡೆ ಹುಟ್ಟನೆ ಹಿಂದೆ ಹೇಳೆಂದಳು॥

ಸಿ.ಚ.ಸಂ.೧-೨೪ ♦

4. ವೀರಶೈವ ಧರ್ಮ ಮತ್ತು ಕನ್ನಡ ಸಾಹಿತ್ಯ

ಭಾರತದಲ್ಲಿ ಕಾಲಕಾಲಕ್ಕೆ ಸಂಪ್ರದಾಯ, ಸುಧಾರಿತ ಅಥವಾ ವಿರೋಧಿ ಮತಗಳಲ್ಲಿಯೇ ಪರಸ್ಪರ ಕ್ರಿಯೆ ಪ್ರತಿಕ್ರಿಯೆಯಾಗಿ ಅಂತ್ಯದಲ್ಲಿ ವರ್ಣ ಮತ್ತು ಜಾತಿಯ ತಿರುಗಣೆಯ ಮೇಲೆ ನಿಂತು ರೂಪಾಂತರಗೊಂಡವು. ಶಾಸ್ತ್ರಾರ್ಥವೋ, ವಾಗ್ವಾದವೋ, ತಂತ್ರ ಕುತಂತ್ರ ತರ್ಕವೋ, ಅಧಿಕಾರ ಅಥವಾ ಹಣ ಬಳಕೆಯೋ-ಒಟ್ಟಿನಲ್ಲಿ ಬುದ್ಧಿ ಮತ್ತು ಬಾಹುಬಲದ ಬೆಂಬಲದಿಂದ ತಮ್ಮ ತಮ್ಮ ಮತದ ಅಸ್ತಿತ್ವವನ್ನು ಆಳವಾಗಿ ಬೇರೂರಿಸಿಕೊಂಡು ಪ್ರತಿಷ್ಠಿತವಾಗಿರುವುದು ಇತಿಹಾಸ ಸ್ಪಷ್ಟ. ಅನ್ಯಮತ ಖಂಡನೆ, ಸ್ವಮತ ಸಮರ್ಥನೆಯ ದ್ವೇಷಾಸೂಯೆಯಿಂದ ಕೂಡಿದ ಸಂಕುಚಿತ ತಳಪಾಯದ ಮೇಲೆ ಕಟ್ಟಲ್ಪಟ್ಟ ವಿವಿಧ ಪಂಥಗಳೇ ಕ್ರಮೇಣ ಬದಲಾದ ಸಮಾಜದಲ್ಲಿ ಜಾತ್ಯಾತೀತ ವಿಶ್ವ ತತ್ವ ಬೋಧಿಸಲು ಪರಸ್ಪರ ಸ್ಪರ್ಧಿಸುತ್ತಿದ್ದು, ಜಾತಿ ನಿಷ್ಠ ಮತಗಳೇ ಕ್ರಮೇಣ ಜಾತ್ಯಾತೀತವಾಗುತ್ತಿರುವುದು, ಬೆಕ್ಕಿನ ಸನ್ಯಾಸ ದೀಕ್ಷೆಯನ್ನು ನೆನಪಿಗೆ ತರುತ್ತದೆ. ಧಾರ್ಮಿಕ ಇತಿಹಾಸ ಸೃಷ್ಟಿಯ, ದೇವರು-ಭಕ್ತ, ಒಡೆಯ-ಸೇವಕ, ಶ್ರೀಮಂತ-ಬಡವ, ಮೇಲು-ಕೀಳು, ಅಕ್ಷರಸ್ಥ-ಅನಕ್ಷರಸ್ಥ, ಆಸ್ತಿಕ-ನಾಸ್ತಿಕ-ಈ ವೈರುಧ್ಯಗಳಲ್ಲಿ ದೇವರು, ಒಡೆಯ, ಶ್ರೀಮಂತ, ಮೇಲು, ಅಕ್ಷರಸ್ಥ-ಈ ಸಂಘಟಿತ ಅಲ್ಪ ಸಂಖ್ಯಾತ ಉಚ್ಚವರ್ಗದ ಘಟಕ ಲೋಕ ನಿಯಂತ್ರಣದ ಸೂತ್ರ ಹಿಡಿದು ಸರ್ವಾಧಿಕಾರತ್ವ ಮೆರೆಯಿತು. ಅಂಥ ದಬ್ಬಾಳಿಕೆ ಕ್ರಮೇಣ ಭಕ್ತ, ಸೇವಕ, ಬಡವ, ಕೀಳು, ಅನಕ್ಷರಸ್ಥ-ಈ ಅಸಂಘಟಿತ ಬಹು ಸಂಖ್ಯಾತ ವರ್ಗದ ಆಕ್ರೋಶಕ್ಕೆ ಸಿಕ್ಕಿಯೂ, ಬದಲಾದ ಸಮಾಜದಲ್ಲಿ, ಉಚ್ಚವರ್ಗದ ರೂಪಾಂತರದ ಸೋಗಿನ ಬದುಕಿನಿಂದಾಗಿ, ಹಿಂದಿನಿಂದಲೂ ಹೆಚ್ಚು ಕಷ್ಟ ನಷ್ಟಗಳಿಗೆ ತುತ್ತಾದವರು ಬಹು ಸಂಖ್ಯಾತ ಕೆಳ ವರ್ಗದವರೇ ಎಂಬ ಸತ್ಯದತ್ತ ಕುರುಡಾಗಿರುವ ಗ್ರಂಥರಾಶಿಯ ವಸ್ತುನಿಷ್ಠ ಸತ್ಯದ ಪ್ರತಿಪಾದನೆಯ ಅತ್ಯಗತ್ಯದ ಮಹತ್ವ ಎಷ್ಟೆಂದು ಹೇಳಬರದು. ಇಂಥ ಪ್ರಯತ್ನಗಳು ಒಂಟಿ ದನಿಯಾಗಿ, ಮಾಧ್ಯಮದ ಮೇಲೆ ಹಿಡಿತ ಸಾಧಿಸಿರುವ ಪ್ರತಿಷ್ಠಿತ ಗುಂಪಿನ ಗದ್ದಲದ ನಡುವೆ ಕರಗಿ ಹೋಗುವ ಅಪಾಯವಿದ್ದರೂ, ವ್ಯರ್ಥವಾಗದೆ ಒಂದು ಚಾರಿತ್ರಿಕ ದಾಖಲೆಯಾಗುವುದರಲ್ಲಿ ಸಂಶಯವಿಲ್ಲ.

ಬದಲಾದ ಸಮಾಜದಲ್ಲಿ, ಕುಲ ಮತ್ತು ಕುಟುಂಬದಲ್ಲಿ ಜಾತಿನಿಷ್ಠನಾಗಿ, ಸಾರ್ವತ್ರಿಕ ಜೀವನದಲ್ಲಿ ಜಾತ್ಯಾತೀತನಾಗುವ ಪರಿಸರದ ಇಬ್ಬಂದಿತನಕ್ಕೆ ಸಿಕ್ಕಿ ವ್ಯಕ್ತಿ, ಮೌಲ್ಯಚ್ಛೇದನದಿಂದ ಪರಕೀಯನಾದ, ಸೃಜನಶೀಲ ಬದುಕು ಅವನಿಗೆ ಸವಾಲನ್ನು ಒಡ್ಡುತ್ತಲೇ ಬಂದಿತು. ಅದರಿಂದ ನುಣುಚಿಕೊಳ್ಳಲು ವ್ಯಕ್ತಿ ಸಂಕೀರ್ಣ ಬದುಕನ್ನು ಸರಳ ಸೂತ್ರೀಕರಿಸಿ, ಸಂಪ್ರದಾಯದಲ್ಲಿ ಸುಧಾರಣೆ, ಸುಧಾರಣೆಯಲ್ಲಿ ಸಂಪ್ರದಾಯ ತಂದು ಹೊಸ ಹೊಸ ರೂಪಾಂತರದ ಹುಸಿ ಮೌಲ್ಯಗಳಿಂದ ಆಗಾಗ್ಗೆ ಗೊಂದಲ ಸೃಷ್ಟಿಸಿ ಸಮಾಜದಲ್ಲಿ ನಿರಾತಂಕವಾಗಿ ಉಸಿರಾಡುವ ರಕ್ಷಣಾವಲಯವೊಂದನ್ನು ನಿರ್ಮಿಸಿಕೊಂಡನು. ಅಂಥ ಬದುಕಿಗೆ ಸ್ಥಿತಿ ಸ್ಥಾಪಕತ್ವ ಸ್ವಭಾವದ

ಧರ್ಮ ಅತ್ಯಂತ ಸೂಕ್ತ ಮಾಧ್ಯಮವಾಯಿತು. ಜಾತಿಯ ಚೌಕಟ್ಟಿನಿಂದ ಧರ್ಮವನ್ನು ಮುಕ್ತಗೊಳಿಸಿ ವಿಶ್ವ ತತ್ತ್ವ ಬೋಧಿಸುವ ಪರಿಭಾಷೆಯೊಂದು ಸಿದ್ಧವಾಯಿತು, ಅದು ಸಮಯ ಸಂದರ್ಭ ಅರಿತು ಬಳಸಲ್ಪಟ್ಟಿದ್ದರಿಂದ, ಸಾಮೂಹಿಕ ಸನ್ನಿಯಾಯಿತು. ಇದರಿಂದ ಧರ್ಮ ಮತ್ತು ಮಾಧ್ಯಮಗಳ ಸಂಬಂಧ, ಜೀವ ದೇಹಗಳ, ಸ್ವರ್ಗ ನರಕಗಳ ಸಂಬಂಧದಷ್ಟೇ ಸ್ಥಿರವಾಯಿತು. ಇದರಿಂದ ನಿಜಮೌಲ್ಯಗಳು, ಭಾವನೆಗಳು, ಅನುಭವಗಳು, ಸಮಸ್ಯೆಗಳು ಸಹಜ ಅಭಿವ್ಯಕ್ತಿಯ ಅಭಾವದಿಂದ ಸೊರಗಿದವು. ಸಿದ್ಧರೂಪದ ಎರಕದಲ್ಲಿ ಸಿದ್ಧವಸ್ತುವಿನ ಅಂತಃಸತ್ವ ಎರಕಗೊಂಡಿತು. ಹೀಗಾಗಿ ಧರ್ಮ ಕಾವ್ಯಮಾಧ್ಯಮದಲ್ಲಿ ತನ್ನ ಸಂಕುಚಿತತೆಯ ಸೆರೆ ಬಿಡಿಸಿಕೊಂಡರೆ, ಕಾವ್ಯ ತನ್ನ ಮುಕ್ತಿಯನ್ನು ಮೂಲ ಧರ್ಮದಲ್ಲಿ ಕಂಡುಕೊಂಡಿತು. ಕನ್ನಡ ನಾಡಿನ ಸಾಹಿತ್ಯ ಚರಿತ್ರೆ ಎಂದರೆ ಧರ್ಮದ ಚರಿತ್ರೆಯೇ ಆಗಿದೆ. ಆಯಾ ಕಾಲದ ಧರ್ಮದ ಅಧ್ಯಯನ ನಡೆಸದೆ, ಆಯಾ ಕಾಲದ ಕನ್ನಡ ಸಾಹಿತ್ಯ ಅರಿವು ಅಸಾಧ್ಯ. ಸಾಹಿತ್ಯ ಮತ್ತು ಧರ್ಮದ ಸಂಬಂಧದ ಎಳೆ ಅತ್ಯಂತ ಸೂಕ್ಷ್ಮವಾದುದು. ಲಿಖಿತ ರೂಪದಲ್ಲಿ ಜೈನ, ವೀರಶೈವ, ವೈಷ್ಣವ ಮತ್ತು ಆಧುನಿಕ ಪಾಶ್ಚಾತ್ಯ ಸಾಹಿತ್ಯಗಳು ಸುಳಿದು ಅನುಕ್ರಮವಾಗಿ ಒಂದೊಂದು ಕಾಲಕ್ಕೆ ಒಂದೊಂದು ಮೆರೆದು ಅನಂತರ ಜೊತೆ ಜೊತೆಯಾಗಿ ಬದುಕುತ್ತಿವೆ. ಅಂದು ಧರ್ಮದಿಂದ ಸಾಹಿತ್ಯದ ಮೌಲ್ಯಮಾಪನವಾದರೆ, ಇಂದು ಸಾಹಿತ್ಯದಿಂದ ಧರ್ಮದ ಮೌಲ್ಯಮಾಪನವಾಗುತ್ತಿದೆ ಅಷ್ಟೆ. ಆದರೂ ನೋಡುವ ದೃಷ್ಟಿ ಬದಲಾದರೂ ಮೂಲದ್ರವ್ಯ ಮತ್ತು ಸೂತ್ರಗಳು ಮುಂದುವರಿದಿವೆ. ಧರ್ಮ ಮತ್ತು ಸಾಹಿತ್ಯ ವ್ಯಾಖ್ಯಾನ-ಎರಡಕ್ಕೂ ಮೂಲ ಆಧಾರವಾಗಿ ಒಂದೇ ಗ್ರಂಥರಾಶಿ ಪರಿಗಣಿಸಲ್ಪಟ್ಟಿರುವುದು ಒಂದು ವಿಪರ್ಯಾಸವೇ ಸರಿ.

ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿ ಮೈದಾಳಿ, ವಿಶಿಷ್ಟ ವಚನಸಾಹಿತ್ಯ ಪ್ರಕಾರದ ಸೃಷ್ಟಿಗೆ ಕಾರಣವಾಗಿ, ಅಧಿಕ ಸಂಖ್ಯೆಯ ಅನುಯಾಯಿಗಳನ್ನು ವೀರಶೈವ ಧರ್ಮ ಕನ್ನಡನಾಡಿನಲ್ಲಿ ಹೊಂದಿದೆ. ಶಿವಭಕ್ತಿಯೇ ಅದರ ಪ್ರಧಾನ ವಸ್ತುವಾಗಿದ್ದರೂ, ವೀರಶೈವೇತರರಲ್ಲಿಯೂ ಶಿವಭಕ್ತಿಯನ್ನು ಕುರಿತ ಸಾಹಿತ್ಯ ಸೃಷ್ಟಿಯಾಗಿದೆ. ಆದ್ದರಿಂದ ವೀರಶೈವ ತತ್ತ್ವಗಳು ವ್ಯಕ್ತವಾಗಿರುವ ಸಾಹಿತ್ಯವನ್ನು ಲಿಂಗಾಯಿತ ಸಾಹಿತ್ಯ, ಶರಣ ಸಾಹಿತ್ಯ , ವಚನ ಸಾಹಿತ್ಯ, ಅನುಭಾವ ಸಾಹಿತ್ಯ ಎಂದೆಲ್ಲಾ ಕರೆದು ಈಗ ಅದು ವೀರಶೈವ ಸಾಹಿತ್ಯ ಎಂದು ಜನಪ್ರಿಯವಾಗಿದೆ. ವೀರಶೈವ ಸಾಹಿತ್ಯ ವಿಪುಲವಾಗಿ ಬೆಳೆದು ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವನ್ನು ಭದ್ರಗೊಳಿಸಿಕೊಂಡಿದೆ. ವೀರಶೈವ ಸಾಹಿತ್ಯ ಮುಖ್ಯವಾಗಿ ಲಿಂಗದೀಕ್ಷಾ ಬದ್ಧರಾದ ಶರಣರಿಗೆ ಸಂಬಂಧಿಸಿದುದು. ಅದರಲ್ಲಿ ವಚನ ಪ್ರಕಾರವೇ ಅತ್ಯಂತ ಮುಖ್ಯವಾದುದು. ಮುಂದಿನ ಕಾವ್ಯ, ಪುರಾಣ, ಶಾಸ್ತ್ರಗಳ ರಚನೆಗೆ ವಚನವೇ ಮೂಲ ಮತ್ತು ಪ್ರೇರಣೆ. ವೀರಶೈವ ಸಾಹಿತ್ಯ ಶಿಷ್ಟ ಮತ್ತು ದೇಶೀಯ ಅಂಶಗಳು ಅಂತರ್ಗತಗೊಂಡು ಪ್ರಾಚೀನ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಆದಷ್ಟು ಒಳಗೊಂಡು ಸಮಗ್ರವಾಗಲು ಪ್ರಯತ್ನಿಸಿದೆ. ಇಷ್ಟಾದರೂ ವೀರಶೈವ ಧರ್ಮ ಮತ್ತು ವೀರಶೈವ ಸಾಹಿತ್ಯ ಕನ್ನಡ ಸಾಹಿತ್ಯ ಸಂಶೋಧಕರಿಗೆ ಹಲವು ಸಮಸ್ಯೆಗಳನ್ನು ಒಡ್ಡಿ

ಇಂದಿಗೂ ಜಿಜ್ಞಾಸೆಗೆ ಒಳಗಾಗಿದೆ. ಬಗೆಹರಿಯದ ಹತ್ತಾರು ಸಮಸ್ಯೆಗಳು ಎದುರಾಗುತ್ತವೆ. ಬಿಚ್ಚು ಮನಸ್ಸಿನಿಂದ ಸಂಶಯಗಳನ್ನು ಮುಂದಿಟ್ಟರೆ ತೆರದ ಹೃದಯದಿಂದ ಚರ್ಚಿಸುವ ಮುಕ್ತ ವಾತಾವರಣದ ಅಭಾವದಿಂದ ಭಾವೋದ್ರೇಕ ಸ್ಥಿತಿ ಸೃಷ್ಟಿಯಾಗುತ್ತದೆ. ಇದು ಯಾವುದೇ ಒಂದು ಮತೀಯ ಸಾಹಿತ್ಯ ಚರ್ಚೆಗೆ ಅನ್ವಯಿಸುತ್ತಾದರೂ ವೈದಿಕ, ಶೈವ, ಬೌದ್ಧ ಮತ್ತು ಜೈನ ಧರ್ಮಗಳು ಅಖಿಲ ಭಾರತದ ವ್ಯಾಪ್ತಿಯ ಧರ್ಮಗಳಾಗಿದ್ದು , ಇಂಥ ಚರ್ಚೆಗೆ ನಿರಂತರವಾಗಿ ವಿವಿಧ ಕಾಲಗಳಲ್ಲಿ , ವಿವಿಧ ಭಾಷೆಗಳಲ್ಲಿ ಒಳಗಾಗಿದ್ದು, ತಮ್ಮ ಸೂಕ್ಷ್ಮತೆಯನ್ನು ಕಳೆದುಕೊಂಡು, ಖಂಡನ ಮಂಡನಕ್ಕೆ ಒಗ್ಗಿಕೊಂಡಿವೆ, ಆದರೆ ಕರ್ನಾಟಕಕ್ಕೇ ಮಿತಗೊಂಡು ಮೊಸಲಾದ ವೀರಶೈವ ಧರ್ಮ ಅನ್ಯಮತ ದೂಷಣೆಯೊಂದನ್ನೇ ರೂಢಿಸಿಕೊಂಡು, ಅನ್ಯಮತಗಳಿಂದ ಖಂಡಿಸಲ್ಪಟ್ಟಾಗ ಮಾತ್ರ ಅತ್ಯಂತ ಸೂಕ್ಷ್ಮವಾಗಿ ಪ್ರತಿಕ್ರಿಯಿಸುವ ಸ್ವಭಾವವನ್ನು ಮೈಗೂಡಿಸಿಕೊಂಡಿದೆ. ಅಚ್ಚ ಕನ್ನಡ ಧರ್ಮ ಮತ್ತು ಸಂಸ್ಕೃತಿ ಎಂದರೆ ವೀರಶೈವ ಸಂಸ್ಕೃತಿಯೇ ಎಂದು ವೀರಶೈವ ವಿದ್ವಾಂಸರು ಮತ್ತು ವೀರಶೈವರು ಭಾವಿಸಿದ್ದಾರೆ. ಆ ಧರ್ಮದ ವಿರುದ್ಧ ಯಾವುದೇ ಒಂದು ಸಂಶೋಧನೆಯ, ವಿಮರ್ಶೆಯ ಮಾತು ಸಂಶೋಧಕನ ವೈಯಕ್ತಿಕ ವ್ಯಕ್ತಿತ್ವಕ್ಕೆ ಸಾರ್ವತ್ರಿಕವಾಗಿ ಮಸಿ ಬಳಿಯುವ ಅಹಿತಕರ ಪರಿಸರ ಸೃಷ್ಟಿಯಾಗುತ್ತಿರುವುದು ವಿಷಾದದ ಸಂಗತಿಯೇ ಸರಿ. ಅದರಿಂದಾಗಿ ಏಕಮುಖ ವೀರಶೈವ ಸಾಹಿತ್ಯ ಸೃಷ್ಟಿಯ ಪ್ರೋತ್ಸಾಹ ಪರಿಸರದಲ್ಲಿ ವೀರಶೈವ ಧರ್ಮ ತನ್ನ ನಿಜವಾದ ಮೂಲ ಸ್ವರೂಪದ ಅರ್ಥ ಕಳೆದುಕೊಳ್ಳುವ ಸ್ಥಿತಿ ಒದಗುವ ಅಪಾಯವಿದೆ. ಅದರ ನಿಜ ಸ್ವರೂಪದ ಸ್ಪಷ್ಟ ಚಿತ್ರದಿಂದ, ಬದಲಾಗುತ್ತಿರುವ ಸಮಾಜಕ್ಕೆ ವೀರಶೈವ ಧರ್ಮದಿಂದ ಯಾವುದಾದರೂ ಪ್ರೇರಣೆ ಸಾಧ್ಯವೇ ಎಂಬುದರಲ್ಲಿ ವೀರಶೈವ ಧರ್ಮದ ಸತ್ವ ಅಡಗಿದೆ ಎಂಬುದನ್ನು ಮರೆಯಬಾರದು.

ತಮಿಳುನಾಡಿನ ನಯನಾರರು ಮತ್ತು ಆಳ್ವಾರರ ಸೂಕ್ತಿಗಳು ಸಂಗ್ರಹಿಸಲ್ಪಟ್ಟು ತೇವಾರಂ ಮತ್ತು ತಿರುಪ್ಪಾವೆಗಳು, ಮುಂದೆ ತಮ್ಮ ತಮ್ಮ ಮತಾಚಾರ್ಯರ ವ್ಯಾಖ್ಯಾನದಿಂದ ಶೈವ ಮತ್ತು ವೈಷ್ಣವ ಸಿದ್ಧಾಂತ ಪ್ರತಿಪಾದನೆಗೆ ದಾರಿಯಾದುವು. ಅದರಿಂದ ವೈದಿಕ ಧರ್ಮದ ತಳಹದಿಯ ಮೇಲೆ ಭಕ್ತಿಪಂಥ ರೂಪುಗೊಂಡು ಶೂದ್ರ ಮತ್ತು ಸ್ತ್ರೀಯರ ಧಾರ್ಮಿಕ ಸಾಧನೆಗೆ ಅವಕಾಶ ಒದಗಿದಂತಾಯಿತು. ತಮಿಳು ಸಂತರ ಭಕ್ತಿಸೂಕ್ತಿಗಳು ವೇದಕ್ಕೆ ಸಮನವಾದವು. ಅವು ದ್ರಾವಿಡ ವೇದ ಎಂದು ಪರಿಗಣಿಸಲ್ಪಟ್ಟು ದೇವಾಲಯ ಮತ್ತು ಮಠಗಳಲ್ಲಿ ವೇದ ಘೋಷದಂತೆ ಪಠಣವಾದುವು. ಕನ್ನಡನಾಡಿನಲ್ಲಿ ವಚನಗಳು ದೇವಾಲಯ ಮತ್ತು ಮಠಗಳಲ್ಲಿ ಪಠಿಸಲ್ಪಟ್ಟು ವೇದ ಸಮಾನವಾದುವೆ ಎಂಬುದು ಸ್ಪಷ್ಟವಾಗಬೇಕಾಗಿದೆ. ಸಂಸ್ಕೃತವನ್ನು ವಿರೋಧಿಸಿದ ವೀರಶೈವರು ಮುಂದೆ ತಮ್ಮ ಮಠಗಳಲ್ಲಿ ಸಂಸ್ಕೃತ ಅಧ್ಯಯನ ಬೋಧನೆಗೆ ಗಮನಕೊಟ್ಟಂತೆ ಕನ್ನಡ ವಚನಗಳ ಅಧ್ಯಯನ ಬೋಧನೆಯ ಸಂಪ್ರದಾಯ ರಕ್ಷಣೆಗೆ ಎಷ್ಟರಮಟ್ಟಿಗೆ ಪ್ರೋತ್ಸಾಹ ಕೊಟ್ಟರು ಎಂಬುದು ಸಂಶೋಧಿಸಬೇಕಾದ ಅಂಶವಾಗಿದೆ. ಅದಕ್ಕೆ ತಮಿಳುನಾಡಿನ ಭಕ್ತರ ಸೂಕ್ತಿಗಳು ಸ್ತೋತ್ರಗಳು, ಕನ್ನಡ ನಾಡಿನ ವಚನಗಳು ವೈಚಾರಿಕತೆಯ ಬದುಕಿನ ಸೂಕ್ತಿಗಳು, ಪಠಣಕ್ಕಿಂತ ಚಿಂತನಶೀಲವಾದವು ಎಂದು ಉತ್ತರಿಸಬಹುದು. ಅಂಥ ಚಿಂತನಶೀಲ ಪ್ರಚೋದನೆಯ

ವಚನ ಸೃಷ್ಟಿಯ ಮೂಲ ಸೆಲೆ ಬತ್ತಲು ಕಾರಣವಾದರೂ ಯಾವುದು ಎಂಬ ಮರುಪ್ರಶ್ನೆ ಹುಟ್ಟುತ್ತದೆ. ಅಲ್ಲದೆ ಮುಂದೆ ಯಾವ ವೀರಶೈವ ಮತಾಚಾರ್ಯರಿಂದ ವಚನ ವ್ಯಾಖ್ಯಾನಗೊಂಡು, ಎಲ್ಲಾ ಪಂಥಗಳನ್ನೂ ವಿರೋಧಿಸಿದ ವಚನಗಳಿಂದ ಧ್ವನಿಸಿದ ಖಚಿತ ಸಿದ್ಧಾಂತವಾದರೂ ಯಾವುದು ಎಂಬ ಪ್ರಶ್ನೆ ಪ್ರಮುಖವಾಗುತ್ತದೆ. ವೀರಶೈವ ಧರ್ಮದ ಜೀವ, ದೇವ ಮತ್ತು ಜಗತ್ತಿನ ಪರಿಕಲ್ಪನೆಯಾದರೂ ಯಾವುದು? ಅದು ಹೇಗೆ ಅನ್ಯ ಪಂಥಗಳಿಂದ ಭಿನ್ನ? ಅದರ ಮೌಲ್ಯಗಳಾದರೂ ಯಾವುವು? ಎಂಬ ಹಲವು ಪ್ರಶ್ನೆಗಳು ಕಾಡುತ್ತವೆ. ಅದಕ್ಕೆ ವಚನಗಳಿಂದ ಶೂನ್ಯ ಸಿದ್ಧಾಂತ ರೂಪುಗೊಂಡಿತು ಎಂದು ಉತ್ತರಿಸಬಹುದು. ಆದರೆ ಬೌದ್ಧರ ಶೂನ್ಯತತ್ವಕ್ಕೂ, ಬೌದ್ಧ ತಾಂತ್ರಿಕ ಮತವಾದ ಹೇ ವಜ್ರಯಾನ ಪಂಥದ ಶೂನ್ಯ ತತ್ವಕ್ಕೂ ಮತ್ತು ಶೈವ ಶಾಕ್ತ ಪಂಥದ ಶೂನ್ಯ ತತ್ವಕ್ಕೂ ವೀರಶೈವ ಶೂನ್ಯ ತತ್ವಕ್ಕೂ ಇರುವ ಸಾಮ್ಯ ವೈಷಮ್ಯ ಯಾವುದು ಎನ್ನಿಸುತ್ತದೆ. ಹಾಗಾದರೆ ವಚನಗಳಲ್ಲಿ ಬರುವ ಷಟ್‌ಸ್ಥಲ ಸಿದ್ಧಾಂತ, ನಡೆನುಡಿ ಸಿದ್ಧಾಂತ, 'ಸ್ವಯಮಾನುಭವ', 'ಸಹಜ ಸಮಾಧಿ', 'ಬಿಚ್ಚುನುಡಿ', 'ಬಯಲು' ಮತ್ತು 'ಕರಿಗೊಳ್ಳು' ಮುಂತಾದ ಪದಗಳ ಸಿದ್ಧಾಂತ ಸ್ವರೂಪವಾದರೂ ಯಾವುದು? ಅಥವಾ ಈ ಎಲ್ಲಾ ಅಂಶಗಳೂ ಶೂನ್ಯ ಸಿದ್ಧಾಂತದಲ್ಲಿ ಅಡಕವಾಗಿವೆಯೋ? ಆದರೆ ಕ್ರಮೇಣ ವೀರಶೈವ ವಿದ್ವಾಂಸರೇ ಶಕ್ತಿ ವಿಶಿಷಾದ್ವೈತದ ಬೆಳಕಿನಲ್ಲಿ ವಚನಗಳ ವ್ಯಾಖ್ಯಾನ ಮಾಡಿದುದು ಮತ್ತೂ ಗೊಂದಲಕ್ಕೆಡೆ ಕೊಟ್ಟಿತು. ವಚನಗಳಿಂದ ಸ್ಫುರಿಸುವ ಖಚಿತ ಸಿದ್ಧಾಂತ ಯಾವುದು ಎಂಬುದು ಅಸ್ಪಷ್ಟವಾದಂತಾಯಿತು. ಅಥವಾ ವಚನ ವ್ಯಾಖ್ಯಾನದಿಂದಲೇ ವಿವಿಧ ವೀರಶೈವ ಸಿದ್ಧಾಂತಗಳು ರೂಪುಗೊಂಡು, ವಿವಿಧ ಒಳಪಂಗಡಗಳಾಗಿವೆಯೇ ಎಂಬ ಸಂಶಯಕ್ಕೆ ಅವಕಾಶವಾಗುತ್ತದೆ.

ವಚನ ಸಾಹಿತ್ಯದ ಉಗಮದ ಬಗ್ಗೆ ಹಲವು ಸಿದ್ಧಾಂತಗಳು ಹುಟ್ಟಿವೆ. ಅವು ವಚನಕ್ಕೆ ಸಂಸ್ಕೃತ, ತಮಿಳು ಮತ್ತು ದೇಸೀಯ ಮೂಲವನ್ನು ತಿಳಿಸುತ್ತವೆ. ಈ ಸಿದ್ಧಾಂತಗಳೇ ಮುಂದೆ ಅದೇ ಸಿದ್ಧಾಂತಿಗಳಿಂದ ಪರಿಷ್ಕರಣಕ್ಕೆ ಒಳಗಾಗಿ ವಿದ್ವಾಂಸರ ತೀವ್ರ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಟ್ಟಿದೆ. ಹಿಂದಿನ ಗ್ರಂಥಗಳು, ಅಲಿಖಿತ ಆಚಾರಗಳು, ತೋಂಡಿ ಸಂಪ್ರದಾಯದ ತತ್ವ ಪದಗಳು ವಚನ ಸಾಹಿತ್ಯದ ಮೇಲೆ ಬೀರಿರುವ ಪ್ರಭಾವವನ್ನು ಗುರುತಿಸುವುದಕ್ಕಿಂತ, ವಚನ ಸಾಹಿತ್ಯ ಮುಂದಿನ ಕೃತಿಗಳ ಮೇಲೆ ಬೀರಿರುವ ಪ್ರಭಾವವನ್ನು ಗುರುತಿಸುವ ಪ್ರಯತ್ನವೇ ಹೆಚ್ಚಾಗಿದೆ. ವಚನ ಸಾಹಿತ್ಯದ ಹರಣಕ್ಕಿಂತ, ಅನ್ವರ ಸ್ವೀಕರಣದ ಮೇಲೆ ಒತ್ತು ಬಿದ್ದಂತಾಯಿತು. ಅದರಿಂದ ವಚನ ಸಾಹಿತ್ಯವನ್ನು ವಿಶಿಷ್ಟ ಪ್ರಕಾರವಾಗಿ, ಕನ್ನಡ ಸಾಹಿತ್ಯದ ದ್ವೀಪವಾಗಿ ಉಳಿಸಿಕೊಳ್ಳುವ ಸಾಹಸವೇ ಎದ್ದು ಕಂಡಿತು. ವಚನ ಸಾಹಿತ್ಯದ ಮೇಲೆ ಕೆಳವರ್ಗದ ಸಂಸ್ಕೃತಿಯ ಸಂಪರ್ಕಕ್ಕಿಂತ, ಉಚ್ಚವರ್ಗದ ಸಂಸ್ಕೃತಿಯ ಸಂಪರ್ಕದಿಂದಲೇ ಅದರ ಮಹತ್ವ ಮತ್ತು ಪಾವಿತ್ರ್ಯವನ್ನು ಕಾಣುವ ಮಡಿ ವೀರಶೈವ ವಿದ್ವಾಂಸರ ಸುಪ್ತ ಪ್ರಜ್ಞೆ ವಚನಗಳ ಬ್ರಾಹ್ಮಣೀಕರಣ ವ್ಯಾಖ್ಯಾನದತ್ತ ಹರಿಯಿತು. ವೀರಶೈವ ಧರ್ಮ ವೈದಿಕಧರ್ಮದ ವಿರೋಧಿಯಾದರೂ ವೈದಿಕ ಧರ್ಮಕ್ಕೆ ಕ್ರಮೇಣ ಶರಣಾದದ್ದು ಅದರ ವೈರುದ್ಧ್ಯಕ್ಕೆ ಕನ್ನಡಿಯಾಗಿದೆ. ಕೆಳವರ್ಗದ ಸಂಸ್ಕೃತಿಯಿಂಧ ಪಡೆದುಕೊಂಡದ್ದನ್ನು ವೈದಿಕ

ಸಂಸ್ಕೃತಿಯಲ್ಲಿ ಕಸಿ ಮಾಡಿಕೊಂಡಿತು ವೀರಶೈವ ಧರ್ಮ. ವಿವಿಧ ತಾಂತ್ರಿಕ ಪಂಥಗಳು, ಜನರ ಗುಪ್ತ ಸಾಧನೆಯಲ್ಲಿದ್ದು, ಹಲವು ಗುಪ್ತ ಸಮಾಜಗಳು ಅಸ್ತಿತ್ವದಲ್ಲಿದ್ದ ಲಕ್ಷಣಗಳು ವಚನದಲ್ಲಿಯೇ ಕಂಡುಬರುತ್ತವೆ. ನಾನಾ ಜಾತಿ ಮತ ಪಂಥಗಳಿಂದ ವೀರಶೈವ ಧರ್ಮಕ್ಕೆ ಮತಾಂತರಗೊಂಡ ಶರಣರು ಅಂಥ ಗುಪ್ತ ಸಮಾಜದ ದೀಕ್ಷಾಬದ್ಧ ಸದಸ್ಯರಾಗಿದ್ದರೆಂಬುದಕ್ಕೆ ಗುಪ್ತ ಸಮಾಜ ಮತ್ತು ವಚನಗಳ ತುಲನಾತ್ಮಕ ಅಧ್ಯಯನ ಬೆಳಕು ಚೆಲ್ಲುತ್ತದೆ. ವೇದ ವಿರೋಧ, ಜಾತ್ಯಾತೀತ ಧಾರ್ಮಿಕ ವಿಧಿಯ ಆಚರಣೆ, ಗುರು ಮಹತ್ವ, ತತ್ವಕ್ಕಿಂತ ಸಾಧನೆಗೆ ಪ್ರಾಧಾನ್ಯತೆ, ಹೆಣ್ಣು ಗಂಡಿನ ಸಾಂಕೇತಿಕ ಕಲ್ಪನೆ, ಮಾತೃಭಾಷೆಯ ಬಳಕೆ, ಯಂತ್ರ ತಂತ್ರ ಯೋಗ ಸಾಧನೆಗಳು, ಸ್ಥಳೀಯ ದೇವತೆಗಳ ಪ್ರಾಮುಖ್ಯತೆ ಹಾಗೂ ಮೂಢ ನಂಬಿಕೆಗಳ ಖಂಡನೆ ಮಿಗಿಲಾಗಿ ಸಹಜ ಸಾಧನೆಯ ಗುರಿ-ಇನ್ನೂ ಮುಂತಾದವು ಗುಪ್ತ ಸಮಾಜದ ಕೆಲವು ಸಾಮಾನ್ಯ ಲಕ್ಷಣಗಳು. ತಂತ್ರ ಸಾಧನೆಯ ದಕ್ಷಿಣ ಮತ್ತು ವಾಮಾಚಾರ-ಈ ಎರಡೂ ಅಂಶಗಳೂ ರೂಪಾಂತರದಿಂದ ಗ್ರಾಹ್ಯವಾಗಿರುವುದನ್ನು ವಚನಗಳಲ್ಲಿ ಗುರುತಿಸಬಹುದು. ಉಚ್ಚ ವರ್ಗದವರಿಂದ ಮತಾಂತರಗೊಂಡಿರುವವರಲ್ಲಿ ಸಾತ್ವಿಕ ರೂಪದ ತಾಂತ್ರಿಕ ಅಂಶಗಳನ್ನೂ, ಕೆಳ ವರ್ಗದಿಂದ ಮತಾಂತರಗೊಂಡವರಲ್ಲಿ ಅದರ ಸೂಕ್ಷ್ಮ ಸ್ವರೂಪದ ಅಂಶವನ್ನೂ ಗುರುತಿಸಬಹುದು. ಉಚ್ಚವರ್ಗದ ವಚನಕಾರರಿಗಿಂತ ಭಿನ್ನವಾದ ಆಲೋಚನೆ ಚಿಂತನೆ ಮತ್ತು ಅಭಿವ್ಯಕ್ತಿಯನ್ನು ಕೆಳವರ್ಗದ ವಚನಕಾರರಲ್ಲಿ ಕಾಣಬಹುದು. ಕೆಳವರ್ಗದ ವಚನಕಾರರಲ್ಲಿ ಬೆಡಗಿನ ವಚನಗಳ ಬಳಕೆ ಹೆಚ್ಚು. ಅದು ಗುಪ್ತ ಸಮಾಜದ ಪ್ರಭಾವ ಎಂಬುದಂತೂ ಸುಸ್ಪಷ್ಟ. ಕೆಳವರ್ಗದ ವಚನಕಾರರು ಬಿಚ್ಚು ಮನಸ್ಸಿನ ಬಿಚ್ಚು ನುಡಿಗೆ ಹೆಸರಾದರೆ, ಉಚ್ಚ ವರ್ಗದ ವಚನಕಾರರಲ್ಲಿ ಹೆಚ್ಚು ಪಾರಿಭಾಷಿಕವಾದ, ನಯಗಾರಿಕೆಯ, ಭಾವಗೀತಾತ್ಮಕತೆಯ ವಚನಗಳೇ ಹೆಚ್ಚು. ಉಚ್ಚ ವರ್ಗದವರಲ್ಲಿ ಸಂಸ್ಕೃತದ ಕನ್ನಡೀಕರಣವೋ, ಭಾವಾನುವಾದವೋ ವಚನಗಳಲ್ಲಿ ಕಂಡರೆ, ಕೆಳವರ್ಗದ ವಚನಕಾರರು ನೇರವಾಗಿ ಸಂಸ್ಕೃತ ಶ್ಲೋಕಗಳನ್ನು ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸುವುದಕ್ಕೋ ಅಥವಾ ವಿರೋಧಿಸುವುದಕ್ಕೋ ಬಳಸುತ್ತಾರೆ. ಅದು ಕೆಳ ವರ್ಗದವರು ಉಚ್ಚ ವರ್ಗದವರೊಂದಿಗೆ ಸ್ಪರ್ಧಿಸುವ ಸುಪ್ತ ಬಯಕೆಯ ಪ್ರತೀಕ ಎನ್ನಬಹುದು. ಆದರೆ ಕೆಳವರ್ಗದವರ ವಚನಗಳಲ್ಲಿ ಕನ್ನಡ ಭಾಷೆಯ ಬನಿ ಮತ್ತು ಸಾಧನೆಯ ವಿವಿಧ ಹಂತದ ಅನುಭಾವದ ವಿವಿಧ ಸ್ತರದ ನೇರ ನುಡಿಗಳಿವೆ. ಅಲ್ಲದೆ ತಾತ್ವಿಕ ದೃಷ್ಟಿಯಿಂದಲೂ ಹಲವು ಭಿನ್ನಾಭಿಪ್ರಾಯಗಳು ಉಚ್ಚ ಮತ್ತು ಕೆಳವರ್ಗದ ವಚನಕಾರರಲ್ಲಿ ಕಂಡುಬರುತ್ತವೆ. ಈ ಭೇದವನ್ನೇ ನಿರಾಕರಿಸುವವರಿಗೆ ವಚನಗಳ ವಸ್ತುನಿಷ್ಠ ಅಧ್ಯಯನ ಅಗತ್ಯ ಎನ್ನಿಸುತ್ತದೆ.

ವಚನ ಪ್ರಕಾರ ಕನ್ನಡ ಸಾಹಿತ್ಯದಲ್ಲಿ ಇದ್ದಕ್ಕಿದ್ದ ಹಾಗೆ ಅವತರಿಸಲಿಲ್ಲ. ಅದರ ಹಿನ್ನೆಲೆಯಲ್ಲಿ ಗುಪ್ತವಾಗಿಯೂ ಮತ್ತು ವ್ಯಕ್ತವಾಗಿಯೂ ಹಲವು ಪ್ರೇರಣೆಗಳಿವೆ. ಹಿಂದಿನ ಕಾವ್ಯಗಳ ಪ್ರಭಾವ, ಸತತ ವ್ಯವಸಾಯ, ಪೂರ್ವ ಸಿದ್ಧತೆ ಇರುವುದು ಕಂಡುಬರುತ್ತದೆ. ವಚನಕಾರರು ಕಾವ್ಯವನ್ನು ಮಾಯಾವಾದವೆಂದು ಕರೆದು, ಕಾವ್ಯಾಭ್ಯಾಸವನ್ನು ತಿರಸ್ಕರಿಸಿದರೂ, ಅವರೇ ರಚಿಸಿದ ವಚನಗಳಿಂದ ವಚನಕಾರರು ಕಾವ್ಯ ಚಿಂತನ ಶೀಲರು ಮತ್ತು ಸತತ ಕಾವ್ಯಾಭ್ಯಾಸಿಗಳು ಎಂಬುದು ಸ್ಪಷ್ಟವಾಗುತ್ತದೆ.

ಉದಾಹರಣೆಗೆ ನಯಸೇನನ ಧರ್ಮಾಮೃತ ಮತ್ತು ವಚನಗಳನ್ನು ಅಧ್ಯಯನ ಮಾಡಿದರೆ ವಚನಗಳು ಹಿಂದಿನ ಕಾವ್ಯದಿಂದ ಪ್ರಭಾವಿತವಾಗಿರುವುದು ಸ್ಪಷ್ಟವಾಗುತ್ತದೆ. ವಸ್ತು, ಕಾವ್ಯ ಶಿಲ್ಪ ಮತ್ತು ಬಂಧ ದೃಷ್ಟಿಯಿಂದ ವಿಶ್ಲೇಷಿಸಿದ್ದೇ ಆದರೆ ಕುತೂಹಲ ಕೆರಳಿಸುವ ಅಂಶಗಳು ಹೊರಬೀಳುತ್ತವೆ. ವಚನಗಳಲ್ಲಿ ತೀರ ವೈಯಕ್ತಿಕ ಎನ್ನುವ ಆತ್ಮನಿರೀಕ್ಷೆಯ ಕೆಲವು ವಚನಗಳು ಭಾವಗೀತಾತ್ಮಕವಾಗಿದ್ದು ಅನುಭಾವದ ತೀವ್ರತೆಗೆ ಉದಾಹರಣೆಯಾಗಿ ಕೊಡುವ ವಚನಗಳಿಗೆ ಸಂವಾದಿಯಾದ ಕೆಲವೇ ಪದ್ಯಗಳನ್ನು ಉದಾಹರಿಸುವುದರಿಂದ ಮೇಲಿನ ಹೇಳಿಕೆಯನ್ನು ಸಮರ್ಥಿಸಬಹುದಾಗಿದೆ:

ನಯಸೇನ : ಕ್ರಿ.ಶ. ೧೧೧೨

ಅಂಬರದೊಳ್ ಶಶಿ ದಿನಕರ
ಬಿಂಬಮನಾರ್ತಾಳ್ದಿಪೊತ್ತುಕೊಂಡಿರ್ದರ್ ಪೇ
ಳಿಂಬಿಲ್ಲದ ಲೋಕತ್ರಯ
ಬಿಂಬಂ ತನ್ನ ಸ್ವಭಾವದಿಂ ನೆಲಸಿರ್ಕುಂ॥

ಧರ್ಮಾಮೃತ ೫-೧೯೬

ದೇವರದಾಸಿಮಯ್ಯ : ಕ್ರಿ.ಶ. ೧೧೪೦

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ
ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ
ಎಲೆ ಮೃಡನೆ ನೀನಲ್ಲದೆ
ಉಳಿದ ದೈವಂಗಳಿಗಹುದೆ ರಾಮನಾಥ

ನಯಸೇನ :

ತಡೆಯದೆ ನೀವೆಮ್ಮರಸನ
ನೊಡಗೂಡೊಡಗೂಡಲೊಲ್ಲದೊಂದಕ್ಕೊಂದಂ
ನುಡಿಯುತ್ತಿರ್ದೊಡೆ ಕಡೆಯೊಳ್
ಕಡುಚಪಳನ ಗೋಣಿ ಬೞಿದೆಯಾದಂತಿಕ್ಕುಂ॥

(ಧರ್ಮಾಮೃತ ೪-೨೨೮)

ಹರಿದಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ
ಕಳವೆ ಎಲ್ಲಾ ಹೋಗಿ ಬರಿಯಗೋಣಿ ಉಳಿದಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ

ಬೇವಿನ ಗಿಡುವಂ ತಂದಿ
ಟ್ಟಾವಿನ ನೊಱೆವಾಲನೆಱೆದು ನಡುಪಿದೊಡಂ ಕೇಳ್
ಬೇವಿಂಗೆ ಕೈಪೆ ಪಿಂಗದು
ಭೂವಳಯದೊಳೆಂಬ ತೆರದಿನಾ ಪುರದವರುಂ॥

ಧರ್ಮಾಮೃತ ೫-೧೫೬

ಬಸವಣ್ಣ : ಕ್ರಿ.ಶ. ೧೧೬೦

ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದಡೆ
ಸಿಹಿಯಾಗ ಬಲ್ಲುದೆ, ಕಹಿಯಹುದಲ್ಲದೆ,
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು
ಕೂಡಲ ಸಂಗಮದೇವಾ.

ಉರಗನ ವಿಷಮೞಿದರುಂ
ಸಿರಿಯುಳ್ಳರು ಮುದ್ದುಗುಣಿಕೆಯಂ ತಿಂದವರುಂ
ಪಿರಿದುಂ ಪಿತ್ತಾಧಿಕರುಂ
ಧರೆಯೊಳ್ ಮೆಯ್ಯೞಿಯರೆಂಬ ನುಡಿ ತಪ್ಪುಗುಮೇ॥

ಧರ್ಮಾಮೃತ ೪-೧೯೮

ಹಾವು ತಿಂದವರ ನುಡಿಸಬಹುದು
ಗರ ಹೊಡೆದವರ ನುಡಿಸಬಹುದು
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ
ಬಡತನವೆಂಬ ಮಂತ್ರವಾದಿ ಹೊಗಲೊಡನೆ
ನುಡಿವರಯ್ಯಾ ಕೂಡಲ ಸಂಗಮದೇವಾ.

ದಯೆಯಿಲ್ಲದ ಸದ್ಧರ್ಮಮು
ನಯಮಿಲ್ಲದ ಸತಿಯುಮಾತ್ಮವಿಲ್ಲದ ತನುವುಂ
ಜಯಮಿಲ್ಲದ ಕಾಳಗಮುಂ
ಪ್ರಿಯಮಿಲ್ಲದ ಕಾಳಗಮುಂ
ಪ್ರಿಯಮಿಲ್ಲದ ಬಿರ್ದುಮೊಪ್ಪಲಾಱವು ಜಗದೊಳ್॥

ಧರ್ಮಾಮೃತ ೫-೧೭೮

ದಯವಿಲ್ಲದ ಧರ್ಮವುದಾವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಮನಂತಲ್ಲದೊಲ್ಲನಯ್ಯಾ.

ತಾನುಣ್ಣದ ಪೆಱರ್ಗಿಕ್ಕದ
ಪೇನಿಯ ಪಚ್ಚಡಿಕೆಯೆನಿಪ ಲೋಭಿಯ ಪೊನ್ನಂ
ತಾನೊಂದುಮುಳಿಯದಂತಿರೆ
ಹೀನಗುಣಂ ಕವರ್ದುಕೊಂಡು ಚಾಗಂಗೆಯ್ವಂ॥

ಧರ್ಮಾಮೃತ ೨-೩೪

ಪಾಪಿಯ ಧನಪ್ರಾಯಶ್ಚಿತ್ತಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ
ನಾಯಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ
ನಮ್ಮ ಕೂಡಲ ಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥಕಂಡಯ್ಯಾ.

ಕಂಪಲೊಳ್ ಬಿರ್ದು ಪಶುವಿನಂತೆ
ಸಂಸಾರದೊಳ್ ಬಿರ್ದು ನಮೆಯದೆ ಮೋನಂಗೊಂಡ ಚಪಳನಂತೆ

ಧರ್ಮಾಮೃತ (ಗದ್ಯ) ೧೪-೮೩

ಕೆಸರಿನಲ್ಲಿ ಬಿದ್ದ ಬಡಪಶುವಿನಂತೆ
ಆನುದೆಸೆದೆಸೆಗೆ ಬಾಯಿ ಬಿಡುತ್ತಿದ್ದೆನಯ್ಯಾ
ಆರಯ್ವರಿಲ್ಲ ಅಕಟಕಟ ಪಶುವೆಂದೆನ್ನ
ಕೂಡಲ ಸಂಗಮದೇವ ಹಿಡಿದೆತ್ತುವನ್ನಕ್ಕ

ನಿಷ್ಕಾರಣಂ ತೆರಳಿಯ ಪುಳುವಿನಂತೆ
ನಿನ್ನಂ ನೀನೇ ದುಷ್ಪರಿಣಾಮದಿಂ ಸುತ್ತಿಕೊಂಡು

ಧರ್ಮಾಮೃತ (ಗದ್ಯ) ೧೪-೮೩

ಅಕ್ಕಮಹಾದೇವಿ:

ತೆರಣಿಯ ಹುಳು ತನ್ನ ಸ್ನೇಹದಿಂ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ
ಮನ ಬಂದುದನು ಬಯಸಿ ಬೇವುತ್ತಿದ್ದೇನಯ್ಯಾ
ಎನ್ನ ಮನದ ದುರಾಶೆಯ ಮಾಣಿಸು
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನಾ.

ಒಡಲಪ್ಪೊಡಶುಚಿ ನಿಲ್ಲದು
ಪಡಿಕೆ ಕರಂ ಜಂತಿನಾಗರಂ ಪೆರ್ವೇಲಿ
ಪೇಡೆ ಕ್ರಿಮಿಯ ರಾಶಿ ಮೂತ್ರದ
ಮಡಕೆಯದಂ ನಂಬಿ ಚಪಳರೇಕೆಯೊ ಕಿಡುವರ್॥

ಧರ್ಮಾಮೃತ ೭-೧೩೯

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ
ಎಲುಬಿನ ತಡಿಕೆ, ಕೀವಿನ ಹಡಿಕೆ
ಸುಡಲೀ ದೇಹವ, ಒಡಲವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನನಱಿಯದ ಮರುಳೆ.

ಬಿಲ್ಲೊಳ್ ಕೋವಿದರೆನಿಸಿದ
ಬಲ್ಲಾಳಪ್ಪವರನರುವೆನತನುವತೆಱದಿಂ
ನಿಲ್ಲದೆ ಮೆಯ್ಯೊಳ್ ಮಣ್ಣಿನಿ
ಸಿಲ್ಲದೆ ವೇದನೆಯ ಮಾಳ್ಪ ಗಂಡರುಮೊಳರೇ ॥

ಧರ್ಮಾಮೃತ ೯-೩೫

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ
ಚೆನ್ನಮಲ್ಲಿಕಾರ್ಜುನ ದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವಾ

ಸಂಸಾರ, ಬ್ರಹ್ಮಚರ್ಯ, ಅಹಿಂಸೆ, ದಾನ, ಧರ್ಮ, ಹಿರಿಯರು ಯಾರು? ಮುಂತಾದ ಹತ್ತಾರು ವಿಷಯಗಳನ್ನು ಕುರಿತಂತೆ ಹೀಗೆಯೇ ಸಂವಾದಿಯಾದ ಪಟ್ಟಿಯನ್ನು ಬೆಳೆಸಬಹುದು. ನಯಸೇನನ ಪದ್ಯಗಳು ವಚನಗಳಷ್ಟು ಕಾವ್ಯಗುಣವನ್ನು ಹೊಂದಿಲ್ಲದಿರಬಹುದು. ಆದರೆ ವಚನಗಳು ಕೇವಲ ಆತ್ಮ ಪ್ರೇರಣೆಯಿಂದ ಮಾತ್ರ ಬಂದವಲ್ಲ. ತಮಗಿಂತ ಹಿಂದಿನ ಕಾವ್ಯ ಪ್ರೇರಣೆಯಿಂದಲೂ ಕೆಲವು ವಚನಗಳು ಮೂಡಿರುವುದಕ್ಕೆ ಮೇಲಿನ ಪದ್ಯಗಳೇ ಸಾಕ್ಷಿ. ಪ್ರಭಾವಿತವಾಗಿದ್ದರೂ ಕೆಲವು ವಚನಗಳಲ್ಲಿ ಕಾವ್ಯ ಸೌಂದರ್ಯ ಗುಣವನ್ನು ಗುರುತಿಸಬಹುದು -ವೈಯಕ್ತಿಕ ಸಂಬಂಧದ ಭಾವಗೀತಾತ್ಮಕತೆ ಮತ್ತು ಕುಸುರಿ ಕಲೆಗಾರಿಕೆ ವಚನದಲ್ಲಿದೆ.

ವೈದಿಕ ಭಕ್ತಿಪಂಥ, ಅವೈದಿಕ ಮತಗಳಾದ ಬೌದ್ಧ ಮತ್ತು ಜೈನ ಪಂಥಗಳು ಶೂದ್ರ ಮತ್ತು ಸ್ತ್ರೀಯರ ಉತ್ತಮ ಸ್ಥಿತಿಗೆ ದುಡಿದ ಮತಗಳು. ಜಾತ್ಯಾತೀತ ತತ್ವದಿಂದ ಜನಪರವಾದ ತಾಂತ್ರಿಕ ಮತವೂ ಗುಪ್ತಸಾಧನೆಯಲ್ಲಿತ್ತು. ಅಂದ ಮೇಲೆ ಇವುಗಳಿಗಿಂತ ಭಿನ್ನವಾದ ಯಾವ ತತ್ವಗಳಿಂದ ವೀರಶೈವ ಧರ್ಮ ಕೆಳವರ್ಗದವರಿಗೆ ಮಾರ್ಗದರ್ಶಕವಾಯಿತು ಎಂಬುದರ ಪರಿಶೀಲನೆ ಅಗತ್ಯ ಎನ್ನಿಸುತ್ತದೆ. ವೈದಿಕ ಭಕ್ತಿ ಪಂಥದಲ್ಲಿ ವರ್ಣ ವ್ಯವಸ್ಥೆ ನುಸುಳಿತ್ತು. ಬೌದ್ಧ ಮತ್ತು ಜೈನ ಮತಗಳು ನಾಸ್ತಿಕ ಮತಗಳು. ವೀರಶೈವ ಧರ್ಮವಾದರೋ ವೈದಿಕರ ಆತ್ಮ ಅವೈದಿಕ ನಾಸ್ತಿಕ ಮತಗಳ ದೇಹ ಮತ್ತು ತಾಂತ್ರಿಕ ಮತಗಳ ಬದುಕಿನ ಗುರಿಯನ್ನು ಅಂತರ್ಗತಗೊಳಿಸಿಕೊಂಡು ರೂಪುಗೊಂಡಿರುವುದು ಸ್ಪಷ್ಟವಾಗುತ್ತದೆ. ಮತಾಂತರದ ಹೊರ ರಚನೆಯಲ್ಲಿ ಜೈನ ಮತ್ತು ವೀರಶೈವ ಧರ್ಮಕ್ಕೂ ತುಂಬಾ ಸಾಮ್ಯವಿರುವುದು ಕಂಡುಬರುತ್ತದೆ. ಮತಾಂತರವಾಗದ ಜನರ ಬಗ್ಗೆ ಆಕ್ರೋಶ, ಮತಾಂತರಕ್ಕೆ ವ್ರತ/ದೀಕ್ಷೆಯ ಅನಿವಾರ್ಯತೆ, ಉತ್ತಮ ಮತಸ್ಥನ ಲಕ್ಷಣಗಳು, ಅನಾಚಾರಿಗಳ ಖಂಡನೆ, ವಿಶೇಷವಾಗಿ ಹೊಲೆಯರ ಬಗ್ಗೆ ಕಳಕಳಿ, ಬ್ರಾಹ್ಮಣತ್ವ ಸಾಧನೆಯ ಸಾಮಾನ್ಯ ಗುರಿ, ಮೂಢನಂಬಿಕೆಯ ಖಂಡನೆಯ ನೆಪದಲ್ಲಿ ಕೆಳವರ್ಗದ ಸಂಸ್ಕೃತಿಯ ನಿಂದನೆ, ವೇದ ಶಾಸ್ತ್ರಗಳು ಮತ್ತು ಬ್ರಾಹ್ಮಣರ ವಿರೋಧ ಮುಂತಾದ ವಿಷಯಗಳು ಮತಾಂತರಕ್ಕೆ ಅವಕಾಶವಿರುವ ಎಲ್ಲ ಪಂಥಗಳಿಗೂ ರಚನೆಯ ಒಂದು ಚೌಕಟ್ಟು ಸಿದ್ಧವಾಗಿರುವುದು ಕಂಡುಬರುತ್ತದೆ. ಉತ್ತಮ ಕಾವ್ಯದ ಲಕ್ಷಣಕ್ಕೆ ಅಷ್ಟಾ ದಶವರ್ಣನೆಯ ಬಂಧದಂತೆ, ಉತ್ತಮ ಮತಾಂತರಕ್ಕೆ ಅವಕಾಶವಿರುವ ಮತಗಳಿಗೂ ಒಂದು ಮತಾಂತರ ಲಕ್ಷಣದ ಬಂಧ ಸಿದ್ಧವಾಗಿರುವುದು ಉದಾಹರಣೆಯಿಂದ ಸ್ಪಷ್ಟವಾಗುತ್ತದೆ:

ಬ್ರಹ್ಮಶಿವ : ಕ್ರಿ.ಶ ೧೧೫೦

ಪೆಂಡತಿ ಮಹೇಶ್ವರಿ ಗಡ
ಗಂಡಂ ಜೈನಂ ಗಡಮವನಮಕ್ಕಳ್ಗಡಮಾ
ರ್ತ್ತಂಡಂಗೆ ಭಕ್ತರೆನಿಪಾ
ಭಂಡಂಗುತ್ತಮದ ಜೈನವೆಸರೆಂತೆಸಗುಂ
ಸಮಯಪರೀಕ್ಷೆ ೪-೧೨೫

ಜನನಿ ಜನಕಾಗ್ರಜರುಂ
ತನುಜಾನುಜಬಂಧುವರ್ಗಮುಂ ಜೈನನೆ ಬೇ
ಱೆನಗೆ ಪೆಱರಾರುಮಿಲ್ಲೆಂ
ಬನಿತಂ ಬಗೆವವನೆ ಜೈನನುಳಿದವನಲ್ಲಂ.
ಸಮಯಪರೀಕ್ಷೆ ೪-೬೧

ಪೊಲೆಯಂ ಶ್ರಾವಕನಾದೊಡೆ
ಪಲವರೊಳವಂ ಮಾನ್ಯನಪ್ಪೊನೆಂದಡೆ ಮತ್ತಿಂ
ಕುಲಜಂ ಗಡ ಜೈನಂ ಗಡ
ಬೆಲೆಯುಂಟೆ ಪೊಂಗೆಕಂಪುದೊರೆಕೊಂಡ ತೆಱಂ.
ಸಮಯಪರೀಕ್ಷೆ ೨-೪೧

ಎಕ್ಕಲದೇವಿಗೆ ಮಾಮಾ
ಲಕ್ಕನಿಗಂ ಬನದ ಬಳರಿಗಂ ಮೈಲಾರಂ
ಗಳ್ಕದೆ ಜಾತ್ರೆಯಂ ಮಾಳ್ಪಂ
ಮೊಕ್ಕಳಿಗಂ ಜೈನನಲ್ಲನಾತಂ ಕಾಳಂ
ಸಮಯಪರೀಕ್ಷೆ ೪-೧೨೩

ತಪಮಂ ಕೈಕೊಳಲೊಡನೆಂ
ತು ಪಾರ್ವ್ವರುಂ ಭೂಪ ವೈಶ್ಯ ಶೂದ್ರರುಮೆಲ್ಲಂ
ತಪಸಿಗಳಪ್ಪವೊಲಾರ್ಹತ
ರೆ ಪಾರ್ವ್ವರೆನೆ ಸಂದರಾವಜಾತಿಯೊಳೊಗೆದುಂ.
ಸಮಯಪರೀಕ್ಷೆ ೨-೩೩

ನಿಜದಿಂ ತಾಯ್ತಂದೆಗಮೊ
ರ್ಮೆ ಜನಿಯಿಸಿರ್ದುತ್ತಮ ಬ್ರತಂಗುಡೆ ಗುರುಗೊ
ರ್ಮ್ಮೆ ಜನಿಯಿಸಿದಕಾರಣದಿಂ
ದ್ವಿಜರಾದರ್ದ್ವೆಸೆಗೇಂ ದ್ವಿಜನ್ಮರೆ ಪಾರ್ವರ್
ಸಮಯಪರೀಕ್ಷೆ ೨-೨೯

ಬಸವಣ್ಣ : ಕ್ರಿ.ಶ ೧೧೬೦

ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆಮಾಂಸ
ಭಾಂಡ ಬಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲ ಸಂಗಮದೇವಾ.

ತಂದೆ ನೀನು ತಾಯಿ ನೀನು
ಬಂಧು ನೀನು ಬಳಗ ನೀನು
ನೀನಿಲ್ಲದೆ ಮತ್ತಾರು ಇಲ್ಲವಯ್ಯ
ಕೂಡಲ ಸಂಗಮದೇವಾ
ಹಾಲಲದ್ದು ನೀರಲದ್ದು

ಹೊಲೆಯಮಾದಿಗ ಭಕ್ತನಾದಡೆ
ಆತನ ಮನೆಯ ಸೊಣಗಂಗೆ
ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡೆನೆ
ನೆಲನನನುಗ್ಘಡಿಸಿ ಉಘೆ, ಚಾಂಗು ಭಲಾ ಎಂದು
ಕುಲಕಧಿಕ ಹಾರುವಂಗೆ ಸಿದ್ಧಿಗೆಯ್ಯಿಸಲೆ
ನಿಮ್ಮ ಶರಣರ ಮಹಿಮೆ ಘನಕ್ಕೆ ಘನ
ಎಲೆ ಕೂಡಲ ಸಂಗಮದೇವಾ.

ಮಡಕೆ ದೈವ ಮೊರದೈವ ಬೀದಿಯ ಕಲ್ಲುದೈವ
ಹಣಿಗೆ ದೈವ ಬಿಲ್ಲನಾರಿ ದೈವ ಕಾಣಿರೋ
ಕೊಳಗ ದೈವ ಗಿಣ್ಣಲು ದೈವ ಕಾಣಿರೊ
ದೈವ ದೈವವೆಂದು ಕಾಲಿಡಲಿಂಬಿಲ್ಲ
ದೈವನೊಬ್ಬನೆ ಕೂಡಲ ಸಂಗಮದೇವಾ

ಬ್ರಾಹ್ಮಣನೆ ಅಧಿಕವೆಂಬರಿಭೋ, ಆ ಮಾತದು ಮಿಥ್ಯಾ
ಬ್ರಾಹ್ಮಣನಾರೆಂದರಿಯಿರಿ ಬ್ರಾಹ್ಮಣನೆ ಶಿವನು
'ವರ್ಣಾನಾಂ ಬ್ರಾಹ್ಮಣೊ ದೈವ' ವೆಂಬುದು ನಿಶ್ಚಯ
ಆ ವರ್ಣಭಾವವೆಂದಡೆ ಬ್ರಹ್ಮ ವಿಷ್ಣು ಮಾಹೇಶ್ವರ ಇಂದ್ರ
ಈ ನಾಲ್ವರು ಜಾತಿವರ್ಗಕ್ಕೆ ಸಲುವರು
ಇಂತೀ ವರ್ಣಂಗಳೆಲ್ಲಕ್ಕೆ ಶಿವನೆ ಗುರು
ಆ ಸದಾಶಿವನ ಗುರುತ್ವಕ್ಕೆ ಏನು ಲಕ್ಷಣವೆಂದಡೆ
ಸರ್ವಭೂತಂಗಳೊಳಗೆ ಚೈತನ್ಯಾತ್ಮಕನಾಗಿಹನು
ಅದೆಂತೆಂದೊಡೆ
ಅಣೋರಣೀಯಾನ್ ಮಹತೋ ಮಹಿಯಾನ್.......
ಸೊಡ್ಡಳ ಬಾಚರಸ;

ಆಳವಾದ ಅಧ್ಯಯನದಿಂದ ಮತ್ತಷ್ಟು ಅಂಶಗಳು ಹೊರಬರುತ್ತವೆ. ಇದರಂತೆಯೇ ಬೌದ್ಧ ಮತ್ತು ತಾಂತ್ರಿಕ ಮತಗಳ ಹೊರ ರಚನೆಯೊಂದಿಗೆ ವೀರಶೈವ ಧರ್ಮದ ಹೊರ ರಚನೆಯನ್ನು ಹೋಲಿಸಿದರೆ ಸಾಮ್ಯ ಕಂಡು ಬರುತ್ತದೆ. ಇದರಿಂದ ಎಲ್ಲಾ ಮತಾಂತರ ಧರ್ಮಗಳಿಗೂ ಒಂದು ಸಾಮಾನ್ಯ ಚೌಕಟ್ಟಿನ ಮತಾಂತರ ಲಕ್ಷಣ ಸಿದ್ಧವಾಗಿತ್ತೆಂದು ತಿಳಿಯುತ್ತದೆ. ಅಲ್ಲದೆ ಜೈನ ಮತ್ತು ವೀರಶೈವ ಧರ್ಮಗಳು ಬ್ರಾಹ್ಮಣರನ್ನು ತೀವ್ರವಾಗಿ ವಿರೋಧಿಸಿದರೂ, ಬ್ರಾಹ್ಮಣತ್ವವನ್ನು ಸಾಧಿಸುವುದನ್ನೇ ಪರಮಗುರಿಯನ್ನಾಗಿ ಹೊಂದಿರುವುದೇ ಅಲ್ಲದೆ, ವ್ರತ/ದೀಕ್ಷೆಯಿಂದ ಸರ್ವ ವರ್ಣದವರನ್ನೂ ಬ್ರಾಹ್ಮಣರನ್ನಾಗಿಸಿದರೇ ಅಲ್ಲದೆ ತಾವೇ ಬ್ರಾಹ್ಮಣರಿಗಿಂತ ಉತ್ತಮ ಬ್ರಾಹ್ಮಣರು ಎಂದು ಘೋಷಿಸಿಕೊಂಡರು. ಅಂದರೆ ಯಾವುದೇ ಸುಧಾರಣೆ ಅಥವಾ ಕ್ರಾಂತಿಯ ಮತ ಅಸ್ತಿತ್ವಕ್ಕೆ ಬಂದರೂ, ವರ್ಣಾಶ್ರಮ ವ್ಯವಸ್ಥೆಯ 'ಮಾಡೆಲನ್ನೇ' ಅನುಕರಣ ಮಾಡಿ ಹೊಸ ತತ್ತ್ವಗಳನ್ನು ಬೋಧಿಸಿದುದು ಒಂದು ದುರಂತವೇ ಸರಿ. ಕಾಲಕ್ರಮದಲ್ಲಿ ಬಂದ ಶ್ರೇಣಿ, ಜಾತಿ ಮತ್ತು ಭಕ್ತಿ ಪಂಥಗಳು ಹುಟ್ಟಿದರೂ, ವರ್ಣಾಶ್ರಮ ಧರ್ಮವೇ ಅನುಕರಣೆಯ ವ್ಯವಸ್ಥಿತ ಆದರ್ಶ ಸಮಾಜವಾಗಿ ಸ್ಥಿರಹೊಂದಿತು. ಎಲ್ಲಾ ಪ್ರಯತ್ನಗಳೂ ಬ್ರಾಹ್ಮಣರ ಅನಂತರದ ಎರಡನೆಯ ಸ್ಥಾನಮಾನವನ್ನು ಸಮಾಜದಲ್ಲಿ ಪಡೆಯಲು ಪರಸ್ಪರ ಕಿತ್ತಾಡಿದ ದುರಂತವೇ ಧಾರ್ಮಿಕ ಇತಿಹಾಸವೆನ್ನಬಹುದು. ಕೆಳ ವರ್ಗದವರಿಗೆ ಮತಾಂತರದಿಂದ ವ್ರತ ಅಥವಾ ದೀಕ್ಷಾಬದ್ಧರಾಗಿ, ತಾವು ಹುಟ್ಟಿದ ಯೋನಿಯ ದೋಷದಿಂದ ಮುಕ್ತರಾಗಿ ಧಾರ್ಮಿಕ ಸ್ಥಿತಿಗತಿಯನ್ನು ಒಂದಿಷ್ಟು ಉತ್ತಮ ಪಡಿಸಿಕೊಳ್ಳುವ ಅವಕಾಶ ಒದಗಿತು. ಆದರೆ ವರ್ಣ ವ್ಯವಸ್ಥೆಯ ಜೊತೆಗೇ ಸಂಪ್ರದಾಯ ವಿರೋಧಿ ಮತಾಂತರದ ಮತಗಳಲ್ಲಿಯೂ ಒಂದು ರೀತಿಯ ರೂಪಾಂತರದ ವರ್ಣ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು ಜಾತಿ ಮತ್ತು ವರ್ಗ ಸೃಷ್ಟಿಯಿಂದ ಗೋಜು ಗೊಂಡಿತು. ಅಂತೂ ಮಾನವ ಧರ್ಮ ಬೋಧಿಸುವ, ಮುಕ್ತ ಹಸ್ತದಿಂದ ಎಲ್ಲರನ್ನೂ ಸ್ವಾಗತಿಸಿ ಸಮಾನತೆ ಸಾರುವ ಯಾವೊಂದು ಮತವೂ ಅಸ್ತಿತ್ವಕ್ಕೆ ಬರುವುದು ಅಸಾಧ್ಯವಾಯಿತು. ಬ್ರಾಹ್ಮಣರು ಧಾರ್ಮಿಕ ಶ್ರೇಷ್ಠತೆಯಿಂದ ಸಮಾಜದ ಶ್ರೇಣಿಯಲ್ಲಿ ಮೊದಲಿಗರಾಗಿಯೇ ಉಳಿದರೆ, ಸುಧಾರಣೆಯ ಅನ್ಯ ಮತಗಳು ಮತಾಂತರಗೊಳಿಸಿ, ಸಂಖ್ಯಾಬಲದಿಂದ ಸಮಾಜದ ಸ್ಥಾನಮಾನವನ್ನು, ಧಾರ್ಮಿಕ ಮುಖವಾಡದಿಂದ ಪಡೆಯಲು ಪ್ರಯತ್ನಿಸಿದವೇ ಹೊರತು, ವೈದಿಕ ಧರ್ಮಕ್ಕೆ ವಿರೋಧವಾಗಿ ಮಾನವ ಧರ್ಮ ಬೋಧಿಸುವ ಕ್ರಾಂತಿಕಾರಿ ಮತಗಳಾಗಲಿಲ್ಲ. ಬ್ರಾಹ್ಮಣರ ಮಾತೃ ಯೋನಿ ಮಹತ್ವದ ಬದಲಾಗಿ ದೀಕ್ಷಾ ಯೋನಿಯ ಮಹತ್ವ ಬೋಧಿಸಿದುದರಿಂದ ಹಿಂದಿನ ವ್ಯವಸ್ಥೆಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ. ಮಾತೃಯೋನಿಯಿಂದ ವರ್ಣ ವ್ಯವಸ್ಥೆಗೆ ದಾರಿಯಾದರೆ, ದೀಕ್ಷಾ ಯೋನಿಯಿಂದ ಒಳಪಂಗಡಗಳಿಗೆ ಅವಕಾಶವಾಯಿತು. ಭಾರತ ಸಮಾಜದ ಹೊರ ರಚನೆಯಲ್ಲಿ ವೈದಿಕ ಅವೈದಿಕ ಭೇದವಾಗಿ, ಅವೈದಿಕವಾದ ಮತಾಂತರದ ಧರ್ಮಗಳ ಒಳರಚನೆಯಲ್ಲಿ ಉಚ್ಚ ವರ್ಗದಿಂದ ಮತಾಂತರ ಹೊಂದಿದವರು ಶ್ರೇಷ್ಠರಾಗಿ ಧಾರ್ಮಿಕ ನಾಯಕರಾಗಿ ಆ ಮತದ ಭಾಷ್ಯಾಚಾರ್ಯರಾದರು. ಕೆಳವರ್ಗದಿಂದ ಮತಾಂತರ ಹೊಂದಿದವರು ಆ ಮತದ ಕನಿಷ್ಠರಾಗಿ ಉಚ್ಚವರ್ಗದವರ ಸೇವಕರಾದರು. ವೈದಿಕ ಸಂಪ್ರದಾಯವನ್ನು

ವಿರೋಧಿಸಿದ ಅವೈದಿಕ ಮತಗಳು ಮತಾಂತರ ಲಕ್ಷಣದ ಸಂಪ್ರದಾಯವೊಂದನ್ನು ರೂಪಿಸಿಕೊಂಡಂತೆ ಆಯಿತು.

ವೀರಶೈವ ಧರ್ಮವಾಗಲೀ, ವಚನ ಸ್ವರೂಪವಾಗಲೀ ಇದ್ದಕ್ಕಿದ್ದ ಹಾಗೆ ದೃಗ್ಗೋಚರವಾಗಲಿಲ್ಲ. ವಚನ ರಚನೆ ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗಲಿಲ್ಲ. ಅದಕ್ಕೆ ಅದರ ಹಿಂದೆ ಅನೇಕ ಪ್ರೇರಣೆಗಳಿವೆ. ವಚನ ರಚನೆಯ ಹಿನ್ನೆಲೆಯಲ್ಲಿ ತಮಿಳಿನ ಶೈವ ಧರ್ಮ, ಕರ್ಣಾಟಕದ ಒಂದು ಕಾರಣವಿದೆ. ವಚನ ರಚನೆಯ ಹಿನ್ನೆಲೆಯಲ್ಲಿ ತಮಿಳಿನ ಶೈವ ಧರ್ಮ, ಕರ್ಣಾಟಕದ ಜೈನ ಧರ್ಮ, ಬೌದ್ಧ ಧರ್ಮ, ವೈದಿಕ ಧರ್ಮ, ಹಿಂದೆ ಇದ್ದ ಕಾವ್ಯಗಳು ಮತ್ತು ಮುಖ್ಯವಾಗಿ ಗುಪ್ತ ಸಮಾಜದಲ್ಲಿ ವಚನ ರಚನೆಯ ಬೇರುಗಳನ್ನು ಗುರುತಿಸಬಹುದಾಗಿದೆ. ವಚನಕ್ಕಿಂತ ಹಿಂದೆ ಅಲಿಖಿತವಾಗಿದ್ದು ಕ್ರಮೇಣ ಲಿಖಿತ ಸ್ವರೂಪ ಪಡೆದ ವಿವಿಧ ಗುಪ್ತ ಸಮಾಜದ ಕೆಲವು ಸೂಕ್ತಿಗಳು ವಚನದಲ್ಲಿ ಹೇಗೆ ಪ್ರಭಾವ ಬೀರಿವೆ ಎಂಬುದನ್ನು ಗುರುತಿಸಬಹುದು. ಗುಪ್ತ ಸಮಾಜದ ಕೆಲವು ಮಾತುಗಳು:

ಪಂಚಕಾಮಾನ್ ಪರಿತ್ಯಜ್ಯ ತಪೋಭಿರ್ನ ಚ ಪೀಡಯೇತ್
ಸುಖೇನ ಸಾಧಯೇತ್ ಬೋಧಿಂ ಯೋಗತಂತ್ರಾನುಸಾರತಃ

ಪಂಚ ಕಾಮಗಳನ್ನು ತ್ಯಜಿಸಿ ತಪಸ್ಸಿನಿಂದ ತನ್ನನ್ನು ಪೀಡಿಸಿಕೊಳ್ಳಬಾರದು. ಯೋಗ ತಂತ್ರವನ್ನು ಅನುಸರಿಸಿ ಸುಖದಿಂದ ಜ್ಞಾನ ಸಾಧನೆ ಮಾಡಬೇಕು.

ಸಿದ್ಧ ಸಾಹಿತ್ಯ: ಪುಟ ೨೨

ಚಿತ್ತೇಕ ಸಅಲ ಚೀಅ ಭವ-ಣಿಬ್ಬಣ ಜಮ್ಮ ವಿಪ್ಪುರನ್ತಿ
ತಂ ಚಿಂತಾಮಣಿರೂಅಂ, ಪಣಮಹ ಇಚ್ಛ ಫಲಂ ದೇ॥

ಸರಹಪಾ : ಕ್ರಿ.ಶ. ೮ನೇ ಶತಮಾನ

ಅರ್ಥ: ಸಂಸಾರ ಮತ್ತು ಅದರ ನಿರೋಧ ಎರಡೂ ಚಿತ್ತದಿಂದಲೇ ಸ್ಫುರಿಸುತ್ತವೆ. ಚಿತ್ತವೇ ಎಲ್ಲದರ ಬೀಜ. ಅದು ಚಿಂತಾಮಣಿ ರೂಪಿಯಾದುದು. ಅದರ ಸೇವೆ ಮಾಡು. ಅದು ವಾಂಛಿತ ಫಲವನ್ನು ನೀಡುವುದು.

ಸಿದ್ಧ ಸಾಹಿತ್ಯ: ಪುಟ ೧೦೯

ಈ ದೋಹದ ಹಿನ್ನೆಲೆಯಲ್ಲಿ ಅನೇಕ ವಚನಕಾರರ ವಚನಗಳನ್ನು ಪರಿಶೀಲಿಸಬಹುದು. ಅಕ್ಕಮಹಾದೇವಿಯ ವಚನವನ್ನು ಉದಾಹರಿಸಬಹುದು-

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೆ ಬೀಜ
ಎನಗುಳ್ಳದೊಂದು ಮನ-
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ, ಚೆನ್ನಮಲ್ಲಿಕಾರ್ಜುನ

ಬ್ರಹ್ಮಣಹಿಮ ಜಾಣಂತ ಹಿ ಭೇಉಏಂವ್ ಪಢಿಅಉ ಏ ಚಉ ಬೇಉ॥
ಮಟ್ಟಿ ಪಾಣಿ ಕುಸ ಲಈ ಪಢಂತಿ। ಘರಹೀಂ ಬಈಸೀ ಅಗ್ಗಿ ಹುಣಂತ॥
ಕಜ್ಜೇ ವಿರಹಇಹುಅವಹ ಹೋಮೇ। ಅಕ್ಖಿಡಹಾ ವಿಅ ಕಡುಏಂ ಧೂಮೇಂ
ಸರಹಪಾ.

ಅರ್ಥ: ಬ್ರಾಹ್ಮಣರಿಗೆ ರಹಸ್ಯ ತಿಳಿಯದು. ಅವರು ವ್ಯರ್ಥವಾಗಿ ಓದುತ್ತಾರೆ. ಮಣ್ಣು ನೀರು, ದರ್ಭೆಯನ್ನು ತೆಗೆದುಕೊಂಡು ಮಂತ್ರ ಹೇಳುತ್ತಾರೆ. ಮನೆಯೊಳಗೆ ಕುಳಿತುಕೊಂಡು ಹೋಮದ ಕಹಿ ಹೊಗೆಯಿಂದ ತಮ್ಮ ಕಣ್ಣನ್ನು ಹಾಳುಮಾಡಿಕೊಳ್ಳುತ್ತಾರೆ.

ಸಿದ್ಧ ಸಾಹಿತ್ಯ: ಪುಟ ೧೧೧

ಬಸವಣ್ಣನವರ ಅನೇಕ ವಚನಗಳು ಈ ದೋಹದ ಅರ್ಥವನ್ನೆ ಹೊಂದಿವೆ. ಉದಾಹರಣೆಗೆ:

ಮಿಂಗುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗಹಿಡಿದು ಧ್ಯಾನವ ಮಾಡುವರಯ್ಯಾ
ಬಿಟ್ಟ ಮಂಡೆವೆರಸಿ ಬಾಯ ಮಿಡುಕಿಸುತೆ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯ-
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲ ಸಂಗನನರಿಯದೆ ಮೊರೆಯಿಡುವಂತೆ.
ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ, ಬೀದಿಯ ದೂಳವ ಹೊಯ್ದು
ಬೊಬ್ಬಿಟ್ಟೆಲ್ಲ ಕರೆವರಯ್ಯಾ
ಕೂಡಲ ಸಂಗಮದೇವನ ವಂದನೆಯ ಮರೆದು ನಿಂದಿಸುತ್ತಿದ್ದರು.

ಉಜು ರೇ ಉಜು ಛಡಿ ಮಾಲೇಹು ವಂಕ, ನಿಅಡಿ ಬೋಹಿ ಮಾ ಜಾಹು ರೇ ಲಂಕ
ಹಾಥೇರ ಕಂಕಣ ಲೇಹು ಮಾ ದಪ್ಪಣ, ಅಪಣೇ ಅಪಾ ಬೂಝುತು ನಿಅ-ಮಣ

ಅರ್ಥ: ಹತ್ತಿರದಲೆ ಇಹುದೀ ಬೋಧಿ, ಹೋಗದಿರು ಲಂಕೆಗೆ
ಕೈಯ ಕಂಕಣಕೆ ಏಕೆ ಕನ್ನಡಿ, ತನ್ನಲೆ ಕಾಣೊ ತನ್ನನು ಮನ॥

ಸಿದ್ಧ ಸಾಹಿತ್ಯ: ಪುಟ ೧೧೯

ವಚನಕಾರರ 'ಅರಿಯುವುದರ ಅರ್ಥವೂ' ಇದೇ ಆಗಿರುವುದನ್ನು ವಚನದಲ್ಲಿ ಕಾಣಬಹುದು.

ತಾಂತ್ರಿಕ ಪಂಥದಲ್ಲಿ ಬೆಡಗಿನ ವಚನಕ್ಕೆ ಒಂದು ವೈಶಿಷ್ಟ್ಯವಿದೆ. ಬೆಡಗಿನ ವಚನ ತಾಂತ್ರಿಕ ಮತದ ಒಂದು ಮುಖ್ಯ ಭಾಷೆ:

ಜಇ ತುಮ್ಹ ಭೂಸುಕ ಅಹೇರೀ ಜಾಇಬ ಮರಿಹಸಿ ಪಂಚ ಜನಾ
ಣಲಿಣೀವನ ಪಇಸಂತೇ ಹೋಯಿಸಿ ಏಕ್ಕು ಮಣಾ
ಜೇವಂತ ಮಾ ಏಹಿಣಿ ಮಏಲ ಣ ಅಣಿಹಿಲಿ
ಣಉ ಏಣು ಮಾಂಸೇ ಭೂಸುಕು ಪಉಮವಣ ಪಇಸಹಿಲಿ
ಮಾಅಜಾಲ ಪಸಾರಿ ಬಾಂಧೇಲಿ ಮಾಅ ಹರೀಣೀ
ಸದಗುರು ಬೋಹೆ ಭೂಝಿ ರೇ ಕಾಸು (ಕಾಹಿಣೀ)

ಭೂಸುಕ ನೀ ಹೋಹೊಡೆ ಬೇಂಟೆಗೆ, ಕೊಲ್ಲುವೆ ಐದು ಮಂದಿಯ
ನಳಿನೀ ವನವ ಹೊಕ್ಕು ಆಗುವೆ ಏಕಮನ
ಜೀವಿಯ ಕೊಲ್ಲದಿರು, ಮೃತವನೂ ನೋಡದಿರು,
ಮಾಂಸವಿಲ್ಲದೆ ಭೂಸುಕು ಹೊಗಲಾರೆ ಪದ್ಮವನವ
ಮಾಯಾಜಾಲವ ಪಸರಿಸಿ ಬಂಧಿಸು ಮಾಯಾ ಹರಿಣಿಯ
ಸದ್ಗುರು ಬೋಧೆಯಿಂದ ತಿಳಿ ಈ ಕಥನಿಯ

ಸಿದ್ಧ ಸಾಹಿತ್ಯ: ಪುಟ ೧೨೩

ಈ ದೋಹದೊಂದಿಗೆ ಬಸವಣ್ಣನವರ ವಚನವನ್ನು ಹೋಲಿಸಬಹುದು:

ಎಲ್ಲರ ಗಂಡರು ಬೇಂಟೆಯ ಹೋದರು
ನೀನೇಕೆ ಹೋಗೆ, ಎಲೆಗಂಡನೆ
ಸತ್ತುದ ತಾರದಿರು, ಕೈಮುಟ್ಟಿ ಕೊಲ್ಲದಿರು
ಅಡಗಿಲ್ಲದೆ ಮನೆಗೆ ಬಾರದಿರು
ದೇವರ ಧರ್ಮದಲೊಂದು ಬೇಂಟೆ ದೊರೆ ಕೊಂಡರೆ
ಕೂಡಲ ಸಂಗಮ ದೇವಂಗರ್ಪಿತವ ಮಾಡುವೆ, ಎಲೆ ಗಂಡನೆ,

ಮತ್ತೊಂದು ದೋಹವನ್ನು ಅಲ್ಲಮನ ಬೆಡಗಿನ ವಚನದೊಂದಿಗೆ ಹೋಲಿಸಬಹುದು:

ಸಹಜ ಪಲಾಂಣ ಪವನ ಕರಿ ಘೋಡಾ, ಲೈ ಲಗಾಮ್ ಚಿತ ಚಬಕ್ಕಾ
ಚೇತನಿ ಅಸವಾರ ಗ್ಯಾನ ಗುರೂಕರಿ, ಔರ್ ತಜೌ ಸಬ್ ಢಬಕಾ

ಅರ್ಥ: ಸಹಜವೇ ಹಲ್ಲಣ (ಜೀನು), ಪವನನೇ ಕುದುರೆ, ಲಯವೇ ಲಗಾಮು, ಚೇತನ (ಆತ್ಮ)ವನ್ನೇ ಸವಾರನನ್ನಾಗಿ ಮಾಡಿಕೋ, ಈ ರೀತಿ ಎಲ್ಲಾ ಉಪಾಯಗಳನ್ನೂ ತೊರೆದು ಸವಾರಿ ಮಾಡುತ್ತಾ ಗುರುಜ್ಞಾನವನ್ನು ಮುಟ್ಟು ಅದನ್ನು ಪಡೆ.

ಸಿದ್ಧ ಸಾಹಿತ್ಯ: ಪುಟ ೧೯೧

ಅಲ್ಲಮ:

ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವರು
ವೀರರೂ ಅಲ್ಲ ಧೀರರೂ ಅಲ್ಲ
ಇದು ಕಾರಣ
ನೆರೆಮೂರು ಲೋಕವೆಲ್ಲವೂ
ಹಲ್ಲಣವ ಹೊತ್ತುಕೊಂಡು ಬಳಲುತ್ತಿದಾರೆ
ಗುಹೇಶ್ವರನೆಂಬ ಲಿಂಗವನೆತ್ತಬಲ್ಲರೋ?

ಮತ್ತಷ್ಟು ಉದಾಹರಣೆಯಿಂದ ಲೇಖನವನ್ನು ದೀರ್ಘಗೊಳಿಸುವುದು ಅಸಗತ್ಯ. ವಚನ ರಚನೆಯ ಸ್ವರೂಪ ಮಾತ್ರ ಗುಪ್ತ ಸಮಾಜದ್ದು ಎಂಬುದಂತೂ ಸುಸ್ಪಷ್ಟ. ಬಹು ಹಿಂದಿನಿಂದ ನಡೆದು ಬರುತ್ತಿದ್ದ ಗುಪ್ತ ಸಮಾಜದ 'ಗುಹ್ಯಜಿಹ್ವೆ' ಯಲ್ಲಿ ಬಲ್ಲಿದರಾದ ಅನುಭಾವಿಗಳು ತಮ್ಮ ಜೀವನದಲ್ಲಿ ನಡೆನುಡಿಯ ಸಾಮರಸ್ಯದಿಂದ 'ಲಿಂಗದುಳುಮೆ'ಗೆ ತೊಡಗಿದುದರ ಫಲವೇ ವಚನ ರಚನೆ. ವಚನಕ್ಕೆ ವಿಶಿಷ್ಟವಾದ ಧಾರ್ಮಿಕ ವಿಧಿಯ ಪರಿಸರ ಅತ್ಯಗತ್ಯ. ಅದು ಗುಪ್ತವಾಗಿ ನಡೆಯುವುದೇ ಹೊರತು ಸಂತೆಯ ವ್ಯವಹಾರವಲ್ಲ. ಅಂದಿನ ರಾಜಕೀಯ ಅಸ್ಥಿರತೆ, ಸಾಮಾಜಿಕ, ಧಾರ್ಮಿಕ ಭ್ರಷ್ಟತೆಯ ವಿರುದ್ಧ ಇಂಥ ಗುಪ್ತ ಸಮಾಜದವರ ಸದಸ್ಯರನ್ನು 'ಇಷ್ಟಲಾಂಛನ'ದ ಕೆಳಗೆ ಶಿವ ಸಹೋದರರನ್ನಾಗಿ ಸಂಘಟಿಸಿದ ಯಶಸ್ಸು ಬಸವಣ್ಣನವರದು. ಆದರೆ ಚಳುವಳಿ ಧಾರ್ಮಿಕ ಸಂಘಟನೆಯ ಹೆಸರಿನಲ್ಲಿ ರಾಜಕೀಯದ ಸುಪ್ತಬಯಕೆ ಅಡಗಿರುವುದನ್ನು ಕಂಡ ಗುಪ್ತ ಸಮಾಜದವರು ಬೇಸತ್ತರು. ಅಲ್ಲದೆ ವ್ಯಕ್ತಿಪೂಜೆ, ತಾತ್ವಿಕ ಒಣಚರ್ಚೆ ಮತ್ತು ಉಚ್ಚವರ್ಗದವರ ಶುಷ್ಕ ಆಚರಣೆಯ ಒತ್ತಾಯಕ್ಕೆ ಬಗ್ಗದ, ಯಾವ ಕಟ್ಟುಕಟ್ಟಳೆ, ಮತ ಪಂಥಗಳಿಗೂ ಸೊಪ್ಪು ಹಾಕದ ಸಹಜ ಸಾಧಕ ಸಿದ್ಧರಾದ ಗುಪ್ತ ಸಮಾಜದವರು, ಮತ್ತೆ ವೀರಶೈವ ಧರ್ಮದ ಕಟ್ಟು ಕಟ್ಟಳೆಗೆ ಸಿಕ್ಕದೆ ಮರಳಿ ಗುಪ್ತ ಸಮಾಜಕ್ಕೆ ಹಿಂತಿರುಗಿ ತಮ್ಮತಮ್ಮ ಸಾಧನೆಯನ್ನು ಮುಂದುವರಿಸಿದುದೇ ವಚನ ಸ್ವರೂಪ ದೃಗ್ಗೋಚರವಾಗಿ ಮತ್ತೆ ಮಿಂಚಿನಂತೆ ಮಾಯವಾದುದು. ಒಟ್ಟನಲ್ಲಿ ಗುಪ್ತವಾಗಿದ್ದ ವಚನಸ್ವರೂಪ ವ್ಯಕ್ತವಾಗಿ ಮತ್ತೆ ಗುಪ್ತವಾದುದೇ ವಚನ ಸಾಹಿತ್ಯ ದ್ವೀಪವಾಗಿ ಸಂಶೋಧಕರಿಗೆ ಕಂಡಿತು. ಗುಪ್ತವಾದುದನ್ನು ಗುರುತಿಸುವ ಪ್ರಯತ್ನವನ್ನು ಯಾರೂ ಮಾಡಲಿಲ್ಲ. ವೀರಶೈವರು ಉಚ್ಚವರ್ಗದವರೊಂದಿಗೆ ತಮ್ಮನ್ನು ತಾವು ಕಂಡುಕೊಂಡದ್ದೇ ಕೆಳವರ್ಗದ ಗುಪ್ತ ಸಮಾಜದೊಂದಿಗೆ ಸಂಬಂಧ ಕಡಿದುಕೊಳ್ಳಲು ಕಾರಣವಾಯಿತು. ಗುಪ್ತಸಮಾಜದಲ್ಲಿ ಇಂದಿಗೂ ಮಾತೃಭಾಷೆಗಳಲ್ಲಿಯೂ ಅಲಿಖಿತ ರೂಪದಲ್ಲಿ ರಹಸ್ಯ ಸಾಧನೆಯ ವಿಧಿಗಳು, ತತ್ವಗಳು ಮುಂದುವರಿದಿರುವುದನ್ನು ಸಂಶೋಧಿಸಬಹುದು. ಆದರೆ ಅಂಥ ಗುಪ್ತ ಸಮಾಜದ ಒಳಪ್ರವೇಶ ಸದಸ್ಯೇತರರಾದ ಆಗುಂತಕರಿಗೆ ಅಷ್ಟು ಸುಲಭವಲ್ಲ ಎಂಬುದನ್ನು

ಯಾರೂ ಮರೆಯಬಾರದು. ಅಲ್ಲದೆ ಗುಪ್ತಸಮಾಜದವರ ವಚನ ಸಾಧನೆ ವೈದಿಕ ವೀರಶೈವರಿಂದ ಮಾನ್ಯವಾಗಲಿಲ್ಲ. ಅವರು ಕ್ರಮೇಣ ಸಂಸ್ಕೃತೀಕರಣಕ್ಕೆ ತಿರುಗಿಸಿದರು. ಗುಪ್ತಸಾಧಕರ ವಚನ ಅಲೇಖನವಾದ ಅನುಭವ. ಆದರೆ ಕ್ರಮೇಣ ಅಭಿವ್ಯಕ್ತಿಯೇ ಮುಖ್ಯವಾಗಿ ಅನುಭಾವ ಗೌಣವಾಯಿತು. ಅಭಿವ್ಯಕ್ತಿಯಲ್ಲಿ ಬುದ್ಧಿಯ ಕಸರತ್ತಿಗೆ ಪ್ರಾಧಾನ್ಯ ದೊರೆತು ಪಾಂಡಿತ್ಯ ಪ್ರದರ್ಶನವಾಯಿತು. ಶಾಸ್ತ್ರ, ತರ್ಕ, ಪಾಂಡಿತ್ಯದ ವ್ಯಾಖ್ಯಾನಕ್ಕೆ ಬೆಲೆ ಬಂದು ಅನಕ್ಷರಸ್ಥ ಅನುಭಾವಿಗಳು ಹಿಂದೆ ಬಿದ್ದರು. ವಚನ ರಚನೆ ಸ್ಥಗಿತಗೊಂಡು, ಅಸಂಘಟನೆ ತಲೆದೋರಿ, ವೀರಶೈವರಲ್ಲಿಯೇ ಹಲವು ಒಳಪಂಗಡಗಳ ಪಂಥಗಳಾಗಿ ಕ್ರಮೇಣ ವಚನ ಸಂಗ್ರಹ, ಸಂಕಲನ, ವ್ಯಾಖ್ಯಾನ ಮತ್ತು ವಚನಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸುವ ವಿದ್ವತ್ತಿನ ವ್ಯವಸಾಯ ಆರಂಭವಾಯಿತು. ಗುಪ್ತ ಸಮಾಜದವರ ಧೋರಣೆಗಳು ಜೀವಪರವಾಗಿರುವ ಬದುಕನ್ನೇ ಸೋಪಾನವಾಗಿ ಬಳಸಿ ಜೀವ ವಿರೋಧಿಯಾಗಿ ಸಹಜ ಸಮಾಧಿ ಸಾಧಿಸುವ ತತ್ವ ವೀರಶೈವರದ್ದು. ಶಬ್ದ ನಿಶ್ಶಬ್ದವಾಗುವ, ವಚನ ನಿರ್ವಚನವಾಗುವ, ಸಾಯದ ನೋಯದ ಸಹಜ ಸ್ಥಿತಿಯ ಅರಿವನ್ನು ಕರಿಗೊಳಿಸಿಕೊಳ್ಳುವ ನಿಲವು ಅವರದ್ದು. ಅಂಥವರನ್ನು ಧರ್ಮದ ಕಟ್ಟಿನಲ್ಲಿ, ಏಕ ದೇವೋಪಾಸನೆಯ ಪೂಜೆಯಲ್ಲಿ ಬಂಧಿಸುವ ಪ್ರಯತ್ನ ವ್ಯರ್ಥವಾಯಿತು. ಅಲ್ಲದೆ ಅವರನ್ನು ಸಂಘಟಿಸುವ ಪ್ರಯತ್ನದಲ್ಲಿ ಕೆಲವರು ಸೂಫಿ ಧರ್ಮದ ಪ್ರಭಾವವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅದೂ ಅಲ್ಲದೆ ವೀರಶೈವ ಧರ್ಮದಲ್ಲೇ ಉಚ್ಚವರ್ಗದ ವಚನಕಾರರ ಮಡಿವಂತಿಕೆಯಿಂದ ವೈದಿಕ ಅಂಶಗಳೇ ರೂಪಾಂತರದಿಂದ ನುಸುಳಿಕೊಂಡುದರಿಂದ, ತಮ್ಮ ಮೂಲ ಸ್ವರೂಪದಿಂದ ದೂರ ಸರಿಯುವ ಭಯದಿಂದ ವಚನ ರಚನೆ ಬಹಿರಂಗವಾಗಿ ಸ್ಥಗಿತಗೊಂಡಿರಬಹುದು. ಉದಾಹರಣೆಗೆ ಗುಪ್ತ ಸಮಾಜದಲ್ಲಿ ಗುರುವಿಗೆ ಅತ್ಯಂತ ಮಹತ್ವ ಉಂಟು. ಆದರೆ ವೀರಶೈವ ಧರ್ಮದಲ್ಲಿ ಗುರುವಿನ ಜೊತೆಗೆ ಜಂಗಮ ತತ್ವ ಬಂದಿತು. ಜಂಗಮ ತತ್ವವೇ ಅಧಿಕವಾಗಿ ಗುರು ಮತ್ತು ಜಂಗಮ-ಎರಡೂ ಗೊಂದಲಕ್ಕೆ ಸಿಕ್ಕಿದುವು. ಜಂಗಮಕ್ಕೆ ಬ್ರಾಹ್ಮಣನಿಗೆ ಸಂವಾದಿಯಾಗಿರುವ ಲಕ್ಷಣಗಳನ್ನು ಗುರುತಿಸಬಹುದು.

ವಚನ ಎಂದರೆ ವಾಗ್ರಚನೆಯಲ್ಲ. ವ್ಯಕ್ತಿ ದೀಕ್ಷಾಬದ್ಧನಾಗಿ ನಡೆ ನುಡಿಯ ಸಾಮರಸ್ಯದಿಂದ ಆತ್ಮಾನುಭವಿಯಾಗಿ ಸಾಧಿಸಿದ ಸ್ವಯಮಾನುಭವ; ವೇದ, ಪುರಾಣ, ಆಗಮ, ಛಂದಸ್ಸು, ಕಾವ್ಯ, ವ್ಯಾಕರಣ, ಶಾಸ್ತ್ರ, ತರ್ಕ- ಎಲ್ಲವೂ ವಾಗದ್ವೈತ, ಅವು ಮಾಯಾ ವೇಷದವು, ಯೋನಿಮೂಲವಾದವು. ಯಾರಾದರೂ ಅಧ್ಯಯನದಿಂದ ಸಾಧಿಸಬಹುದಾದವು. ಅವು ಬ್ರಹ್ಮದ ಎಂಜಲು, ಹೊಟ್ಟೆಪಾಡಿನ ಸಾಧನೆಗಳು. ಅವೆಲ್ಲವೂ ಪರಿಭಾಷೆಯ ಪರತತ್ವ. ಆನೆಯನೇರಿದ ಮಾವಟಿಗ ಚಕ್ರೇಶನಾಗಲಾರ, ಹಾಗೆಯೇ ಶಾಸ್ತ್ರ ಓದಿದವನು ಕರ್ಮರಹಿತನಾಗಲಾರನು. ಆದ್ದರಿಂದಲೇ ವಚನ ಎಂದರೆ ಜಿಹ್ವೇಂದ್ರಿಯ ಮತ್ತು ಗುಹ್ಯೇಂದ್ರಿಯ ಮೀರಿ, ವಾಣಿಯ ಹಂಗುತೊರೆದು ಅರಿವು ನಿಶ್ಚಯವಾದಾಗಲೇ ಸ್ವಾನುಭವ ಸಾಧ್ಯ ಎನ್ನುತ್ತಾರೆ ಶರಣರು. ವಚನ 'ಸಂಸ್ಕೃತ ಮಾತಿನ ಪಸರದ ಮುಂದೆ ಇಕ್ಕಿಕೊಂಡು ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ' ಹಾಕುವಂತದಲ್ಲ:

ಹಿಂದಣ ಕಥೆಯ ಮುಂದೆ ಪೇಳುವ ಕಾವ್ಯವಲ್ಲ
ಮುಂದಣ ಕತೆಯನಿಂದು ಹೇಳುವ ನಾಟಕವಲ್ಲ
ಬಂದ ಶಬ್ದವ ಸಂದಿಲ್ಲದುಸುರುವೆನೆಂಬ ಅಭ್ಯಾಸಿಯಲ್ಲ
ಛಂದ ವಿಚ್ಛಂದಯೆಂಬ ಸಂದೇಹಿಯಲ್ಲ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರ ಸ್ವಯಾನುಭವದ ಪರಿ ಬೇರೆ.
-ಆದಯ್ಯ.

ವಚನ ರಚನೆಯ ಲಕ್ಷಣವನ್ನು ಅರಿತು ಶಾಸ್ತ್ರಕ್ಕೆ, ಸಂತೋಷಕ್ಕೆ, ತರ್ಕಕ್ಕೆ, ಗೆಲ್ಲಕ್ಕೆ, ಮನೆಮನೆಗೆ ಹೋಗಿ ಪಡೆವ ಸಂಬಳಕ್ಕೆ, ಪ್ರತಿಷ್ಠೆಗೆ ವಚನವನ್ನು ಬಳಸಿದವರು ಅನುಭಾವಿಯಾಗಲಾರರು. ಅಂಥವರು ಶಬ್ದ ಸೂತಕಿಗಳಾಗುತ್ತಾರೆ. ವಚನ ರಚನೆಗೆ ಮಾಡುವವನ ಭಕ್ತಿ "ಅಲಗಿನ ಘೃತವ ಶ್ವಾನ ನೆಕ್ಕಿ ನಾಲಗೆ ಹರಿದು ಮತ್ತಲಗ ಕಂಡು ತೊಲಗಿದಂತಾಗುತ್ತದೆ". ಆದ್ದರಿಂದ ವಚನ ಎಂದರೆ ಶಿವವಚನ, ಗುರುವಚನ ಮತ್ತು ಪುರಾತನರ ವಚನ. ಅದು ಅಲೇಖನದ ಲೇಖ. ವಚನಕಾರನಿಗೂ ಶಿವನಿಗೂ ಭೇದವಿಲ್ಲ.

ನಾ ಕರ್ತನೆಂದು ಹಾಡಿದೆನು ವಚನವ
ನಾನೇ ನಿತ್ಯನೆಂದು ಕಟ್ಟಿದೆನು ಬಿರುದ
ನಾನೇ ನಿರವಯ ಸ್ಥಲದಲ್ಲಿ ನಿಂದು ಓದಿದೆನು ವಚನವ
ನಾ ಓದಿದುದೆಲ್ಲಾ ನೀ ಓದಿದ್ದು, ನಾ ಕಟ್ಟಿದ ಬಿರುದು ನಿನ್ನ ಬಿರುದು
ನಾನರಿದ ಅರಿವೆಲ್ಲಾ ನಿನ್ನ ಅರಿವು
ನಾ ಕಟ್ಟಿದ ಬಿರುದಿಂಗೆ ಹಿಂದೆಗೆವನಲ್ಲ
ಅಮುಗೇಶ್ವರ ಲಿಂಗಕ್ಕೂ ಎನಗೂ ಪ್ರಭುದೇವರು ಗುರುವಲ್ಲದೆ
ಈರೇಳು ಲೋಕ ಹದಿನಾಲ್ಕು ಭುವನದಲ್ಲಿ ಆರನೂ ಕಾಣೆ.

ಎಂದರೆ ಸಿದ್ಧರಾಮಣ್ಣನಾದರೂ ಅಂಥ ಅರವತ್ತೆಂಟು ಸಾವಿರ ವಚನವನ್ನು ಹಾಡಿ ಸೋತಿತೆನ್ನ ಮನ, ಹಾಡುವುದೊಂದು ವಚನ, ನೋಡುವುದೊಂದು ವಚನ, ವಿಷಯವ ಬಿಟ್ಟು ನಿರ್ವಿಷಯವಾಗುವುದೊಂದೇ ವಚನ ಎನ್ನುತ್ತಾನೆ. ಅಂಥ ವಚನಕ್ಕೆ ವ್ಯಾಸನ ಪುರಾಣ, ಶತರುದ್ರೀಯ ಯಾಗ, ಗಾಯತ್ರೀ ಲಕ್ಷ ಜಪ ಸಮನಲ್ಲ. ಅಂಥ ವಚನಕ್ಕೆ ಹೆಸರಿಡಬಹುದಾದರೆ 'ನಿಶ್ಶಬ್ದ ನಿರವಲಯ ಪುರಾಣ' ಎಂದರು ಶರಣರು. ಇಂಥ ಅರ್ಥವತ್ತಾದ ಧಾರ್ಮಿಕ ಸಾಧನೆಯ ಪರಿಸರದ ವಚನ, ಕೆಲವು ವಚನಕಾರರಿಂದ ವಚನ ರಚನೆಯಾಗಿ ಲಕ್ಷಣಬದ್ಧವಾಗಿ ಬಳಸಿದುದು ವಚನ ಬತ್ತುವುದಕ್ಕೆ ಹಲವು ಕಾರಣಗಳಲ್ಲಿ ಒಂದಾಗಿರಬಹುದು ಎಂದು ಪರಿಗಣಿಸಬಹುದು. ಅಸಂಖ್ಯಾತ ಮಂದಿ ಸಂಘಟಿತವಾದದ್ದೇ ಅಲೇಖನ ಲೇಖನವಾದ ವಚನ ಲೇಖನ ರೂಪತಾಳಿ

ಮೂಲ ಸ್ವರೂಪ ಕಳೆದುಕೊಂಡುದರಿಂದ, ವ್ಯಕ್ತವಾದದ್ದು ಮತ್ತೆ ಗುಪ್ತವಾಯಿತು. ಈ ಅಂತರದಲ್ಲಿ ವಚನ ಲಕ್ಷಣ ಬದ್ಧವಾಗಿ ವಚನ ರಚನಕಾರರಿಂದ ಒಂದು ಬಂಧವನ್ನು ಪಡೆದು ವಿಶಿಷ್ಟವಾಗಿ ಕಂಡದ್ದೇ ಅದರ ಒಂದು ವೈಶಿಷ್ಟ್ಯವಾಯಿತು.

ಹೀಗೆ ವಚನಕಾರರಲ್ಲಿಯೇ ವಚನಕಾರರು ಮತ್ತು ವಚನ ರಚನಕಾರರು ಎಂದು ಎರಡು ಗುಂಪು ಸೃಷ್ಟಿಯಾಯಿತು. ಸ್ವಾನುಭವದಿಂದ ತಮ್ಮ ಬದುಕನ್ನು ಕಂಡುಕೊಂಡವರು ವಚನಕಾರರಾದರು. ಶಾಸ್ತ್ರ ಸಮ್ಮತವಾಗಿ ಕಲಿತು, ಲಕ್ಷಣಬದ್ಧವಾಗಿ ಮಾತಿನ ಮಾಲೆಯನ್ನು ಕಟ್ಟಿ ತಮ್ಮ ಬದುಕನ್ನು ಸಮರ್ಥಿಸಿಕೊಂಡವರು ವಚನ ರಚನಕಾರರಾದರು. ವಚನ ಸ್ವಯಾನುಭಾವವಾಗಿ ಸಹಜ ಸಾಧನೆಯಾಯಿತು. ವಚನ ರಚನೆ ಮಾತಿನ ಮಾಲೆಯಾಗಿ ಪಸರವಾಯಿತು.

ವಚನ ಸೃಷ್ಟಿ ನಿಂತು ವಚನ ರಚನೆಯ ಸಂಪ್ರದಾಯ ಮುಂದುವರಿದದ್ದೇ ಮುಂದಿನ ವೀರಶೈವ ಸಾಹಿತ್ಯ ರಚನೆಗೆ ದಾರಿಯಾಯಿತು. ವಚನ ರಚನೆ ವೀರಶೈವ ಕಾವ್ಯ, ವೀರಶೈವ ಪುರಾಣ ಮತ್ತು ವೀರಶೈವ ಧಾರ್ಮಿಕ ಶಾಸ್ತ್ರ ರಚನೆಗೆ ಆಧಾರವಾಯಿತು. ಮುಂದೆ ಸಾಮಾನ್ಯ ವರ್ಗದ ವಚನ ನಿಂತು, ವೀರಶೈವ ಪುರೋಹಿತ ವರ್ಗದಿಂದ ಸಾಹಿತ್ಯ ರಚನೆಯಾಯಿತು. ಅದರಲ್ಲಿ ವೀರಶೈವ ಅಂಶಗಳಿಗಿಂತ ಶೈವ ಅಂಶಗಳು ಪ್ರಧಾನವಾದುವು.

ಜೈನ ಕವಿಗಳು ಲೌಕಿಕ ಮತ್ತು ಆಗಮಿಕ- ಎಂದು ಕಾವ್ಯ ಬರೆಯುವ ಸಂಪ್ರದಾಯವನ್ನು ಹಾಕಿದಂತೆ, ವೀರಶೈವ ಕವಿಗಳೂ ತಮ್ಮದೇ ಆದ ಕಾವ್ಯ ಸಂಪ್ರದಾಯವನ್ನು ರೂಢಿಗೆ ತಂದರು. ಅದರಂತೆ ಶಿವಶರಣರನ್ನು ಮಾತ್ರ ಕುರಿತು ಕಾವ್ಯ ರಚಿಸುವಂತೆ ದೀಕ್ಷಾಬದ್ಧರಾದರು. ರಾಜರು ಮತ್ತು ಭವಿಗಳು ಅವರ ಕಾವ್ಯದಿಂದ ಹೊರತಾದರು. ಭಕ್ತರು ಎಂದರೆ ಅಜಾತರೇ ಅವರ ಕಾವ್ಯದ ನಾಯಕರಾದರು. ವೇದಾಗಮ ಪುರಾಣೋಕ್ತವಾಗಿ ಶಿವಭಕ್ತರ ಬದುಕನ್ನು ಪವಾಡವಾಗಿ ಚಿತ್ರಿಸಿದರು. ವಚನಗಳಲ್ಲಿ ವಚನಕಾರರ ವೈಯಕ್ತಿಕವಾದ ಜೀವನದ ಅಂಶಗಳು ಸುಳಿಯಲಿಲ್ಲ. ವಚನಕಾರರ ಮುಕ್ತ ಚಿಂತನೆಯ ತತ್ತ್ವ, ಧೀಮಂತ ಸಾಧಕ ಜೀವನದ ಸಾಹಸದ ಅನುಭವ ಕವಿಗಳ ವಸ್ತುವಾಗಲಿಲ್ಲ. ಶರಣರ ಗೊತ್ತಿರದ ವೈಯಕ್ತಿಕವಾದ ಬದುಕೇ ಹಲವು ಕವಿಗಳ ಕಾವ್ಯದ ವಸ್ತುವಾದುದರಿಂದ, ಹಲವು ರೀತಿಯ ಕಲ್ಪನೆಯ ಘಟನೆಗಳ ನಿರೂಪಣೆಯಿಂದ, ಶರಣರ ಬದುಕು, ತೀವ್ರ ಭಿನ್ನಾಭಿಪ್ರಾಯದ ಸುಳಿಯಲ್ಲಿ ಸಿಕ್ಕಿತು. ಮುಂದಿನ ಶರಣ ಜನಾಂಗದ ಸ್ವಾನುಭವದ ಸಾಧನೆಯ ಅಭಾವದ ಕೊರತೆಯನ್ನು, ಶರಣರ ಜೀವನದಲ್ಲಿ ಪವಾಡಗಳ ವರ್ಣನೆಯಿಂದ ತೂಗಿಸಿಕೊಂಡರು. ಮತ್ತೆ ವೈದಿಕ ಮತ್ತು ಜೈನ ಪುರಾಣಗಳ ಅನುಕರಣೆಯ ಜಾಡಿನಲ್ಲಿಯೇ ವೀರಶೈವ ಪುರಾಣ ರಚನೆಯಾದವು. ಕಾವ್ಯದ ಗುರಿ ಭಕ್ತರಿಗೆ, ಅದೂ ಶಿವಭಕ್ತರಿಗೆ ಮಾತ್ರ ಸೀಮಿತವಾದುದರಿಂದ ಸಮಗ್ರ ಜೀವನದ ಅನುಭವದ ದ್ರವ್ಯದ ಅಭಿವ್ಯಕ್ತಿಗೆ ಅವಕಾಶವಾಗದೆ ಸೃಜನಶೀಲ ಶಕ್ತಿಯನ್ನು ವೀರಶೈವ ಸಾಹಿತ್ಯ ಕಳೆದುಕೊಂಡು, ಕೇವಲ

ಅನುಕರಣ ಕೃತಿಗಳು ಸೃಷ್ಟಿಯಾದವು. ಸಮರ್ಥ ಕವಿಗಳಾದ ಹರಿಹರ, ರಾಘವಾಂಕ ಮತ್ತು ಚಾಮರಸರನ್ನು ಬಿಟ್ಟರೆ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯನ್ನು ಕೊಟ್ಟ ವೀರಶೈವ ಕವಿಗಳ ಸಂಖ್ಯೆ ಇಲ್ಲವೇ ಇಲ್ಲ ಎನ್ನಬಹುದು. ಕಾವ್ಯಕ್ಕೆ ಧಾರ್ಮಿಕ ಭಿತ್ತಿಯೊಂದು ಸಿದ್ಧವಾಗಿ ಸಮಗ್ರ ಜನತೆಯ ಆಸಕ್ತಿಯನ್ನು ವೀರಶೈವ ಸಾಹಿತ್ಯ ಸೆಳೆಯದಾಯಿತು. ಕೇವಲ ಒಂದು ವರ್ಗದ ಮಿತಿಯ ಸಂಸ್ಕೃತಿ ಕಾವ್ಯಗಳ ವಸ್ತುವಾಗಿ, ಎಲ್ಲಾ ವರ್ಗದ ವೈವಿಧ್ಯಮಯ ಬದುಕಿಗೆ ಬೆನ್ನು ತಿರುಗಿಸಿದುದರಿಂದ, ಕಾವ್ಯಗಳಲ್ಲಿ ವೈವಿಧ್ಯ, ವಿಸ್ತಾರ ಮತ್ತು ಮಾನವೀಯ ಮೌಲ್ಯಗಳು ಮಿಡಿಯದಾದವು. ಪುರಾಣ ಮತ್ತು ಕಾವ್ಯಗಳಲ್ಲಿ ಅದೇ ಅದೇ ಬದುಕು ಅನುಕರಣವಾಗಿ ಕಾವನ್ನು ಕಳೆದುಕೊಂಡಿತು. 'ಹಾಡಿದುದೊಂದೆ ವಚನ ನೋಡಿದುದೊಂದೆ ವಚನ ವಿಷಯವ ಬಿಟ್ಟು ನಿರ್ವಿಷಯವಾಗುವುದು' ಎಂದು ವಚನಕಾರ ಹೇಳಿದಂತೆ, ವೀರಶೈವ ಕವಿಗಳೂ ಶರಣರ ಒಂದೇ ವಿಷಯವನ್ನು ಹತ್ತಾರು ಕೃತಿಗಳಾಗಿ ಕಟ್ಟಿದರು. ಇದಕ್ಕೆ ಬಸವಣ್ಣನವರ ಬದುಕನ್ನು ಕುರಿತಾದ ಕಾವ್ಯಗಳನ್ನೇ ಉದಾಹರಣೆಯಾಗಿ ಕೊಡಬಹುದು. ಯಜ್ಞಭಾಗವನ್ನು ಬೇಡುವ ದಕ್ಷನ ಕತೆಯೂ ವೀರಭದ್ರ ವಿಜಯವಾಗಿ ಹಲವು ಕೃತಿಗಳ ವಸ್ತುವಾಯಿತು. ವಚನಕಾರರು ಯಜ್ಞ ವಿರೋಧಿಯಾದರೆ, ಮುಂದಿನ ವೀರಶೈವ ಕವಿಗಳು ಯಜ್ಞವನ್ನು ವಿರೋಧಿಸದ, ಆದರೆ ಯಜ್ಞಭಾಗದ ಹಕ್ಕಿಗಾಗಿ ಹೋರಾಡಿದ ಕತೆಯನ್ನೇ ಕಾವ್ಯದ ವಸ್ತುವನ್ನಾಗಿಸಿಕೊಂಡು ವೈದಿಕರೊಂದಿಗೆ ಧಾರ್ಮಿಕ ಹಕ್ಕುಗಳಿಗೆ ಸಮ ಸ್ಪರ್ಧಿಗಳಾದರು. ಐತಿಹಾಸಿಕ ವ್ಯಕ್ತಿಗಳಾಗಿದ್ದ ವಚನಕಾರರೇ ಮುಂದಿನ ಕೃತಿಗಳಲ್ಲಿ ಪುರಾಣ ಪುಣ್ಯ ಪುರುಷರಾಗಿ ಪವಾಡ ಮೆರೆದರು.

> **ಕಾಷ್ಠವ ಸುವರ್ಣವ ಮಾಡಿದೆನೆಂಬ ಘಾತುಕತನವೆ ನಿಮ್ಮ ಭಕ್ತಿ?**
> **ಸಕಲ ದೇಶ ಕೋಶ ವಾಸ ಭಂಡಾರ ಸವಾಲಕ್ಷ ಮುಂತಾದ ಸಂಬಂಧ**
> **ಸ್ತ್ರೀಯರ ಬಿಟ್ಟು ಬಂದೆವೆಂಬ ಕೈಕೂಲಿಯೆ ನಿಮ್ಮ ಭಕ್ತಿ**

ಎಂದು ದಿಟ್ಟತನದಿಂದ ಪುರಾತನರ ಬದುಕನ್ನೇ ಪ್ರಶ್ನಿಸಿ, ಭಕ್ತಿಯ ವ್ಯಾಪಾರವನ್ನು ತೀವ್ರವಾಗಿ ಖಂಡಿಸಿರುವುದು ಕಂಡುಬರುತ್ತದೆ. ಯಂತ್ರ ತಂತ್ರ ಮಂತ್ರ ಪವಾಡದ ಕಣ್ಣು ಕಟ್ಟು ವಿದ್ಯೆಗೆ ಶರಣರ ಸಾಧನೆಯಲ್ಲಿ ಅವಕಾಶವಿಲ್ಲ. ಆದರೆ ಮುಂದಿನ ವೀರಶೈವ ಕವಿಗಳ ಕಥಾನಾಯಕರ ಕೊರಳಿಗೆ ಮೋಳಿಗೆ ಮಹಾದೇವಿಯ ನುಡಿಯೇ ನೇಣಾದುದನ್ನು ಕಾಣಬಹುದಾಗಿದೆ.

ವಚನಕಾರರ ಮುಕ್ತ ಚಿಂತನೆ, ಬಿಚ್ಚು ಮನಸ್ಸಿನ ದಿಟ್ಟತನದ ಕಿಡಿ ನುಡಿಗಳು ಸಾಧನೆಯ ಸಾಹಸದ ಅನುಭಾವಗಳು ಕಾವ್ಯಗಳಲ್ಲಿ ಅಭಿವ್ಯಕ್ತವಾಗಲಿಲ್ಲ. ವಚನಕಾರರು ಶಾಸ್ತ್ರ ಪುರಾಣ ವಿರೋಧಿಸಿದರು. ಆದರೆ ಕವಿಗಳ ಕೃತಿಗಳಲ್ಲಿ ಪುರಾಣ ಅಂಶಗಳಿಗೇ ಪ್ರಾಧಾನ್ಯತೆ ದೊರೆಯಿತು. ಶರಣರನ್ನು ಪುರಾಣ ವ್ಯಕ್ತಿಗಳೊಂದಿಗೆ ಸಮೀಕರಿಸಿದರು. ವಚನಕಾರರ ಬೇರನ್ನು ಭೂಮಿಯಿಂದ ಕಿತ್ತು ಕೈಲಾಸದಲ್ಲಿ ನೆಟ್ಟು, ಯಾವುದೋ ತಪ್ಪಿಗೆ ಭೂಮಿಗೆ ಅವತರಿಸಿ, ಶಿವಭಕ್ತಿ ಪ್ರಚಾರದಿಂದ,

ದೋಷ ಮುಕ್ತರಾಗಿ ಮರಳಿ ಕೈಲಾಸ ಪ್ರಾಪ್ತಿಯಾಗುವಂತೆ ಚಿತ್ರಿಸಿದರು. ವಚನಕಾರರು ಹುಟ್ಟಿದ ನೆಲವನ್ನೇ ತಾತ್ಕಾಲಿಕ ತಂಗುದಾಣವನ್ನಾಗಿಸಿ ಕಾವ್ಯ ಕಟ್ಟಿದರು. ಕಾವ್ಯ ರಚಿಸಿದ ಕವಿಗಳೂ ಮುಂದಿನ ಪೀಳಿಗೆಯ ಕವಿಗಳಿಗೆ ಶರಣರಾಗಿ ಕಾವ್ಯದ ನಾಯಕರಾದುದು ಒಂದು ವೈಶಿಷ್ಟ್ಯ. ವಚನಕಾರರ ವಿಚಾರ ಕ್ರಾಂತಿಯ ಮುಂದೆ ಎಂಥ ನೀರಸ ವಿಚಾರಧಾರೆ ಕಾವ್ಯದಿಂದ ಸೃಷ್ಟಿಯಾಯಿತು ಎನ್ನಿಸುತ್ತದೆ. ವಚನದಂಥ ಹುಲುಸು ಫಸಲಿನ ಅನಂತರ ಬರಡು ವ್ಯವಸಾಯ ಎನ್ನಿಸುತ್ತದೆ. ವಚನಕಾರರು ಜೀವನದಲ್ಲಿ ಸಾಧಿಸಿ ಸಿದ್ಧಿಪಡೆದ ಷಟ್‌ಸ್ಥಲ, ಪಂಚಾಚಾರ ಮತ್ತು ಅಷ್ಟಾವರಣತತ್ತ್ವಗಳನ್ನು ಕವಿಗಳು ಅವುಗಳ ಲಕ್ಷಣವನ್ನು ವರ್ಣನೆಯನ್ನಾಗಿಸಿ ಕಾವ್ಯದಲ್ಲಿ ನೀರಸವಾಗಿ ತಂದರು. ಆದ್ದರಿಂದಲೇ ವೀರಶೈವ ಕೃತಿಗಳು ಇತ್ತ ಕಾವ್ಯವೂ ಆಗದೆ, ಅತ್ತ ಧರ್ಮಕೃತಿಗಳೂ ಆಗದೆ ಕೇವಲ ಅನುಕರಣ ಕೃತಿಗಳಾಗಿ ಸತ್ವ ಕಳೆದುಕೊಂಡವು. ಜನಸಾಮಾನ್ಯರ ನೋವು ನಲಿವುಗಳಿಗೆ ಶಕ್ತಿಯುತ ಮಾಧ್ಯಮವಾಗಿ ಪ್ರಬಲ ಸಾಹಿತ್ಯ ಸೃಷ್ಟಿಯಾಗಬಹುದಾದ ಅಪೂರ್ವ ಅವಕಾಶ ಕಳೆದುಕೊಂಡುದು ವೀರಶೈವ ಕವಿಗಳ ದುರದೃಷ್ಟವೇ ಸರಿ. ಜೀವನದ ಅತ್ಯಂತ ಪ್ರಮುಖ ಅಂಶಗಳು ಗೌಣವಾಗಿ, ಯಾವುವು ಗೌಣವೋ ಅವೇ ಕೃತಿಗಳಲ್ಲಿ ಪ್ರಧಾನ ಅಂಶಗಳಾದುವು. ಅಲ್ಲಮ ಪ್ರೇಮಲತೆಯನ್ನು ಕಾಮಿಸಿ ವಿರಹಕ್ಕೆ ಸಿಕ್ಕಿದನೋ ಇಲ್ಲವೋ ; ಅಲ್ಲಮ ಶರಣನೋ ಶೂದ್ರನೋ; ಬಸವಣ್ಣ ಸೇವೆ ಸಲ್ಲಿಸಿದ ಬಿಜ್ಜಳ ಜೈನನೋ ಶೈವನೋ; ಬಸವಣ್ಣ ಬಿಜ್ಜಳನ ಭಂಡಾರವನ್ನು ಜಂಗಮರಿಗೆ ಬಳಸಿದನೋ ಇಲ್ಲವೋ; ಬಸವಣ್ಣ ವಿಟಜಂಗಮರಿಗೆ ತನ್ನ ಪತ್ನಿಯನ್ನು ಅರ್ಪಿಸಿದನೋ ಇಲ್ಲವೋ; ಅಂತ್ಯದಲ್ಲಿ ಬಸವಣ್ಣ ಕೊಲೆಯಾದನೋ ಐಕ್ಯನಾದನೋ; ಬಿಜ್ಜಳನನ್ನು ಕೊಲ್ಲಿಸಿದವನು ಬಸವಣ್ಣನೋ ಅವನ ಅನುಯಾಯಿಗಳೋ; ಸಿದ್ಧರಾಮನಿಗೆ ಲಿಂಗದೀಕ್ಷೆ ಆಗಿತ್ತೋ ಇಲ್ಲವೋ ; ಆಗಿದ್ದರೆ ದೀಕ್ಷೆ ಕೊಟ್ಟವರು ಯಾರು; ಸಿದ್ಧರಾಮ ಶೈವನೋ ವೀರಶೈವನೋ; ಅವನು ಕಲ್ಯಾಣಕ್ಕೆ ಬಂದಿದ್ದನೋ ಇಲ್ಲವೋ; ಅವನ ತಂದೆ ತಾಯಿಗಳು ಭಕ್ತರೋ ಭವಿಗಳೋ; ಚನ್ನಬಸವಣ್ಣನ ತಂದೆ ಯಾರು? ತಾಯಿಯ ಹೆಸರೇ ಕೇಳಿಬರಲು ಕಾರಣವೇನು? ಶಿವ, ಬಸವಣ್ಣ ಮತ್ತು ಕಕ್ಕಯ್ಯ-ಈ ಮೂವರಲ್ಲಿ ಯಾರ ಪ್ರಸಾದದಿಂದ ಹುಟ್ಟಿದ? ಹಾಗಾದರೆ ಸಿಂಗಿರಾಜ ಪುರಾಣದ ಶಿವಸ್ವಾಮಿ ಯಾರು? ಅಕ್ಕಮಹಾದೇವಿ ಭವಿ ಕೌಶಿಕನನ್ನು ಮದುವೆಯಾಗಿದ್ದಳೊ ಇಲ್ಲವೊ? ಅವನೊಂದಿಗೆ ಸಂಸಾರ ನಡೆಸಿದಳೋ ಇಲ್ಲವೋ; ಅಕ್ಕಮಹಾದೇವಿ ದಿಗಂಬರೆಯೋ ಕೇಶಾಂಬರೆಯೋ? ಶರಣರು ಶಿಕ್ಷೆ ಅನುಭವಿಸಲು ಭೂಮಿಗೆ ಬಂದರೋ ಅಥವಾ ಧರ್ಮ ಪ್ರಸಾರಕ್ಕಾಗಿ ಶಿವನಾಜ್ಞೆಯಂತೆ ಭೂಮಿಯಲ್ಲಿ ಅವತರಿಸಿದರೋ-ಇಂಥ ನೂರಾರು ಸಮಸ್ಯೆಗಳು, ಶರಣರೇ ತಮ್ಮ ಜೀವಿತ ಕಾಲದಲ್ಲಿ ಗೌಣವಾಗಿ ಕಂಡಿದ್ದ ಸಮಸ್ಯೆಗಳೇ ಮುಂದಿನ ವೀರಶೈವ ಸಾಹಿತ್ಯದ ಪ್ರಮುಖ ವಸ್ತುವಾಗಿ, ಕವಿಗಳಲ್ಲಿಯೇ ಪರಸ್ಪರ ಭಿನ್ನಾಭಿಪ್ರಾಯ ಮೂಡಿ, ಪರ ವಿರೋಧಿಯ ಗುಂಪಾಗಿ, ಹಲವು ಒಳ ಸಂಪ್ರದಾಯಗಳು ವೀರಶೈವರಲ್ಲಿಯೆ ತಲೆದೋರಿದುವು. ಇದರಿಂದ ವೀರಶೈವ ಸಾಹಿತ್ಯದಲ್ಲಿ ಗಂಭೀರ ಸಮಸ್ಯೆಗಳ, ಜೀವನದ ಮೌಲ್ಯಗಳ, ದಾರ್ಶನಿಕ ಜೀವನದ ಅಭಿವ್ಯಕ್ತಿಯ ಅಭಾವ ಉಂಟಾಯಿತು. ಮಡಿ ಮೈಲಿಗೆಯ, ಪಾಪ ಪುಣ್ಯದ ಪ್ರಶ್ನೆ ತಲೆಹಾಕಿ, ಅದನ್ನೇ ಒರೆಹಚ್ಚುವ ಸಾಧನವನ್ನಾಗಿಸಿಕೊಂಡು, ಶರಣರ

ದೋಷಮುಕ್ತ ಪರಿಪೂರ್ಣ ಜೀವನವನ್ನು ತಿದ್ದಿ ಚಿತ್ರಿಸುವ ಕೇಂದ್ರ ಬಿಂದುವಿನ ಸುತ್ತ ಸಾಹಿತ್ಯ ಸೃಷ್ಟಿಯಾಗಿ ಶಿವಶರಣರ ಸಹೃದಯ ಮೂಢಭಕ್ತಿಯನ್ನೆ ಮೂಲ ಬಂಡವಾಳವನ್ನಾಗಿಸಿಕೊಂಡಿತು. ವಚನಕಾರರ ಬದುಕು ಶಿವಕಥೆಯಾಯಿತು. ಕೇಳಿದವರ ಪಾಪ ಪರಿಹಾರವಾಗುವುದನ್ನೇ ಕಾವ್ಯ ಗುರಿಯಾಗಿಟ್ಟುಕೊಂಡುವು. ಆದ್ದರಿಂದ ಹಿಂದಿದ್ದ ಜೈನ ಕವಿಗಳ ಮತ್ತು ಮುಂದೆ ಬಂದ ವೈದಿಕ ಕಾವ್ಯಗಳ ಬನಿ ವೀರಶೈವ ಧಾರ್ಮಿಕ ಬರಡು ಭೂಮಿಯಲ್ಲಿ ಬತ್ತಿತು.

ವೀರಶೈವ ಧರ್ಮ ಲಿಂಗದೀಕ್ಷೆಯ ಮೇಲೆ ನಿಂತಿದೆ, ಲಿಂಗದೀಕ್ಷೆಯಾದವರು ಭಕ್ತರು, ಅಜಾತರು, ಲಿಂಗದೀಕ್ಷೆಯಾಗದವರು ದೇವರಾಗಲಿ, ಬ್ರಾಹ್ಮಣರಾಗಲಿ, ಶೂದ್ರರಾಗಲಿ-ಅವರು ನರಕಿಗಳು, ಭವಿಗಳು, ಲಿಂಗವಂತರು ಅಪ್ಪಿತಪ್ಪಿಯೂ ಬಳಸಬಾರದವರು. ಆದರೆ ಲಿಂಗದೀಕ್ಷೆ ಹೊಂದಿ ಅಡ್ಡಹಾದಿ ಹಿಡಿದವರು ಮಾತ್ರ ಅನಾಚಾರಿಗಳು. ಪ್ರಾಮಾಣಿಕ ಭವಿ ಭವಿಯಾಗಿಯೇ ಅನಾಚಾರಿ ಶಿವಭಕ್ತನಾಗಿಯೇ ಉಳಿಯುವುದು ವೀರಶೈವ ಧರ್ಮದ ಮೂಲ ತತ್ವ. ವೀರಶೈವರ ಮುಖ್ಯ ಗುರಿ ಭೂಲೋಕದಲ್ಲಿ ಶಿವಲೋಕ ಸ್ಥಾಪಿಸುವುದು.

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು
ಸಗಣಕ್ಕೆ ಸಾಸಿರ ಹುಳು ಹುಟ್ಟವೆ ದೇವಾ
ಕಾಡು ಮೃಗವೊಂದಾಗಿರಲಾರದೆ ದೇವಾ
ಊರ ಮೃಗವೊಂದಾಗಿರಲಾರದೆ ದೇವಾ
ನಮ್ಮ ಕೂಡಲ ಸಂಗನ ಶರಣರಿಲ್ಲದ ಊರು
ದೇಶ ವನವಾಸ ನರವಿಂಧ್ಯೆ ಕಾಣಿರಣ್ಣಾ

ವೀರಶೈವ ಧರ್ಮ ಮಾನವರೆಲ್ಲರೂ ಸಮಾನರು ಎಂದು ಬೋಧಿಸಲಿಲ್ಲ. ಲಿಂಗದೀಕ್ಷಾಬದ್ಧರೆಲ್ಲರೂ ಸಮಾನರು ಮತ್ತು ಶಿವಸಹೋದರರು ಎಂದು ಸಾರಿತು. ಶರಣರಿಲ್ಲದ ಊರು ದೇಶ ನರವಿಂಧ್ಯೆ. ಅಲ್ಲಿ ವಾಸಿಸುವವರು ಊರ ಮೃಗಗಳು. ಶಿವ ದೀಕ್ಷೆ ಹೊಂದಿದ ಹೊಲೆಯ ಉತ್ತಮನಾದ, ಶಿವ ದೀಕ್ಷೆ ಹೊಂದದ ಬ್ರಾಹ್ಮಣ ಹೊಲೆಯನಾದ. ಶಿವ ದೀಕ್ಷೆ ಹೊಂದಿದ ಶರಣನ ಮಡದಿ ಮಕ್ಕಳೂ ಶಿವದೀಕ್ಷೆ ಇಲ್ಲದಿದ್ದರೆ ಭವಿಗಳೇ:

ಅಣ್ಣ ತಮ್ಮ ಹೆತ್ತಪ್ಪ ಗೋತ್ರವಾದಡೇನು
ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ
ನಂಟು ಭಕ್ತಿ ನಾಯಕ ನರಕ
ಕೂಡಲ ಸಂಗಮ ದೇವಾ

ಲಿಂಗದೀಕ್ಷೆಯಿಂದ ಬಂದ ಇಷ್ಟಲಿಂಗ ಪೂಜೆಯ ತಳಹದಿಯ ಮೇಲೆ ಹೊಸ ಬುಡಕಟ್ಟಿನ ಸಮಾಜ ರಚನೆಯೇ ವೀರಶೈವರ ಗುರಿ. ಅದರಲ್ಲಿ ಸಮುದಾಯ ಧಾರ್ಮಿಕ ವಿಧಿಗಾಗಲೀ, ಸಂಪರ್ಕಕ್ಕಾಗಲೀ ಅವಕಾಶವಿಲ್ಲ. ಮತ್ತೆ ವ್ಯಕ್ತಿ ಸಾಧನೆಗೇ ಧರ್ಮ ಮೀಸಲಾಯಿತು.

ಇಲ್ಲಿ ಮತ್ತೊಂದು ಪ್ರಶ್ನೆ ಎದುರಾಗುತ್ತದೆ. ಬಸವಣ್ಣನವರು ಒಂದು ದೇಶದ ಭಂಡಾರಿಯಾಗಿ, ಪ್ರಧಾನಿಯಾಗಿ ದೇಶದ ಸಮಗ್ರ ಜನತೆಯ ಕಲ್ಯಾಣಕ್ಕಾಗಿ ಮುಂದಿಟ್ಟ ಯೋಜನೆ ಯಾವುದು? ಎನ್ನಿಸುತ್ತದೆ. ಬಸವಣ್ಣನವರಿಗೇನಿದ್ದರೂ ಸದಾ ಶಿವಲೋಕ, ಶಿವಭಕ್ತಿ, ಶಿವಪಥದ ಚಿಂತನೆ. ಅವರಿಗೆ ಸದಾ ಶಿವಭಕ್ತರ ಹಿತಚಿಂತನೆ. ಬಿಜ್ಜಳನ ಅರಮನೆಯಲ್ಲಿ ಸದಾ ಬ್ರಾಹ್ಮಣರಿಗೂ ಶಿವಭಕ್ತರಿಗೂ ಅರಮನೆಯ ಅಧಿಕಾರದ ಹಿಡಿತಕ್ಕಾಗಿ ಪರಸ್ಪರ ಸ್ಪರ್ಧೆಯಿಂದ ಘರ್ಷಣೆ ನಡೆಯುತ್ತದೆ. ದೇಶದ ಎಲ್ಲಾ ವರ್ಗಗಳ ಹಿತರಕ್ಷಣೆಯ ದೃಷ್ಟಿಯಿಂದ ಬ್ರಾಹ್ಮಣರೊಂದಿಗೆ ಶಿವಶರಣರು ಘರ್ಷಣೆ ನಡೆಸುವುದಿಲ್ಲ. ಅಥವಾ ಎಂದೂ ಬಿಜ್ಜಳನ ರಾಜ್ಯದಲ್ಲಿ ಶಿವಭಕ್ತಿ ಒಂದು ರಾಷ್ಟ್ರಧರ್ಮವೆಂದು ಅಧಿಕೃತವಾಗಿ ಅಂಗೀಕೃತವಾಗಿರಲಿಲ್ಲ. ಈಗಾಗಲೇ ಬೌದ್ಧ ಮತ್ತು ಜೈನ ಮತಗಳು ಜನರನ್ನು ಮತಾಂತರಗೊಳಿಸಿದ್ದುವು. ಅದೂ ಅಲ್ಲದೆ ಹತ್ತಾರು ಧಾರ್ಮಿಕ ಪಂಥಗಳು ಪ್ರಚಲಿತವಿದ್ದು, ಹತ್ತಾರು ಜಾತಿಗಳಾಗಿ, ಜಾತಿ ಕಟ್ಟು ಕಟ್ಟಳೆ ಬಿಗಿಯಾಗಿದ್ದುವು. ಅಲ್ಲದೆ ಎಂದೂ ಯಾವ ಕಾಲದಲ್ಲಿಯೂ, ಯಾವೊಂದು ಮತಕ್ಕೂ ಸಂಪೂರ್ಣವಾಗಿ ಒಂದು ರಾಜ್ಯದ ಜನ ಮತಾಂತರವಾದುದಿಲ್ಲ. ಎಲ್ಲ ಧರ್ಮಗಳಲ್ಲಿಯೂ ಗುಣದೋಷಗಳು ಇದ್ದುವು. ಕೆಳವರ್ಗ ಬಹುದೇವತೋಪಾಸಕರು. ಅವರದೇ ಆದ ಸಂಸ್ಕೃತಿಯಿದ್ದು ಅನುಸರಿಸುತ್ತಿದ್ದರು. ವೀರಶೈವ ಧರ್ಮ ಸಿದ್ಧಾಂತ ರೂಪದ ಮತಗಳನ್ನು ಖಂಡಿಸಿತು. ಜೊತೆಗೆ ಕೆಳವರ್ಗದ ಸಂಸ್ಕೃತಿಯನ್ನು ಕ್ಷುದ್ರವೆಂದೂ, ತನ್ನ ಮತವೇ ಅತ್ಯಂತ ಶ್ರೇಷ್ಠ ಎಂದೂ ಸಾರಿತು. ಅಷ್ಟೇ ಏಕೆ ಲಿಂಗದೀಕ್ಷೆಯನ್ನು ವೀರಶೈವ ತತ್ವಕ್ಕನುಗುಣವಾಗಿ ಪಡೆಯದೆ ಶೈವದೀಕ್ಷೆ ಪಡೆದವರನ್ನು ಭವಿಗಳೆಂದಿತು. ಮತಾಂತರ ಹೊಂದದ ಭವಿಗಳ ಬಗ್ಗೆ ಅತ್ಯಂತ ರೂಕ್ಷವಾಗಿ ನಡೆದುಕೊಂಡಿತು. ಭವಿಗಳು ಲಿಂಗವಂತ ಹರಿಜನರಿಗಿಂತ ಕಡೆ. ಲಿಂಗದೀಕ್ಷೆ ಪಡೆಯದ ಹರಿಜನರೂ ಹರಿಜನರಾಗಿ ಭವಿ ಗುಂಪಿಗೆ ಸೇರಿದರು. ಅಂದಮೇಲೆ ಶಿವಭಕ್ತರು ಮತ್ತು ಬ್ರಾಹ್ಮಣರ ದ್ವೇಷದಿಂದ ಸಮಗ್ರ ಜನರ ಹಿತ ಸಾಧನೆಯಾದುದಾದರೂ ಹೇಗೆ? ಜಂಗಮರಿಗೆ ಬಿಜ್ಜಳನ ಭಂಡಾರ ಸಿಕ್ಕುವಂತೆ ಅನ್ಯ ಜಾತಿಯವರಿಗೆ ಲಭ್ಯವಾಗುತ್ತಿತ್ತೆ? ಸಮಗ್ರ ಜನರಿಂದ ತೆರಿಗೆಯಾಗಿ ಬಂದ ದೇಶದ ಸಂಪತ್ತು ಕೆಲವು ವರ್ಗಗಳ ಹಿತಸಾಧನೆಗೆ ಮೀಸಲಾದರೆ ದೇಶದ ಅಭಿವೃದ್ಧಿಯ ಗತಿಯೇನು? ಶರಣರು ಮತ್ತು ಬ್ರಾಹ್ಮಣರು ಪರಸ್ಪರ ಸಾಮಾಜಿಕ, ಧಾರ್ಮಿಕ ಸ್ಥಾನಮಾನಗಳಿಗೆ ಕಿತ್ತಾಡಿ, ತಮ್ಮ ತಮ್ಮ ಬಣಗಳ ಹಿತಸಾಧನೆಗೆ ಬಿಜ್ಜಳನನ್ನು ದುರುಪಯೋಗಪಡಿಸಿಕೊಂಡರೆ, ಅನ್ಯ ಜಾತಿಗಳ ಭವಿಷ್ಯವೇನು? ವರ್ಣ ವ್ಯವಸ್ಥೆಯ ಆಧಾರದ ಮೇಲೆ ರೂಪಿತವಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, ಆರ್ಥಿಕ ಪರಿಣಿತನಾದ ಬಸವಣ್ಣ ಯಾವ ದೋಷ ಕಂಡು ಖಂಡಿಸಿ, ಅತ್ಯುತ್ತಮವಾದ ಯಾವ ಆರ್ಥಿಕ ಯೋಜನೆಯನ್ನು ಸಮಗ್ರ ದೇಶದ ಅಭಿವೃದ್ಧಿಗೆ ಮುಂದಿಟ್ಟನು? ಬಸವಣ್ಣನದು

ಶಿವಲೋಕದ ಕಲ್ಪನೆಯಾದುದರಿಂದ, ಆತನ ಆರ್ಥಿಕ ಚಿಂತನೆ ಶಿವಲೋಕಕ್ಕೆ ಮೀಸಲಾದುದು. ಹಾಗಾದರೆ ಸಾಮಾನ್ಯ ವರ್ಗ ಅಥವಾ ದೇಶದ ಪ್ರಜೆ ಶಿವಭಕ್ತರಾಗಿ ಮತಾಂತರ ಹೊಂದಿದಾಗ ಮಾತ್ರ ಅವರ ಕಲ್ಯಾಣ ಎಂದರ್ಥವಾಗುವುದಿಲ್ಲವೇ? ಈಗಾಗಲೇ ಹಲವು ಧರ್ಮಗಳ ಅನಾಚಾರದಿಂದ ಬೇಸತ್ತ ಜನ ಅಥವಾ ತಮ್ಮ ತಮ್ಮ ಧರ್ಮದಲ್ಲಿಯೇ ಒಳ್ಳಿತನ್ನು ಕಂಡು ಪ್ರಾಮಾಣಿಕರಾಗಿ ಕರ್ತವ್ಯನಿಷ್ಠರಾಗಿ ಬದುಕಲು ನಿಶ್ಚಯಿಸಿದ ಜನರ ಗತಿ ಏನು? ಇಂಥ ಸಂಶಯಗಳಿಗೆ ಬಸವಣ್ಣನವರ ಆರ್ಥಿಕ ಯೋಜನೆಯಲ್ಲಿ ಪರಿಹಾರ ದೊರಕುವುದಿಲ್ಲ.

ಅರ್ಥ ಧರ್ಮಕ್ಕೆ ಅಧೀನ. ಧರ್ಮ ಪುರೋಹಿತರಿಂದ ನಿಯಂತ್ರಿತವಾದುದು. ಅಂದಮೇಲೆ ವೀರಶೈವರು ಅರ್ಥವನ್ನು ಧರ್ಮದಿಂದ ಪ್ರತ್ಯೇಕಿಸಿ ಎಲ್ಲಾ ವರ್ಗಕ್ಕೂ ಅನ್ವಯಿಸುವ ಸಮಾನ ತತ್ವದ ಆಧಾರದ ಮೇಲೆ ಶೋಷಣೆ ರಹಿತ ಆರ್ಥಿಕ ಸಿದ್ಧಾಂತವನ್ನು ಜನತೆಯ ಮುಂದಿಟ್ಟಿದ್ದರೆ, ಅದು ಯಾವುದು? ಅಥವಾ ವೈದಿಕ ಅರ್ಥ ಸಿದ್ಧಾಂತಕ್ಕಿಂತ ಭಿನ್ನವಾದ ಪರಿಷ್ಕೃತವಾದ ಧಾರ್ಮಿಕ ಅರ್ಥ ಸಿದ್ಧಾಂತವನ್ನು ರೂಪಿಸಿದರೆ? ವೈದಿಕ ಧರ್ಮದಲ್ಲಿ ಅರ್ಥ ಸಿದ್ಧಾಂತ ವರ್ಣ ವ್ಯವಸ್ಥೆಯ ಆಧಾರಿತವಾದದ್ದು. ಅದು ವರ್ಗಸೃಷ್ಟಿಗೆ ಮೂಲವಾಯಿತು. ಆಳು-ಒಡೆಯ, ಬ್ರಾಹ್ಮಣ-ಶೂದ್ರ, ದೇವರು-ಭಕ್ತ, ಮೇಲು-ಕೀಳು ಎಂಬ ಭೇದ ಅದರಿಂದ ಸ್ಥಿರ. ಹುಟ್ಟಿನಲ್ಲಿಯೇ ಅಸಮಾನತೆಯಿದೆಯೆಂಬ ತತ್ವವನ್ನು ಯಾರೂ ಒಪ್ಪಲಾರರು. ಪ್ರಾಥಮಿಕ ಅಗತ್ಯ ಪ್ರತಿವರ್ಗಕ್ಕೂ ಸಮಾನವಾಗಿ ಸಲ್ಲಬೇಕಾದುದು ಧರ್ಮ. ವೀರಶೈವರು ಅಸಮಾನತೆ ಹೋಗಲಾಡಿಸಲು ಕಾಯಕ ತತ್ವ ಮುಂದಿಟ್ಟರು ಎನ್ನಬಹುದು. ಕಾಯಕ ತತ್ವ ವೈದಿಕರ ಆರ್ಥಿಕ ತತ್ವಕ್ಕಿಂತ ಹೇಗೆ ಭಿನ್ನವಾಯಿತು ಎಂಬುದು ಮುಖ್ಯ. ಲಿಂಗದೀಕ್ಷೆಯ ಶಿವಶರಣರದ್ದು ಕಾಯಕವಾಗುತ್ತದೆಯೇ ಹೊರತು ಭವಿಗಳ ಕೆಲಸ ಕಾಯಕವಾಗುವುದೇ? ಶರಣರೂ ಲಿಂಗದೀಕ್ಷೆಯ ಅನಂತರವೂ ತಮ್ಮ ಪೂರ್ವ ಜಾತಿಯ ಕಾಯಕವನ್ನೇ ಮುಂದುವರಿಸಿದರು. ಉಚ್ಚವರ್ಗದ ಬ್ರಾಹ್ಮಣ ಲಿಂಗದೀಕ್ಷೆಯಿಂದ ಚಪ್ಪಲಿ ಹೊಲಿಯುವ ಕಾಯಕಕ್ಕೆ ತೊಡಗಿದ ಪ್ರಸಂಗವಾಗಲಿ, ಲಿಂಗದೀಕ್ಷೆ ಪಡೆದ ಹೊಲೆಯ ಜಂಗಮನಾಗಿ ಉಚ್ಚವರ್ಗದವರಿಗೆ ದೀಕ್ಷೆ ಕೊಡುವ ಧಾರ್ಮಿಕ ನಾಯಕನಾದ ಪ್ರಸಂಗವಾಗಲಿ ವೀರಶೈವ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಲಿಂಗದೀಕ್ಷೆ ಹೊಂದಿದ ಹೊಲೆಯರನ್ನು ಲಿಂಗದೀಕ್ಷೆ ಹೊಂದದ ಬ್ರಾಹ್ಮಣರನ್ನು ಅವಮಾನಗೊಳಿಸಿ ಸೇಡು ತೀರಿಸಿಕೊಳ್ಳುವುದಕ್ಕಾಗಿ ಹೊಲೆಯ ಶಿವಭಕ್ತರನ್ನು ಬಳಸಿಕೊಂಡಿರುವ ಪ್ರಸಂಗಗಳು ಮಾತ್ರ ಹೇರಳವಾಗಿವೆ. ಹಡಪದ ಅಪ್ಪಣ್ಣ, ಕುಂಬಾರ ಗುಂಡಯ್ಯ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ, ಒಕ್ಕಲಿಗ ಮುದ್ದಯ್ಯ ಮುಂತಾಗಿ ಅವರವರ ಪೂರ್ವಜಾತಿಗಳೇ ಶರಣರಾದ ಮೇಲೂ ಅಂಟಿ ಬಂದದ್ದು ಕಂಡುಬರುತ್ತದೆ. ಅಲ್ಲದೆ ಕಾಯಕ ತತ್ವದಲ್ಲಿ ಎಷ್ಟೇ ದಿವ್ಯ ತತ್ವ ಅಡಗಿದ್ದರೂ, ಉಚ್ಚ ಜಾತಿಯ ಶರಣರ ಮುಂದೆ ವಿವಿಧ ಕೀಳು ಜಾತಿಯ ಶರಣರು ತಮ್ಮ ಕೀಳರಿಮೆಯಿಂದ ಮುಕ್ತರಾಗದುದು ಕಂಡುಬರುತ್ತದೆ. ವರ್ಣ, ಜಾತಿ ಮತ್ತು ವೃತ್ತಿ-ಮೂರೂ ಸಾಮಾಜಿಕ ಸ್ಥಾನಮಾನ ನಿರ್ಣಯಿಸುವ ಘಟಕಗಳು. ಲಿಂಗದೀಕ್ಷೆಯಾದ ತಕ್ಷಣ ಅವು ಅಷ್ಟು

ಸುಲಭವಾಗಿ ಬದಲಾಗಲಿಲ್ಲ. ಅಲ್ಲದೆ ವೀರಶೈವರಲ್ಲಿಯೂ ಸಿದ್ಧಿ ಕಾಯಕದ ಮೇಲೆ ನಿಂತಿಲ್ಲ. ಜಂಗಮ ಸಾಧನೆ ಅರಿವಿನ ಮೇಲೆ ನಿಂತಿರುವುದು. ವೀರಶೈವರಲ್ಲಿಯೂ ಭಕ್ತ ಮತ್ತು ಜಂಗಮ-ಎರಡು ವರ್ಗ ಸೃಷ್ಟಿಯಾಯಿತು. ಅರಿವು ಮತ್ತು ಹುಟ್ಟಿನ ತತ್ವದ ಮೇಲೆ ಜಂಗಮ ವರ್ಗ ನಿಂತಿತು. ಜಾತಿ ಮತ್ತು ವೃತ್ತಿಯ ಮೇಲೆ ಭಕ್ತ ವರ್ಗ ನಿಂತಿತು. ಭಕ್ತ ಮತ್ತು ಜಂಗಮ ವರ್ಗ ವೀರಶೈವ ಸಮಾಜದಲ್ಲಿ ಸ್ಥಾಯಿಯಾದುವು. ತಾತ್ವಿಕವಾಗಿ ಭಕ್ತ ಜಂಗಮನಾಗಬಹುದಾದರೂ, ಆಚಾರದಲ್ಲಿ ಮಾತ್ರ ಭಕ್ತ ಭಕ್ತನಾಗಿಯೇ ಉಳಿದ, ಜಂಗಮ ಜಂಗಮನಾಗಿಯೇ ವಂಶಪಾರಂಪರ್ಯವಾಗಿ ಮುಂದುವರಿದ. ಇದರಿಂದ ಭವಿ ಮುಟ್ಟದ ಜಂಗಮನಿಗೆ ಹತ್ತೆಂಟು ಜಾತಿಯ ವೃತ್ತಿಯ ಸೇವೆ ಅನಿವಾರ್ಯವಾದುದರಿಂದ, ಲಿಂಗದೀಕ್ಷೆ ಕೊಟ್ಟು ಶರಣರನ್ನಾಗಿಸಿ ಸೇವೆ ಮಾಡಿಸಿಕೊಂಡರು. ಭವಿಗಳ ಜಾತಿ ಲಿಂಗದೀಕ್ಷೆಯ ಅನಂತರ ಒಳ ಪಂಗಡವಾಗಿ ರೂಪಾಂತರವಾದವು. ವೈದಿಕರ ಅರ್ಥ ವ್ಯವಸ್ಥೆ ವರ್ಗ ಸೃಷ್ಟಿಗೆ ಮೂಲವಾದರೆ, ವೀರಶೈವರ ಅರ್ಥ ವ್ಯವಸ್ಥೆ ಒಳಪಂಗಡಗಳ ಸೃಷ್ಟಿಗೆ ಮೂಲವಾಯಿತು. ವೈದಿಕರ ಶೂದ್ರರ ಸ್ಥಾನಮಾನಕ್ಕಿಂತ ವೀರಶೈವರ ಒಳಪಂಗಡದವರ ಸ್ಥಾನಮಾನ ಭಿನ್ನವಲ್ಲ. ಅಲ್ಲಿಯೂ ಉಚ್ಚ ಮತ್ತು ನೀಚ ವರ್ಗ ಸೃಷ್ಟಿಯಾಯಿತು. ಭಕ್ತ ತನ್ನ ತನು ಮನ ಧನವನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಬೇಕು. ಅರ್ಪಿಸುವವರು ಭಕ್ತರಾದರು ಅರ್ಪಿಸಿಕೊಳ್ಳುವವನು ಜಂಗಮನಾದ. ಆದರೆ ಅಲ್ಲಮನ ಅನಿತ್ಯವನ್ನು ನಿತ್ಯಕ್ಕೆ ಅರ್ಪಿಸುವುದಾದರೂ ಹೇಗೆ ಎಂಬ ಮೂಲಭೂತ ಪ್ರಶ್ನೆಗೆ ಯಾವ ಜಂಗಮರೂ ಉತ್ತರ ಕೊಡುವ ಸಾಹಸ ಮಾಡಲಿಲ್ಲ. ವೀರಶೈವ ಸಮಾಜದ ರಚನೆಯಲ್ಲಿ ಅನುಕ್ರಮವಾಗಿ ಜಂಗಮ, ಲಿಂಗ, ಗುರು ಮತ್ತು ಭಕ್ತರ ಧಾರ್ಮಿಕ ಶ್ರೇಣಿ ನಿಗದಿಗೊಂಡಿತು. ಧರ್ಮ, ಬ್ರಾಹ್ಮಣ, ದೊರೆ ಮತ್ತು ಪ್ರಜೆ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ- ಎಂಬ ಶ್ರೇಣೀಕೃತ ಸಮಾಜಕ್ಕೆ ವೀರಶೈವ ಶ್ರೇಣಿ ಸಮಾನವಾಯಿತು. ವೈದಿಕ ವ್ಯವಸ್ಥೆಯ ದೋಷವನ್ನು ತೊಡೆಯುವ ಉತ್ತಮ ವ್ಯವಸ್ಥೆ ಆದಾಗಲಿಲ್ಲ. ಲಿಂಗಕ್ಕೆ ಜಂಗಮವೇ ಬಾಯಿ ಎಂದದ್ದು, ಜಂಗಮ ತೃಪ್ತಿಯೇ ಲಿಂಗ ತೃಪ್ತಿ ಎಂದದ್ದು ಹಿಂದಿನ ವೈದಿಕ ವ್ಯವಸ್ಥೆಗಿಂತ ಭಿನ್ನವಲ್ಲ. ಇದರಿಂದ ಶರಣರು 'ಮನೆ ನೋಡ ಬಡವರು, ಮನ ನೋಡಾ ಸಂಪನ್ನರು', 'ಬಡವರ ಮನೆಯ ಗಂಜಿ ಅಮೃತ, ಕಡವರರ ಮನೆಯ ಅಮೃತಾನ್ನ ಸುರೆಮಾಂಸ' ಎಂದು ಸಮಾಧಾನದ ಮಾತುಗಳನ್ನಾಡಿ, ಬಡವರ ಕಣ್ಣೀರೊರಸುತ್ತಾ, ಹಸಿದ ಹೊಟ್ಟೆಯ ಮೇಲೆ ಅನುಭಾವ ಸಾಧನೆಯ ಅರಿವಿನ ಸಮಾಧಾನದ ತಣ್ಣೀರು ಬಟ್ಟೆ ಹೊದಿಸಿ, ಬಡವರಿಗೆ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ವಿಫಲರಾದರು. ಬಡವರ ಬಡತನದ ಪರಿಹಾರಕ್ಕೆ ಆತ್ಮವೇ ಕೇಂದ್ರ ಬಿಂದುವಾಯಿತೇ ಹೊರತು, ಆರ್ಥಿಕ ಕೇಂದ್ರ ಬಿಂದುವಾಗಲಿಲ್ಲ. ವೀರಶೈವ ಸಮಾಜವೂ ಅಸಮಾನತೆಯ ಮೇಲೇ ನಿಲ್ಲುವುದು ಅನಿವಾರ್ಯವಾಯಿತು. ಭಕ್ತರು ತಪ್ಪು ಮಾಡಿದರೆ ಅವರ ಮುಖವನ್ನು ನೋಡಲಾಗದು ಎಂಬ ಮಾತು ಬರುತ್ತದೆ. ಅದೇ ಶ್ರೀಮಂತ ಅಥವಾ ಜಂಗಮ ತಪ್ಪು ಮಾಡಿದಾಗ 'ಲಿಂಗ ಸಾಕ್ಷಿಯ' ಮಾತು ಬರುತ್ತದೆ. ಇದು ಎಂಥ ತಾರತಮ್ಯ ಎನ್ನಿಸುತ್ತದೆ. ತಪ್ಪು ಮಾಡಿದವರು ಯಾರೇ ಆಗಲಿ ತಕ್ಕ ಶಿಕ್ಷೆಯ ಮಾತು ಸಮಾಜದಲ್ಲಿರದೆ ಕೇವಲ ಲಿಂಗ ಮತ್ತು

ನರಕದ ಮಾತು ಬರುವುದು ದುರ್ಬಲತೆಯ ಸಂಕೇತವಾಗುತ್ತದೆ. ಅರ್ಪಿಸಿಕೊಳ್ಳುವ ಹಕ್ಕು ಪಡೆದ ಜಂಗಮ, ಉಚ್ಚವರ್ಗ ಅಥವಾ ಕೆಳವರ್ಗ ತಪ್ಪು ಮಾಡಿದಾಗ ಭೇದದಿಂದ ಶಿಕ್ಷೆ ಕೊಡುವುದರಿಂದ ನುಣುಚಿಕೊಂಡರೆ, ಜಂಗಮ ಮತ್ತು ಶ್ರೀಮಂತರ ಸಂಬಂಧ, ಬ್ರಾಹ್ಮಣ ಮತ್ತು ಕ್ಷತ್ರಿಯರ ಸಂಬಂಧಕ್ಕಿಂತ ಭಿನ್ನವಿಲ್ಲ ಎನ್ನಿಸುತ್ತದೆ.

ಬ್ರಾಹ್ಮಣರಿಗೆ ದಾನ ಕೊಟ್ಟರೆ ಜೀವಕ್ಕೆ ಆಪತ್ತು ಬರುತ್ತದೆ. ಜಂಗಮರಿಗೆ ಶಿವಶರಣರಿಗೆ ದಾನ ಕೊಟ್ಟರೆ ಪದವಿ ದೊರೆಯುತ್ತದೆ ಮತ್ತು ಅರ್ಥವುಳ್ಳವರು ರಾಜನಿಗೆ ಅಂಜುತ್ತಾರೆ. ಭಕ್ತಿಯುಳ್ಳವರು ಜಂಗಮಕ್ಕೆ ಅಂಜುತ್ತಾರೆ ಎಂಬ ಮಾತುಗಳು ಜಂಗಮದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯ ತತ್ತ್ವಗಳನ್ನು ಅಂತರ್ಗತಗೊಳಿಸಿದುದೇ ಆಗಿದೆ. ಅದಕ್ಕೆ ದಯವೇ ಧರ್ಮದ ಮೂಲ ಎಂಬ ಧರ್ಮದಲ್ಲಿ ಕತ್ತಿ ಹಿಡಿದು ಧರ್ಮಕ್ಕೆ ಚ್ಯುತಿ ಬಂದಾಗ ಹೋರಾಡಿ ರಕ್ಷಿಸಿಕೊಳ್ಳುವ "ಗಣಾಚಾರಕ್ಕೆ" ಅವಕಾಶವಾಯಿತು. ಬ್ರಾಹ್ಮಣರೂ ಕಿರೀಟ ಧರಿಸಿ ರಾಜ್ಯ ಆಳಿ ಅಪ್ರಯೋಜನವೆಂದು ಅಧಿಕಾರದ ಮೋಹ ತೊರೆದರು. ಅಧಿಕಾರ ತೊರೆದರೂ ಅನಭಿಷಿಕ್ತ ಅಧಿಕಾರಿಗಳಾಗಿ, ದೊರೆಗಳಿಗೆ ಸ್ಥಾಯಿಯಾಗಿ ಅಂಕುಶವಾದರು. ಬ್ರಾಹ್ಮಣರು ವಿಫಲರಾದ ಕ್ಷೇತ್ರವನ್ನೇ ವೀರಶೈವರು ಗಣಾಚಾರದ ಹೆಸರಿನಲ್ಲಿ ರೂಢಿಸಿಕೊಂಡರು. ಇದರಿಂದಲೇ ವೀರಶೈವರ ಮೇಲೆ ಮುಸ್ಲಿಮರ ಪ್ರಭಾವ ಬಿದ್ದಿರಬಹುದೆಂಬ ಸಂಶಯಕ್ಕೆ ಅವಕಾಶವಾಯಿತು. ಇದೂ ಅಲ್ಲದೆ ಭಗವದ್ಗೀತೆಯ ಕೃಷ್ಣನ ತತ್ತ್ವಕ್ಕೇ ವೀರಶೈವರಲ್ಲಿ ಪ್ರಾಶಸ್ತ್ಯ ಸಿಕ್ಕಿದಂತಾಯಿತು. ಅಲ್ಲಿ ಧರ್ಮಾ ಧರ್ಮದ ಕುರಿತಾದ ಚಿಂತನೆ ನಡೆದರೆ, ವೀರಶೈವರಲ್ಲಿ ಭಕ್ತ ಭವಿಗಳ ಘರ್ಷಣೆಯೇ ಮೂಲ ಅಂಶವಾಯಿತು. ಭಗವದ್ಗೀತೆಯ ತತ್ತ್ವಕ್ಕಿಂತ ಗಣಾಚಾರದ ತತ್ತ್ವ ಭಿನ್ನವಲ್ಲದಿದ್ದರೂ, ಭಗವದ್ಗೀತೆಯ ವ್ಯಾಪ್ತಿ, ವೈಶಾಲ್ಯ ಮತ್ತು ಲೋಕ ಮೋಹಕ ತತ್ತ್ವವನ್ನು ಗಣಾಚಾರ ಕಳೆದುಕೊಂಡು, ಒಂದು ವರ್ಗದ ಹಿತಾಸಕ್ತಿಯ ಸಂಕುಚಿತತೆಯಿಂದ ಗುಣಕ್ಕಿಂತ ದೋಷವಾಗಿಯೇ ಪರಿಣಮಿಸಿತು. ಅನ್ಯರನ್ನು ಕೊಲ್ಲುವುದನ್ನು ಬೋಧಿಸುವುದೇ ಎರಡರ ತತ್ತ್ವವಾದರೂ ಒಂದು ಲೋಕ ಕಲ್ಯಾಣಕ್ಕಾಗಿ ಕೊಲ್ಲುವ ಆದರ್ಶ ಬೋಧಿಸಿದರೆ ಮತ್ತೊಂದು ಜಾತಿ ಕಲ್ಯಾಣಕ್ಕಾಗಿ ಕೊಲ್ಲುವ ತತ್ತ್ವವನ್ನು ಬೋಧಿಸಿದಂತಾಯಿತು. ಬ್ರಾಹ್ಮಣರು ಧರ್ಮ ರಕ್ಷಣೆಯ ಹೊರೆಯನ್ನು ಕ್ಷತ್ರಿಯರಿಗೆ ವಹಿಸಿದರೆ ತಮ್ಮ ಧರ್ಮ ರಕ್ಷಣೆಯ ಭಾರವನ್ನು ತಾವೇ ಹೊರುವ ಸ್ಥಿತಿ ವೀರಶೈವರದ್ದಾಯಿತು. ಇದರಿಂದ ರಾಜ್ಯದಲ್ಲಿ ಸದಾ ಮತೀಯ ಘರ್ಷಣೆಗೆ ಅವಕಾಶವಾಯಿತು. ಆದರೆ ದೇವರ ದಾಸಿಮಯ್ಯ ಸದ್ದುಗದ್ದಲವಿಲ್ಲದೆ, ಅರಮನೆಯ ಅಧಿಕಾರದ ಗದ್ದುಗೆ ಹಿಡಿಯದೆ, ರಾಣಿ ಸುಗ್ಗಲದೇವಿಯನ್ನು ಶಿವಭಕ್ತಳನ್ನಾಗಿ ಮತಾಂತರಿಸಿದ ಅಹಿಂಸಾಮಾರ್ಗ ಮುಂದಿನ ವೀರಶೈವರಿಗೆ ಮಾರ್ಗದರ್ಶನವಾಗದುದು ಆಶ್ಚರ್ಯವಾಗುತ್ತದೆ. ಏಕಾಂತದ ರಾಮಯ್ಯ ಹಿಂಸಾಮಾರ್ಗದಿಂದ ಬಸದಿಗಳನ್ನು ನಾಶಮಾಡಿದನು. ಅದೇ ಹಿಂಸೆ ಕಲ್ಯಾಣದಲ್ಲಿಯೂ ಮರುಕಳಿಸಿ ಕೊಲೆಗೆ ಕೊಲೆ, ರಕ್ತಕ್ಕೆ ರಕ್ತ, ಭಕ್ತನಿಗೆ ಭವಿ, ಭವಿಗೆ ಭಕ್ತ ಬಲಿಯಾಗುವುದು ಅನಿವಾರ್ಯವಾಯಿತು.

ವೀರಶೈವ ವಚನಗಳಲ್ಲಿ ಬ್ರಾಹ್ಮಣ ವಿರೋಧಿಯಾದ ಹಿಂಸೆಯ ಮಾತುಗಳು ಬಂದರೂ, ವಾಸ್ತವಿಕವಾಗಿ ವೀರಶೈವರಿಂದ ಹಿಂಸೆಗೆ ಗುರಿಯಾದವರು ಜೈನರು. ಜೈನ ಬಸದಿಗಳು ಆ ಕಾಲದಲ್ಲಿ ನಾಶವಾದುವೇ ಹೊರತು ವಿಷ್ಣು ದೇವಾಲಯಗಳ ಒಂದು ಕಲ್ಲೂ ಕೂಡ ಕದಲಲಿಲ್ಲ. ಐತಿಹಾಸಿಕವಾಗಿ ಹನ್ನೆರಡನೆಯ ಶತಮಾನದ ಚಳುವಳಿ ವೀರಶೈವರು ಜೈನರ ವಿರುದ್ಧ ಕತ್ತಿ ಎತ್ತಿದ ಕಥೆಯೇ ಆಗಿದೆ. ಮುಂದೆ ಅದೇ ವೀರಶೈವ ಕಾವ್ಯಗಳ ಮತ್ತು ಪುರಾಣಗಳ ಪ್ರಧಾನ ವಸ್ತುವಾಯಿತು. ತಮಿಳುನಾಡಿನಲ್ಲಿ ಸುಮಾರು ಏಳನೆಯ ಶತಮಾನದಲ್ಲಿ ಶೈವರು ಮತ್ತು ವೈಷ್ಣವರು ಒಂದಾಗಿ ಜೈನರನ್ನು ನಾಶಗೊಳಿಸಿದ ಘಟನೆಯೇ ಮತ್ತೆ ಕರ್ನಾಟಕದಲ್ಲಿ ತಲೆ ಎತ್ತಿದ್ದ ಜೈನರನ್ನು ನಾಶಪಡಿಸಲು ವೀರಶೈವರಿಂದ ಪುನರಾವರ್ತನೆಯಾಯಿತು. ಅದಕ್ಕೆ ರಾಮಾನುಜನರ ಸಹಕಾರವೂ ದೊರೆಯಿತು. ಹಿಂದೆ ವೀರ ವೈಷ್ಣವರು ತಮಿಳುನಾಡಿನಲ್ಲಿ ಪ್ರಧಾನ ಪಾತ್ರ ವಹಿಸಿದಂತೆ ಕರ್ನಾಟಕದಲ್ಲಿ ಜೈನರ ನಾಶಕ್ಕೆ ವೀರಶೈವರು ಪ್ರಧಾನ ಪಾತ್ರ ವಹಿಸಿದರು.

ದಕ್ಷಿಣ ಭಾರತದ ಧಾರ್ಮಿಕ ಮತ್ತು ರಾಜಕೀಯ ಚರಿತ್ರೆ ಎಂದರೆ ಮುಖ್ಯವಾಗಿ ಜೈನ, ಬೌದ್ಧ ಮತ್ತು ವೈದಿಕರ ಪರಸ್ಪರ ಸತತ ಹೋರಾಟದ ಚರಿತ್ರೆಯೇ ಆಗಿದೆ. ದಕ್ಷಿಣದಲ್ಲಿ ಬೌದ್ಧರ ಪ್ರಾಬಲ್ಯ ಇತಿಹಾಸ ಪೂರ್ವದಲ್ಲಿಯೇ ಮಸಳಿಸಿತ್ತು. ಅನಂತರ ಬಲಿಷ್ಠರಾದ ಜೈನರೊಂದಿಗೆ ವೈದಿಕರು ಸತತ ಘರ್ಷಣೆಯಿಂದ ಜೈನರನ್ನು ನಾಶಗೊಳಿಸಿದರು. ವರ್ಣ ವ್ಯವಸ್ಥೆಗೆ ಕುಠಾರ ಪ್ರಾಯವಾದ ಮತ್ತು ನಾಸ್ತಿಕ ಮತವಾದ ಜೈನರ ಮೂಲೋತ್ಪಾಟನೆಗೆ ವೈದಿಕಮತ ಪಣ ತೊಟ್ಟು ತಮಿಳುನಾಡಿನಲ್ಲಿ ಸಫಲವಾಯಿತು. ವೈದಿಕರಿಗೆ ತರ್ಕ, ವ್ಯಾಕರಣ, ವಿದ್ವತ್ತು, ನ್ಯಾಯ, ಶಾಸ್ತ್ರ, ಪುರಾಣ, ಕಾವ್ಯ ಮುಂತಾದವುಗಳಲ್ಲಿ ಸರಿಸಮಾನರಾದ ಜೈನರು ಪ್ರಬಲ ಶತ್ರುಗಳಾದರು. ಬುದ್ಧಿಗೆ ಸರಿಸಮಾನ ಸ್ಪರ್ಧಿಗಳಾದ ಜೈನರನ್ನು ವೈದಿಕರು ಸಹಿಸದಾದರು. ಮತಾಂತರಗೊಳ್ಳಬಹುದಾದ ಸಾಮಾನ್ಯ ಜನರನ್ನು ಜೈನರ ಹಿಡಿತದಿಂದ ತಪ್ಪಿಸಲು ಭಕ್ತಿಪಂಥದ ಆಮಿಷದಿಂದ ಜನಸಾಮಾನ್ಯರನ್ನು ಆಕರ್ಷಿಸಿ, ವೈದಿಕರು ಜೈನರನ್ನು ಯಶಸ್ವಿಯಾಗಿ ಎದುರಿಸಿ, ವರ್ಣ ವ್ಯವಸ್ಥೆಯನ್ನು ತಮಿಳುನಾಡಿನಲ್ಲಿ ಸ್ಥಾಯಿಗೊಳಿಸಿದರು.

ಆದರೆ ಕರ್ನಾಟಕದಲ್ಲಿ ವೀರಶೈವ ಮತ್ತು ಜೈನ ಧರ್ಮಗಳಲ್ಲಿ ವೈಷಮ್ಯಕ್ಕಿಂತ ಸಮಾನ ಅಂಶಗಳೇ ಹೆಚ್ಚು. ಎರಡರಲ್ಲಿಯೂ ಸಾಮಾನ್ಯ ಜನರ ಮತಾಂತರಕ್ಕೆ ಅವಕಾಶವಿತ್ತು. ಎರಡೂ ಬ್ರಾಹ್ಮಣ ಧರ್ಮ ವಿರೋಧಿಗಳೇ. ಬ್ರಾಹ್ಮಣರ ಮೇಲೆ ರೊಚ್ಚುಕಾರಿದ ವೀರಶೈವ ಧರ್ಮ ಜೈನರನ್ನು ಕೊಂದದ್ದು, ಬಸದಿಗಳನ್ನು ಕೆಡವಿದ್ದು, ಕೆಳ ವರ್ಗವನ್ನು ಕೆಳವರ್ಗದ ಮೇಲೆ ಎತ್ತಿಕಟ್ಟಿದುದು, ವೀರಶೈವ ಮತ್ತು ಬ್ರಾಹ್ಮಣರು, ಜೈನ ಪ್ರಾಬಲ್ಯದ ವಿರುದ್ಧ ಅಂತರ್ಯದಲ್ಲಿ ಮಾಡಿದ ಒಂದು ಸಂಚೆನ್ನಿಸುತ್ತದೆ. ಅಥವಾ ವೀರಶೈವರ ಉಚ್ಚವರ್ಗದ ಬ್ರಾಹ್ಮಣರ ಗುಂಪು ಕೆಳವರ್ಗವನ್ನು ದುರುಪಯೋಗಪಡಿಸಿಕೊಂಡಿತು ಎನ್ನದೆ ವಿಧಿಯಿಲ್ಲ. ಜೊತೆಗೆ ಗೋಬ್ರಾಹ್ಮಣರ ವಿರುದ್ಧ ಕತ್ತಿ ಎತ್ತುವ ನೈತಿಕ ಧೈರ್ಯ ಬರದ ವೀರಶೈವರು, ಬ್ರಾಹ್ಮಣರನ್ನು ಅಪಮಾನಗೊಳಿಸಲು ಶರಣ ಹೊಲೆಯರನ್ನು ಬಳಸಿಕೊಂಡು, ಜೈನರನ್ನು ಮಾತ್ರ ಹಿಂಸೆಗೆ ಗುರಿ ಮಾಡಿದುದು ಒಂದು ವಿಪರ್ಯಾಸವೇ ಸರಿ.

ಜೈನ ಮತ್ತು ವೀರಶೈವ-ಎರಡೂ ಧರ್ಮಗಳಲ್ಲಿ ಮಾನವ ದೇವನಾಗುವ ತತ್ತ್ವವಿದೆ. ಎರಡೂ ಧರ್ಮ ಜನಪರವಾದುವು ಮತ್ತು ವೈಚಾರಿಕ ತತ್ತ್ವವನ್ನು ಧರ್ಮದಲ್ಲಿ ಅಳವಡಿಸಿಕೊಂಡಂಥವು. ಹೀಗಿದ್ದೂ ಪರಸ್ಪರ ಕಾದಾಡಿದುದರ ದುರಂತದ ಬಗ್ಗೆ ಮತ್ತಷ್ಟು ಅಧ್ಯಯನ ಅಗತ್ಯವಾಗಿದೆ. ಆಸ್ತಿಕ ಮತಗಳು ಒಂದಲ್ಲ ಒಂದು ರೀತಿಯಲ್ಲಿ ವರ್ಣ ಮತ್ತು ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಸೆಣಸಿದುವು. ಆಸ್ತಿಕ ಮತವಾದ ವೀರಶೈವ ಧರ್ಮವೂ ಇದರಿಂದ ಹೊರತಾಗಲಿಲ್ಲ. ವೀರಶೈವ ಧರ್ಮದಲ್ಲಿ ವೈದಿಕ ಧರ್ಮದ ಅಂಶಗಳನ್ನು ಪ್ರತಿಪಾದಿಸುವ ಪ್ರತಿಷ್ಠಿತರ ಮೇಲುಗೈಯಾದುದೇ, ಜೈನರ ವಿರುದ್ಧ ಹೋರಾಡುವಲ್ಲಿ ವೀರಶೈವರು ನಿಷ್ಠೆ ತೋರಿದುದು ಎನ್ನಿಸುತ್ತದೆ.

ವೀರಶೈವ ಪುರಾಣ ಮತ್ತು ಕಾವ್ಯಗಳ ಸಂದಿಗ್ಧತೆ, ವೈದಿಕ ಪುರಾಣ ಮತ್ತು ಇತಿಹಾಸದ ಸಂದಿಗ್ಧತೆಯೇ ಆಗಿದೆ. ವೀರಶೈವ ಪುರಾಣ ಮತ್ತು ಕಾವ್ಯಗಳಲ್ಲಿ ಅಂಥ ಭೇದವೇನೂ ಇಲ್ಲ. ಪುರಾಣಗಳೇ ಕಾವ್ಯಗಳೆಂದು ಪರಿಗಣಿಸಲ್ಪಟ್ಟಿವೆ. ವೀರಶೈವರು ಪುರಾಣ ವಿರೋಧಿಸಿದರು. ವೈದಿಕ ಮತ್ತು ಶೈವ ಈ ಎರಡೂ ಪುರಾಣಗಳನ್ನು ಖಂಡಿಸಿದರು. ತಮ್ಮದು 'ನಿಶ್ಶಬ್ದ ನಿರವಲಯ' ಪುರಾಣ ಎಂದವರು, ವೈದಿಕ ಮತ್ತು ಜೈನ ಪುರಾಣಗಳ ಅನುಕರಣೆ ಮಾಡಿದರು. ಅವುಗಳಲ್ಲಿ ಶರಣರ ಜೀವನದ ಜೊತೆಗೆ ಶಿವಲೀಲೆ, ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರ ವರ್ಣನೆಯನ್ನು ತುರುಕಿದರು. ವಚನದ ವಿಚಾರದ ಸೆಲೆ ಬತ್ತಿ, ಪುರಾಣಗಳಲ್ಲಿ ಮತ್ತೆ ಮೂಢನಂಬಿಕೆಯ ಪ್ರಚಾರಕ್ಕೆ ಅವಕಾಶವಾಯಿತು. ಸಂಪ್ರದಾಯ ವಿರೋಧಿಗಳೇ ಸಂಪ್ರದಾಯ ವಾದಿಗಳಾದರು. ಮತಾಂತರಕ್ಕೆ ಅವಕಾಶವಿರುವ ಆಸ್ತಿಕ ಅಥವಾ ನಾಸ್ತಿಕ ಮತಗಳೆರಡರಲ್ಲಿಯೂ ವೈಚಾರಿಕತೆ ಒಂದು ಸಂಪ್ರದಾಯವಾಗಿ ಬಂದಿದೆ. ಅಂಥ ಒಂದು ಚಿಂತನೆ ಮೇಲುನೋಟಕ್ಕೆ ಪ್ರಗತಿ ಪರವಾಗಿ ಕಂಡು ಬಂದರೂ, ಅಂತರ್ಯದಲ್ಲಿ ಮಾತ್ರ ಅಷ್ಟಾದಶ ವರ್ಣನೆಯಂತೆ ಅದೂ ಒಂದು ಲಕ್ಷಣಬದ್ಧ ಚಿಂತನೆಯಾಗಿ ಪರಿಣಮಿಸಿ ಸಮಾಜದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಅಲ್ಲಿಯೂ ಸಹ ಸಾಮಾಜಿಕ ಅಸಮಾನತೆಗೆ ವೈದಿಕ ಧರ್ಮಗಳಂತೆಯೇ ಆಧ್ಯಾತ್ಮಿಕದಲ್ಲಿ ಪರಿಹಾರವನ್ನು ಕಂಡುಕೊಂಡವು.

ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಯೂ ಒಂದು ಸಂಪ್ರದಾಯವಾಗಿ ಬೆಳೆದು ಬಂದುದನ್ನು ಗುರುತಿಸಬಹುದು. ಕರ್ನಾಟಕದಲ್ಲಿ ಜೈನ ಸಾಹಿತ್ಯ ರಚನೆಯಾಗುವ ಹೊತ್ತಿಗೆ ಜೈನ ಧರ್ಮ ಅನೇಕ ಪ್ರಭಾವಗಳಿಗೆ ಒಳಗಾಗಿ ಬ್ರಾಹ್ಮಣೀಕರಣದತ್ತ ಸಾಗಿತ್ತು. ಅಲ್ಲದೆ ಜಿನಭಕ್ತಿಯೂ ಪ್ರಾರಂಭವಾಗಿತ್ತು. ಆತ್ಮ ನಿರೀಕ್ಷಣೆ, ಮೌಢ್ಯ ಖಂಡನೆ, ವೇದಶಾಸ್ತ್ರ ವಿರೋಧ, ಸಾಮಾಜಿಕ ವಿಮರ್ಶೆ, ಕ್ಷುದ್ರ ದೇವತೆಗಳ ಖಂಡನೆ ಈ ಅಂಶಗಳು ಪುರಾಣ ಲಕ್ಷಣದಂತೆ, ಕಾವ್ಯಗಳ ಅಷ್ಟಾದಶ ವರ್ಣನೆಯಂತೆ ಸುಧಾರಿತ ಮತಗಳಲ್ಲಿ ಒಂದು ಸಂಪ್ರದಾಯವಾಗಿಯೇ ಬೆಳೆದು ಬಂದಿತು. ಇಂಥ ಒಂದು ಅನುಕರಣೆಯನ್ನು ಮುಂದೆ ಬಂದ ಕೀರ್ತನೆ ಮತ್ತು ವೈದಿಕ ಸಾಹಿತ್ಯವೂ ಮಾಡಿದುದನ್ನು ಗಮನಿಸಬಹುದು. ಕನ್ನಡ ಸಾಹಿತ್ಯದ ಅಭಿವ್ಯಕ್ತಿಗೆ ವೀರ ಮತ್ತು ಶೃಂಗಾರ ಈ ಎರಡೂ ಪ್ರಮುಖ ರಸಗಳಾದುವು. ಅದು ಲೌಕಿಕ ಅಥವಾ ಆಧ್ಯಾತ್ಮಿಕ ಕಾವ್ಯವಾದರೂ ಅಲ್ಲಿ ವೀರ ಶೃಂಗಾರ

ರಸಗಳೇ ಅಂತರ್ಮುಖವಾಗಿಯೋ ಅಥವಾ ಬಹಿರ್ಮುಖವಾಗಿಯೋ ವರ್ಣಿತವಾಗಿವೆ. ಕವಿಗಳಿಗೆ ಕಾವ್ಯ ಮುಕ್ತಾಂಗನೆ ಇಲ್ಲವೆ ಕಾವ್ಯಾಂಗನೆಯಾದಳು. ಅದನ್ನೇ ಮುಕ್ತಿ ಶ್ರೀ ಅಥವಾ ವೀರ ಶ್ರೀ ಎಂದು ಕರೆದು ವಾಕ್‌ಶ್ರೀಯಲ್ಲಿ ಕಡೆದರು. ಆಧುನಿಕ ಬರಹಗಾರರೂ ವಿವಿಧ ಕಾವ್ಯ ಪ್ರಕಾರಗಳಲ್ಲಿ ಇಂಥ ಸರಳ ಸೂತ್ರೀಕೃತ ಬರವಣಿಗೆಯಿಂದ ಮುಕ್ತರಾಗದುದು ಸ್ಥಗಿತತೆಯ ರೂಪಾಂತರ ಅವಸ್ಥೆಗೆ ಸಾಕ್ಷಿಯಾಗಿದೆ. ಎಂಥ ಗಂಭೀರ ಸಮಸ್ಯೆಗಳೂ ಗಂಡು ಹೆಣ್ಣಿನ ಸಮಸ್ಯೆಯ ಸೂತ್ರಕ್ಕಿಳಿದು ಸಂಪ್ರದಾಯ ವಿರೋಧಿಸುವ ಅಥವಾ ಸಂಪ್ರದಾಯವನ್ನು ಎತ್ತಿ ಹಿಡಿಯುವ ಸಾಹಸದಲ್ಲಿ ಸಾಹಿತ್ಯ ವಾಸ್ತವಿಕ ಬದುಕಿನತ್ತ ವಿಮುಖವಾಯಿತು.

ಧರ್ಮ ಮತ್ತು ಸಾಹಿತ್ಯದಲ್ಲಿ ವೈಚಾರಿಕತೆ ಒಂದು ಸಂಪ್ರದಾಯವಾಗಿ ಬಂದಿರುವುದನ್ನು ಸಾಧಿಸಲು ಹೊಲೆಯ ಮತ್ತು ಹೆಣ್ಣಿನ ಸ್ಥಾನಮಾನವನ್ನು ವಿವಿಧ ಕಾಲದ, ವಿವಿಧ ಮತಗಳಲ್ಲಿ ಬಂದಿರುವಂತೆ, ಗುರುತಿಸುವುದರಿಂದ ಸ್ಪಷ್ಟವಾಗುತ್ತದೆ. ವೈದಿಕ ಧರ್ಮದಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲ. ಅವಳು ಗಂಡಿಗೆ ಅಧೀನಳು. ಜೈನ ಧರ್ಮದಲ್ಲಿ ಕಂತಿಯರಿಗೆ ಅವಕಾಶವಿದ್ದರೂ, ಗಂಡು ಜನ್ಮದಲ್ಲಿಯೇ ಅರ್ಹಂತ ಪದವಿಯು ಸಾಧ್ಯವಾಗುವುದು. ವೀರಶೈವರಲ್ಲಿ ಹೆಣ್ಣಿನ ಕಲ್ಪನೆಯಲ್ಲಿ ತುಂಬ ಗೊಂದಲವಿದ್ದು, ಸತಿಪತಿಭಾವ-ಶರಣ ಸತಿ ಲಿಂಗಪತಿ-ತುಂಬ ಗೊಂದಲಕ್ಕೆ ಕಾರಣವಾಯಿತು. ಆಧ್ಯಾತ್ಮಿಕ ಸಾಧನೆಯಲ್ಲಿ ಹೆಣ್ಣಿಗೆ ಸಮಾನ ಅವಕಾಶ ದೊರಕಿದಂತೆ ಕಂಡರೂ, ಸಾಮಾಜಿಕ ಜೀವನದಲ್ಲಿ ಮಾತ್ರ ವೀರಶೈವ ಧರ್ಮದಲ್ಲಿಯೂ ಅಂಥ ಬದಲಾವಣೆ ಎದ್ದು ಕಾಣಲಿಲ್ಲ. ಸುಧಾರಿತ ಮತಗಳಲ್ಲಿ ಹೆಣ್ಣಿನ ಸ್ಥಾನ ವೈದಿಕ ಮತಕ್ಕಿಂತ ಭಿನ್ನವಾಗಿದ್ದು, ಸಮಾನತೆ ದೊರಕಿತೆಂಬುದು ಕೇವಲ ವೈಚಾರಿಕತೆಯ ಸಂಪ್ರದಾಯದ ಜಿಜ್ಞಾಸೆಯ ಅಂಶ ಮಾತ್ರ. ಜಾತಿ ಸಮಸ್ಯೆಯೂ ಅಷ್ಟೆ. ಪಂಪನ ಕರ್ಣನ ಪಾತ್ರದಲ್ಲಿ ಜಾತಿ ವಿರುದ್ಧದ ಮಾತುಗಳು ಬಹು ಮಾರ್ಮಿಕವಾಗಿ ಬರುತ್ತವೆ. ಹೊಲೆಯ ಜಾತಿಯ ಸಮಸ್ಯೆ ಜೈನ, ವೀರಶೈವ ಮತ್ತು ವೈದಿಕ ಮತಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ ಬರುತ್ತದೆ. ವೈದಿಕರ ಭಕ್ತಿ, ತಾಂತ್ರಿಕ ಸಾಧನೆ, ಜೈನರ ಬ್ರತ, ವೀರಶೈವರ ದೀಕ್ಷೆ, ಮಾಧ್ವರ ದಾಸ ದೀಕ್ಷೆ-ಇವು ಹೊಲೆಯರನ್ನು ಉತ್ತಮರನ್ನಾಗಿಸಿದರೂ ಅಂತ್ಯದಲ್ಲಿ ವರ್ಣ ವ್ಯವಸ್ಥೆಯ ಮೇಲೆ ನಿಂತವು. ಹೊಲೆಯರಿಗೆ ತೋರಿಸಿದ ರಿಯಾಯ್ತಿ, ಅನುಕಂಪೆ, ಕರುಣೆಗಳು, ತಮ್ಮ ವಿರುದ್ಧ ಹೊಲೆಯರು ಸಂಘಟಿಸದಂತೆ, ನಿರ್ವೀರ್ಯಗೊಳಿಸಿ, ಮತ್ತು ಅವರನ್ನು ತಮ್ಮ ಸೇವೆಯ ನಿಷ್ಠಾವಂತರನ್ನಾಗಿಸಿದ ತಂತ್ರಗಳು. ಅದೇನಿದ್ದರೂ ಕಾವ್ಯಾನುಭವದ ಧಾರ್ಮಿಕ ದೃಷ್ಟಿ ಅಷ್ಟೆ. ಅದು ಎಂದೆಂದೂ ಭಾವನಿಷ್ಠವೇ ಹೊರತು ವಸ್ತುನಿಷ್ಠವಾಗಲಿಲ್ಲ. ಆತ್ಮ ಹಂತದಲ್ಲಿ ಎಲ್ಲರಿಗೂ ಸಮಾನತೆ, ಸಾಮಾಜಿಕ ಹಂತದಲ್ಲಿ ಮಾತ್ರ ಅಸಮಾನತೆಯ ಸೂತ್ರಬದ್ಧ ಬದುಕು ಸಾಹಿತ್ಯಧರ್ಮವಾಯಿತು. ಸಾಹಿತ್ಯ ಸ್ವರೂಪದಲ್ಲಿ ಮಾತ್ರ ಕಾಲ ಬದಲಾವಣೆಗೆ ತಕ್ಕಂತೆ ಭಾಷೆ, ಛಂದಸ್ಸು ಮತ್ತು ರೀತಿಯಲ್ಲಿ ಪ್ರಯೋಗಗಳು ಸಾಹಿತ್ಯ ಸ್ವರೂಪದಲ್ಲಿ ಮಾತ್ರ ತಲೆದೋರಿ, ವಸ್ತು ಮಾತ್ರ ಸ್ಥಾಯಿಯಾಗಿ ಮುಂದುವರಿಯಿತು.

ವೈದಿಕ ಭಕ್ತಿ ಪಂಥದಲ್ಲಿ ಹೊಲೆಯ/ಶೂದ್ರ ಭಕ್ತನಾಗಿ ಮುಕ್ತಿ ಸಾಧಿಸಬಹುದು. ಜೈನ ಧರ್ಮದಲ್ಲಿ ವ್ರತದಿಂತ ಬ್ರಾಹ್ಮಣತ್ವ ಸಾಧಿಸಿ ಅನಂತರ ಕ್ಷತ್ರಿಯನಾಗಿ ಕೇವಲ ಜ್ಞಾನ ಸಾಧಿಸಬಹುದು.

ವೀರಶೈವರಲ್ಲಿ ಲಿಂಗದೀಕ್ಷೆಯಿಂದ ಜಂಗಮನಾಗಿ ಶೂದ್ರ ಮುಕ್ತಿ ಹೊಂದಬಹುದು. ಮಾಧ್ವಮತದ ಕೀರ್ತನಕಾರರಲ್ಲಿ ಶೂದ್ರ ದಾಸನಾಗಿ ಸೇವೆಯಿಂದ ಸಾಲೋಕ್ಯ, ಸಾರೂಪ್ಯ ಪಡೆಯಬಹುದು. ಆಧುನಿಕ ಸಾಹಿತ್ಯದಲ್ಲಿಯೂ ಹೊಲೆಯ ಅಥವಾ ಹೊಲತಿ ಯೋಗ್ಯತೆಯಿಂದಲೋ ಅಥವಾ ಮೈಮಾಟದಿಂದಲೋ, ಗಂಡಾದರೆ ಉಚ್ಚ ವರ್ಗದ ಸ್ತ್ರೀಯರ, ಹೆಣ್ಣಾದರೆ ಉಚ್ಚವರ್ಗದ ಗಂಡಸರ ಭೋಗವಸ್ತುವಾಗಬಹುದು. ಉಚ್ಚ ವರ್ಗೀಕರಣದಿಂದ ಅಂದರೆ ಬ್ರಾಹ್ಮಣೀಕರಣ ಅಥವಾ ಸಂಸ್ಕೃತೀಕರಣ ಮತ್ತು ಪಾಶ್ಚಾತ್ತ್ಯೀಕರಣದಿಂದ ಮಾತ್ರ ಸಮಾಜದಲ್ಲಿ ತನ್ನ ಸ್ಥಾನಮಾನವನ್ನು ಶೂದ್ರರು ಉತ್ತಮಪಡಿಸಿಕೊಳ್ಳಲು ಸಾಧ್ಯ. ಅವೈದಿಕ ಮತಗಳು ಶೂದ್ರರನ್ನು ಬ್ರಾಹ್ಮಣರನ್ನಾಗಿಸುವಲ್ಲಿ, ವೈದಿಕ ಮತಗಳು ಶೂದ್ರರಿಗೆ ಭಕ್ತಿಯಿಂದ ಮುಕ್ತಿ ದೊರಕಿಸಿಕೊಡುವಲ್ಲಿ ತಮ್ಮ ಪ್ರಗತಿಪರ ಧೋರಣೆಯ ಭ್ರಮೆಯಿಂದ ಅನುಕಂಪ ತೋರಿಸಿದರು. ಹೊಲೆಯರನ್ನು ಮತಾಂತರದ ಮತಗಳು ದೀಕ್ಷೆಯಿಂದ ಬ್ರಾಹ್ಮಣರಿಗೆ ಸಮಾನರೆಂದು ಪರಿಗಣಿಸಿ, ಬ್ರಾಹ್ಮಣರ ವಿರುದ್ಧ ಸೇಡು ತೀರಿಸಿಕೊಂಡರೆ, ಬ್ರಾಹ್ಮಣರು ಭಕ್ತಿ ಪಂಥದಲ್ಲಿ ಶೂದ್ರರಿಗೆ/ಹೊಲೆಯರಿಗೆ ಮುಕ್ತಿಗೆ ಅವಕಾಶವಿತ್ತು, ಅವೈದಿಕರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಯಾವ ದೀಕ್ಷೆಯೂ ಇಲ್ಲದೆ ನಾಮಸ್ಮರಣೆಯ ಮಾತ್ರದಿಂದಲೇ ಮುಕ್ತಿಮಾರ್ಗ ತೋರಿ ಕೆಳವರ್ಗದ ಸಂಘಟನೆಯನ್ನು ಒಡೆದರು.

ವೀರಶೈವ ಧರ್ಮ ಹೊಲೆಯರನ್ನು ನೇರವಾಗಿ ಸರಿಸಮಾನರು ಎಂದು ಒಪ್ಪಿಕೊಳ್ಳಲಿಲ್ಲ. ಲಿಂಗದೀಕ್ಷೆಯ ಮಹತ್ವವನ್ನು ಸಾರಿದರು. ಚಂಡಾಲ ಜ್ಞಾನವಂತನಾದರೂ ವೀರಶೈವರು ಗೌರವಿಸಿ ಮಾನ್ಯಮಾಡಲಿಲ್ಲ. ಜ್ಞಾನಿ ಚಂಡಾಲ ಮತ್ತು ಜ್ಞಾನಿ ಬ್ರಾಹ್ಮಣ- ಇಬ್ಬರೂ ಲಿಂಗದೀಕ್ಷೆ ಇಲ್ಲದಿದ್ದರೆ ಭವಿಗಳೇ. ದೀಕ್ಷಾಬದ್ಧ ಚಂಡಾಲ ಆತ್ಮಜ್ಞಾನಿಯಾದರೂ, ಅವನ ಸಾಮಾಜಿಕ ಸ್ಥಾನಮಾನ ಹಿಂದಿನದೇ ಮುಂದುವರಿದು, ಅವನ ಆತ್ಮಸಾಧನೆಗೆ ಮಾತ್ರ ವೀರಶೈವರಲ್ಲಿ ಗೌರವ ದೊರೆಯುತ್ತದೆ. ಅಲ್ಲದೆ ದೀಕ್ಷೆ ಎಲ್ಲರಿಗೂ ಸಮಾನವಾಗಿ ದೊರೆಯದು. ದೀಕ್ಷೆ ಕೊಡುವಾಗಲೂ ವರ್ಣಜಾತಿಯ ಗಣನೆ ಬರುತ್ತದೆ. ವೀರಶೈವ ಧರ್ಮದ ಅಧಿಕೃತ ವಕ್ತರನಾದ ಚನ್ನ ಬಸವಣ್ಣನೇ 'ಬ್ರಾಹ್ಮಣನಿಗೆ ಮೂರು ವರ್ಷ, ಕ್ಷತ್ರಿಯನಿಗೆ ಆರು ವರ್ಷ, ವೈಶ್ಯನಿಗೆ ಒಂಬತ್ತು ವರ್ಷ ಮತ್ತು ಶೂದ್ರನಿಗೆ ಹನ್ನೆರಡು ವರ್ಷ ನೋಡಿ ದೀಕ್ಷೆಯನ್ನು ಕೊಡಬೇಕು' ಎನ್ನುತ್ತಾನೆ. ಇದರಿಂದ ವರ್ಣಾಶ್ರಮದ ಮಾನದಂಡ ಅನ್ವಯವಾದಂತಾಯಿತು. ಸದ್ವಂಶ ಮತ್ತು ಹುಟ್ಟಿನಿಂದ ಜಂಗಮತ್ವದ ಸಿದ್ಧಾಂತವನ್ನು ಚನ್ನಬಸವಣ್ಣ ಸಮರ್ಥಿಸಿರುವುದು ವಚನಗಳಿಂದ ಕಂಡುಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಹೊಸ ಹೊಸ ಪಂಥಗಳು ಅಸ್ತಿತ್ವಕ್ಕೆ ಬಂದವೇ ಹೊರತು ಮಾನವನನ್ನು ಮಾನವನನ್ನಾಗಿ ಸ್ವೀಕರಿಸಿ ಮಾನವೀಯತೆ ತೋರುವ ಒಂದು ಧರ್ಮವೂ ಹುಟ್ಟಲಿಲ್ಲ.

ಹೊಸ ಹೊಸ ಮತಗಳು, ಕೆಳವರ್ಗದವರು ಒಂದು ಪಕ್ಷ ಮತಾಂತರಗೊಂಡರೂ, ಸ್ಥಾಯಿಯಾಗಿ ಸಾಧಕರಾಗಿಯೇ ಉಳಿಯುವ ಸ್ಥಿತಿಯನ್ನು ಸೃಷ್ಟಿಸಿದವು. ಉಚ್ಚ ವರ್ಗದಿಂದ ಮತಾಂತರಗೊಂಡವರೇ ಧಾರ್ಮಿಕ ನಾಯಕರಾಗಿ, ಧರ್ಮತತ್ತ್ವಗಳ ನಿರೂಪಕರಾದರು. ಉದಾಹರಣೆಗೆ ಕೆಳವರ್ಗದಿಂದ ಬಂದ ಜನರಿಗೆ ಹೆಂಡ ಕುಡಿಯುವ, ಮಾಂಸ ತಿನ್ನುವ, ನಿತ್ಯ

ಸ್ನಾನ ಮಾಡದ ಮತ್ತಿತರ ಗುಣಗಳು ಸ್ವಾಭಾವಿಕವಾದುವು. ಸುಧಾರಿತ ಮತಗಳು ಅಂಥ ಚಟಗಳನ್ನು ನಿಷೇಧಿಸಿದುದರಿಂದ ಬದುಕಿನುದ್ದಕ್ಕೂ ಅವರು ಅವನ್ನು ಬಿಡುವುದರಲ್ಲಿಯೇ ಒದ್ದಾಡುತ್ತ ಪ್ರಾಣ ಬಿಡುವರೇ ಹೊರತು ಮುಂದಿನ ಮೆಟ್ಟಿಲ ಸಾಧನೆ ಅವರಿಗೆ ಶಾಶ್ವತವಾಗಿ ಮುಚ್ಚಿದಂತೆಯೇ ಸರಿ. ಇವಾವ ಚಟವೂ ಇಲ್ಲದ ಉಚ್ಚವರ್ಗದ ಸಾಧನೆ ತೀವ್ರವಾಗುತ್ತದೆ. ಇದರಿಂದ ಕೆಳವರ್ಗ ಭಕ್ತರಾಗಿಯೇ ಉಳಿದು, ಉಚ್ಚವರ್ಗ ಜಂಗಮರಾಗಿಯೇ ಉಳಿದು ಮತ್ತೆ ಹುಟ್ಟಿನ ಸಿದ್ಧಾಂತವೇ ಅನುಷ್ಠಾನಕ್ಕೆ ಬಂದಿತು. ಭಕ್ತನ ಮಗ ಭಕ್ತನಾದ, ಜಂಗಮನ ಮಗ ಜಂಗಮನಾದ. ಭಕ್ತ ಸಾಧನೆಯಿಂದ ಜಂಗಮನಾಗುವ ಅವಕಾಶ ಇರುವುದು ಅನ್ಯ ಧರ್ಮೀಯರ ಬಾಯಿ ಮುಚ್ಚಿಸುವ, ಸ್ವಧರ್ಮೀಯ ಮತಾಂತರಿ ಭಕ್ತರ ಕಣ್ಣೀರೊರೆಸುವ ತಂತ್ರ ಮಾತ್ರವಾಯಿತು. ಇಂಥ ಒಂದು ಧಾರ್ಮಿಕ ದೃಷ್ಟಿ ಕಾವ್ಯಗಳಲ್ಲಿಯೂ ಅಭಿವ್ಯಕ್ತವಾಯಿತು. ಇಂಥ ಒಂದು ಗೊಂದಲ ಸೃಷ್ಟಿಗೆ ಹರಿಶ್ಚಂದ್ರ ಕಾವ್ಯವೇ ಸಾಕ್ಷಿ. ಹರಿಶ್ಚಂದ್ರ ಚಂಡಾಲಗಿತ್ತಿಯರನ್ನು ಮದುವೆಯಾಗುವ ಸಂದರ್ಭದಲ್ಲಿ, ಹರಿಶ್ಚಂದ್ರನ ಸದ್ವಂಶ ಅಡ್ಡಿ ಬರುತ್ತದೆ. ಆಗ 'ಬಚ್ಚಲುದಕ ತಿಳಿಯಾದೊಡೆ ಯಾರ ಮೀಹಕ್ಕೆ ಯೋಗ್ಯ'? ಎಂದು ಪ್ರಶ್ನಿಸುತ್ತಾನೆ. ಅದೇ ಹರಿಶ್ಚಂದ್ರ ಹೊಲೆಯ ವೀರಬಾಹುಕನಿಗೆ ಮಾರಿಕೊಂಡು, ಆಳಾಗುವ ಸಂದರ್ಭ ಬರುತ್ತದೆ. ವೀರಬಾಹುಕ ಕೊಂಡುಕೊಳ್ಳಲು ಮುಂದೆ ಬಂದಾಗ ಹರಿಶ್ಚಂದ್ರ 'ಕಾಲ ಗುಣವೋ ನೆಲದ ಗುಣವೋ' ಎಂದು ಹಂಗಿಸುತ್ತಾನೆ. ವೀರಬಾಹುಕ ಹರಿಶ್ಚಂದ್ರನನ್ನು ಅವನ ಮಾತಿನಿಂದಲೇ ಕಟ್ಟಿ, ಸತ್ಯಭ್ರಷ್ಟನಾಗುವ ಪರಿಸ್ಥಿತಿ ಒದಗಿದಾಗ, ಹರಿಶ್ಚಂದ್ರ ತನ್ನ ವಂಶಕ್ಕೆ ಕುಂದು ಬಂದರೆ ಬರಲಿ, ಕೊಟ್ಟ ಮಾತಿನ ಇಕ್ಕಟ್ಟಿನಿಂದ ಪಾರಾಗಲು, ಸೂರ್ಯಕಿರಣ ಬಚ್ಚಲುದಕದಲ್ಲಿ ಪ್ರತಿಬಿಂಬಿಸಿದರೆ ಸೂರ್ಯನಿಗೆ ಕುಂದೆ ಎಂದು ಹೊಲೆಯನಿಗೆ ಆಳಾಗುವುದನ್ನು ಸಮರ್ಥಿಸಿಕೊಳ್ಳುವ ವೈರುದ್ಧ್ಯವನ್ನು ಗುರುತಿಸಬಹುದು. ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರ ಎಂದು ಸಾರುವ ಹರಿಶ್ಚಂದ್ರ ಕಾವ್ಯ ಒಂದು ಶಿವಮತ ಸಾರುವ ಕಾವ್ಯವೇ ಸರಿ. ಕಷ್ಟ ಬಂದಾಗ ಬ್ರಾಹ್ಮಣ ಹೊಲೆಯನಿಗೆ ಆಳಾಗಬಹುದು, ಹೊಲೆಯನನ್ನು ಗುರುವಾಗಿಯೂ ಸ್ವೀಕರಿಸಬಹುದು. ಆದರೆ ಶೂದ್ರನಿಗೆ ಮಾತ್ರ ಊರ್ಧ್ವ ಸಾಮಾಜಿಕ ಬದಲಾವಣೆಗೆ ಎಂದೆಂದೂ ಅವಕಾಶವಿಲ್ಲ ಎನ್ನುವ ಪ್ರತಿಲೋಮ ತತ್ತ್ವದ ಸ್ಮೃತಿಕಾರರ ಸಾಮಾಜಿಕ ಕಟ್ಟು ಕಟ್ಟಳೆಗಳೇ ಹರಿಶ್ಚಂದ್ರ ಕಾವ್ಯದ ಚೌಕಟ್ಟಿನಲ್ಲಿ ತರ್ಕದ ನಾಲಗೆಯಿಂದ ವಿಜೃಂಭಿಸುವುದು ಸ್ಪಷ್ಟವಾಗುತ್ತದೆ. ಅಲ್ಲದೆ ವೀರಬಾಹುಕ ನಿಜವಾದ ಹೊಲೆಯನಲ್ಲ. ಹೊಲೆಯ ವೇಷದ ಯಮ. ಈ ಪ್ರಸಂಗ ಶಂಕರಾಚಾರ್ಯರನ್ನು ಶಿವ ಹೊಲೆಯನಾಗಿ ವೇಷಧರಿಸಿ ಬಂದು ಶಂಕರಾಚಾರ್ಯರ ಅದ್ವೈತ ತತ್ತ್ವವನ್ನು ಒರೆಹಚ್ಚುವ ಸಂದರ್ಭಕ್ಕಿಂತ ಭಿನ್ನವಾದುದಲ್ಲ. ನಿಜವಾದ ಹೊಲೆಯನೇ ಉಚ್ಚವರ್ಗದವರನ್ನು ಇಂಥ ಪರೀಕ್ಷೆ ಮಾಡಲು ನಾಲಗೆ ಎಲ್ಲಿ ? ಅಥವಾ ಪ್ರಶ್ನಿಸಿಯಾದರೂ ಬದುಕಿ ಉಳಿಯಬಲ್ಲನೆ? ಕೆಂಬಾವಿ ಭೋಗಣ್ಣನ ಕಾವ್ಯದಲ್ಲಿಯೂ ಶಿವ ಹೊಲೆಯನಾಗಿ ಬಂದು ಅಗ್ರಹಾರ ಪ್ರವೇಶಿಸಿ ಶಿವಭಕ್ತನ ಮನೆ ಪ್ರವೇಶಿಸಿ ಸತ್ತ ಕರು ಹೊತ್ತು ತಂದು, ಬ್ರಾಹ್ಮಣರನ್ನು ಅವಮಾನಗೊಳಿಸಿ, ಭಕ್ತನ ಭಕ್ತಿಯನ್ನು ಒರೆಹಚ್ಚಿ ಬೆಳಗಿಸುತ್ತಾನೆ. ಇಲ್ಲಿಯೂ ಶಿವ ಹೊಲೆಯನಾಗಿ ಬರಬಹುದಷ್ಟೇ ಹೊರತು, ಹುಟ್ಟು

ಹೊಲೆಯನ ನೆರಳು ಉತ್ತಮರ ಮೇಲೆ ಮಾತ್ರ ಅಪ್ಪಿತಪ್ಪಿಯೂ ಬೀಳಬಾರದು. ಹೊಲೆಯ ಮಾತ್ರ ಜಂಗಮನಾಗಲಾರ, ಶಿವನಾಗಲಾರ, ಯಾರನ್ನೂ ಒರೆಹಚ್ಚಲಾರ. ಇತ್ತೀಚೆಗೆ ಹರಿಜನ ವಿದ್ಯಾವಂತ ಶಿವದೀಕ್ಷೆ ಹೊಂದಿ ಶಿವಧರ್ಮ ಪ್ರಚಾರಕನಾಗಿ ಲಿಂಗವಂತರ ಮನೆ ಪ್ರವೇಶಾವಕಾಶ ಹೊಂದಿದುದು ದೊಡ್ಡ ಸುದ್ಧಿಯಾಗಿ ಪತ್ರಿಕೆಗಳಲ್ಲಿ ಸಂಶೋಧನ ಲೇಖನವಾಗಿ ಪ್ರಕಟಿತವಾಗಿರಬೇಕಾದರೆ, ಹಿಂದಿದ್ದ ಸ್ಥಿತಿಯು ಎಂಥದು ಎಂದು ಅರ್ಥಮಾಡಿಕೊಳ್ಳಬಹುದು. ಹೊಲೆಯ ಅಥವಾ ಶೂದ್ರ ಎಂದೆಂದೂ ಜಂಗಮನಾಗಿ, ಶಿವನಾಗಿ ಭಕ್ತರನ್ನು ಪರೀಕ್ಷಿಸಲಾರ ಎಂಬ ಅಂಶವೇ ವೀರಶೈವ ಪುರಾಣ, ಕಾವ್ಯ ಮತ್ತು ಧರ್ಮಗ್ರಂಥಗಳಿಂದ ತಿಳಿದು ಬರುತ್ತದೆ. ಆದರೆ ಶರಣ ಹೊಲೆಯರು ಮಾತ್ರ ಬ್ರಾಹ್ಮಣರನ್ನು ಅವಮಾನಕ್ಕೆ ಗುರಿಯಾಗಿಸುವ ಪ್ರಸಂಗಗಳು ವೀರಶೈವ ಕೃತಿಗಳಲ್ಲಿ ತುಂಬಿ ತುಳುಕುತ್ತವೆ. ಇಂಥ ಭಕ್ತ ಹೊಲೆಯರನ್ನು ಪಿರಿಯ ಮಾಹೇಶ್ವರರು, ತಿರುತೊಂಡರು ಎಂದು ಕರೆದಾದರೂ ಏನು ಪ್ರಯೋಜನ? ಭವಿಹೊಲೆಯ ದೀಕ್ಷೆಯಿಂದ ಭಕ್ತ ಹೊಲೆಯನಾದ. ಆದರೆ ಅವನ ಸಾಮಾಜಿಕ ಸ್ಥಾನಮಾನ ಹಿಂದಿನದೇ ಮುಂದುವರೆಯಿತು. ಆದರೆ ತನ್ನ ಮೈಯಿನ ಚರ್ಮಸುಲಿದು ಉತ್ತಮ ಶರಣರಿಗೆ ಚಪ್ಪಲಿ ಹೊಲಿಯುವಲ್ಲಿ ಮಾತ್ರ ಉನ್ಮಾದ ಭಕ್ತಿಯ ತೀವ್ರತೆಯ, ಶೋಷಣೆಯ ವಿರುದ್ಧದ ಸುಪ್ತಬಯಕೆ ವ್ಯಕ್ತಸ್ವರೂಪವಾಗಿ, ಸಾಂಕೇತಿಕ ಧಾರ್ಮಿಕ ವಿಧಿಯಾಗಿದ್ದೊಂದು ವಿಪರ್ಯಾಸವೇ ಸರಿ. ಕೆಳವರ್ಗದ ವಚನಕಾರರ ಕ್ರಾಂತಿಯ, ವ್ಯವಸ್ಥೆಯ ವಿರುದ್ಧದ ಮಾತುಗಳು ಮಾತ್ರ ಉಚ್ಚವರ್ಗದವರ ಡಂಭಾಚಾರದ ಅಬ್ಬರದ ಆಚರಣೆಯಲ್ಲಿ ಸದ್ದು ಗದ್ದಲವಿಲ್ಲದೆ ಕರಗಿಹೋದವು.

ಕಾವ್ಯ ಧರ್ಮಕ್ಕೆ ಪ್ರಚಾರ ಮಾಧ್ಯಮವಾದರೆ, ಧರ್ಮ ಕಾವ್ಯಕ್ಕೆ ಆಶ್ರಯಕೊಟ್ಟು ಒಡೆಯನಾಯಿತು. ಹಿಂದಿನ ರಾಜಾಶ್ರಯಕ್ಕಿಂತ ಭಿನ್ನವಾದ ಸ್ಥಿತಿಗತಿಯನ್ನು ಧರ್ಮಾಶ್ರಯ ಕಾವ್ಯಕ್ಕೆ ಸೃಷ್ಟಿಸಲಿಲ್ಲವೆಂಬುದು ಮಾತ್ರ ಸ್ಪಷ್ಟವಾಗುತ್ತದೆ. ದೊರೆಯ ಸ್ಥಾನದಲ್ಲಿ ದೇವರು ಅಥವಾ ಧರ್ಮ ನಾಯಕ ಆತ್ಮ ಸಿಂಹಾಸನಾಧೀಶ್ವರನಾಗಿ ಕಾವ್ಯ ಸಾಮ್ರಾಜ್ಯವನ್ನು ಆಳಿದ ಅಷ್ಟೆ. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳಿಂದ ಕಾವ್ಯವನ್ನು ಪರಿಶೀಲಿಸುವುದರಿಂದ ಸಾಹಿತ್ಯ ಕೃತಿಗಳು ಮತ್ತಷ್ಟು ಧ್ವನಿಯನ್ನು ಸಹೃದಯರಿಗೆ ಹೊಸ ಹೊಸದಾಗಿ ತೋರಿಸಲು ಅವಕಾಶವಾಗುವುದರಲ್ಲಿ ಯಾವ ಸಂಶಯವೂ ಇರದು. ♦

5. ಕನಕದಾಸನ ಕೀರ್ತನೆಗಳು

ಕನಕದಾಸನ ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ನಳಚರಿತ್ರೆ, ಎಂಬ ವಸ್ತುನಿಷ್ಠ ಕಾವ್ಯಗಳಿಂದಲೂ, ಹರಿಭಕ್ತಸಾರ ಮತ್ತು ಕೀರ್ತನೆಗಳು ಎಂಬ ವ್ಯಕ್ತಿ ನಿಷ್ಠ ಕೃತಿಗಳಿಂದಲೂ ಅಲ್ಲದೆ ಮಧ್ವಮತ ಸಂಪ್ರದಾಯದ ಪರಂಪರೆಯಿಂದ ಬಂದ ದಂತಕತೆಗಳಿಂದ ಅವನ ಜೀವನ ಚರಿತ್ರೆಯನ್ನು ನಿರೂಪಿಸುವ ಪ್ರಯತ್ನ ನಡೆದಿದೆ. ಕನಕದಾಸನು ದಾಸನಾಗುವ ಮೊದಲೇ ಕಾವ್ಯಗಳನ್ನು ಬರೆದನೆಂದೂ, ಅನಂತರ ಕೀರ್ತನೆಗಳನ್ನು ರಚಿಸಿದನೆಂದೂ ಅಭಿಪ್ರಾಯಪಡುತ್ತಾರೆ.[1] ಕೆಲವು ಕೀರ್ತನೆಗಳ ಕರ್ತೃ ಯಾರು ಎಂಬುದರ ಬಗ್ಗೆಯೂ ಜಿಜ್ಞಾಸೆ ಇದೆ.[2] ಕನಕದಾಸನ ಜೀವನ ಚರಿತ್ರೆಯನ್ನು ನಿರೂಪಿಸಲು ಸಾಹಿತ್ಯಾಧಾರವನ್ನು ಬಿಟ್ಟರೆ ಬೇರೆ ಗತಿ ಇಲ್ಲ. ಅದನ್ನೇ ಅತ್ಯಂತ ಎಚ್ಚರಿಕೆಯಿಂದ ವಿಶ್ಲೇಶಿಸಿ, ವಿಮರ್ಶಿಸಿ ಒಂದು ಚಿತ್ರವನ್ನು ಪುನರ್‌ರಚಿಸಬೇಕಾಗಿದೆ. ಶೂದ್ರನಾಗಿ ಹುಟ್ಟಿದ ಕನಕದಾಸನು, ವ್ಯಾಸರಾಯನ ಅನುಗ್ರಹಕ್ಕೆ ಪಾತ್ರನಾಗಿ, ದಾಸನಾಗಿ, ಸಾಧನೆ ಮಾಡಿ ಅಪರೋಕ್ಷ ಜ್ಞಾನ ಪಡೆದ ಮಹಾಸಂತನೆಂಬ ವಿಷಯ ಮಾತ್ರ ಸದ್ಯದಲ್ಲಿ ಪ್ರಚಲಿತವಾಗಿದೆ. ಕೆಲವರು ಕನಕದಾಸನನ್ನು ದಾಸಪಂಥದ ಏಕೈಕ ಶೂದ್ರದಾಸನೆಂದು ಗುರುತಿಸಿ ಗೌರವಿಸಿದ್ದಾರೆ.[3] ಮತ್ತೆ ಕೆಲವರು ಅವನ ಸ್ವತಂತ್ರವಾದ ಪ್ರಜ್ಞೆಗೆ ಮೆಚ್ಚಿಗೆ ಸೂಚಿಸಿದ್ದಾರೆ.[4] ಇನ್ನೂ ಕೆಲವರು ಯಾವ ದಾಸರಲ್ಲಿಯೂ ಕಾಣದ ಕನಕದಾಸನ ಭಕ್ತಿಗೆ ಮೂಲಶ್ರುತಿಯಾಗಿರುವ ಕಾವ್ಯ ಪ್ರಜ್ಞೆಯ ತಂಬೂರಿ ಪ್ರತಿಭೆಗೆ ಮುಗ್ಧರಾಗಿದ್ದಾರೆ.[5] ಹೀಗೆ ಒಬ್ಬೊಬ್ಬರು ಕನಕದಾಸನ ವ್ಯಕ್ತಿತ್ವದ ಒಂದೊಂದು ಮುಖವನ್ನು ಅನಾವರಣ ಮಾಡುತ್ತಿರುವುದರಿಂದ ದಾಸರ ಪರಂಪರೆಯಲ್ಲಿ ಅವನ ಸ್ಥಾನ ಮಿಕ್ಕ ದಾಸರಿಗಿಂತ ವಿಶಿಷ್ಟವಾದುದೆಂಬುದರಲ್ಲಿ ಸಂಶಯವಿಲ್ಲ. ಆದರೆ ಅವನ ಬದುಕಿನ ಇನ್ನೂ ಕೆಲವು ಅಂಶಗಳು ತೊಡಕಿನವುಗಳಾಗಿದ್ದು, ಮುಕ್ತ ಮನಸ್ಸಿನಿಂದ ವ್ಯಾಸಂಗ ಮಾಡುವ ವಿದ್ವಾಂಸರಿಗೆ ಸವಾಲಾಗಿ ನಿಂತು ಹೊಸ ದೃಷ್ಟಿಯ ಮೌಲ್ಯಮಾಪನಕ್ಕೆ ಅವಕಾಶವಿದೆ.

ದಂತಕತೆಗಳಲ್ಲಿ ಕೆಲವನ್ನು ಎಚ್ಚರಿಕೆಯಿಂದ ವಿಶ್ಲೇಷಿಸಿ, ಕೀರ್ತನೆಗಳಲ್ಲಿ ಬರುವ ಅಂಶಗಳೊಂದಿಗೆ ಹೋಲಿಸಿ ವ್ಯಾಸಂಗ ಮಾಡಿದಾಗ ಗಮನಾರ್ಹವಾದ ಕೆಲವು ಸಂಗತಿಗಳು ಗೋಚರವಾಗುವುವು. ಕನಕದಾಸನು ರಾಮಾನುಜ ಶ್ರೀವೈಷ್ಣವ ಪಂಥದವನೊ, ಮಾಧ್ವ

---

1. ಬೆಟಗೇರಿ ಕೃಷ್ಣಶರ್ಮ :'ಕನಕದಾಸರು ಚಿತ್ರಿಸಿದ ಜೀವನ'- ಮಹಾತ್ಮ ಕನಕದಾಸ ಪ್ರಶಸ್ತಿ, ಪುಟ ೩೧.
2. ಪಥ ನಡೆಯದಯ್ಯ ಪರಲೋಕಕ್ಕೈದುವಡೆ, ಧರೆಯ ಭೋಗವನ್ನು ನಂಬಿ, ಡೊಂಕು ಬಾಲದ ನಾಯಕರೆ-ಇನ್ನೂ ಕೆಲವು ಕೀರ್ತನೆಗಳನ್ನು ಉದಾಹರಿಸಬಹುದು.
3. ರಾ.ಸ್ವಾ. ಪಂಚಮುಖಿ: 'ಹರಿದಾಸ ಸಾಹಿತ್ಯ', ಪುಟ ೬೬.ರಾಘವೇಂದ್ರರಾವ್ : ಕರ್ನಾಟಕ ಭಕ್ತಿವಿಜಯ, ಭಾಗ-೧, ಮುನ್ನುಡಿ.
4. ರಂ.ಶ್ರೀ ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ (ಮೂರನೆಯ ಮುದ್ರಣ), ಪುಟ ೩೦೮.
5. ಜಿ.ಎಸ್.ಶಿವರುದ್ರಪ್ಪ : ಪರಿಶೀಲನೆ, ಪುಟ ೧೦೨. ತ.ಸು. ಶಾಮರಾಯ: ಕನ್ನಡ ಸಾಹಿತ್ಯ ಚರಿತ್ರೆ, ಪುಟ ೧೯೩.

ಚಿಗುರೆಲೆ ಬೇವಿನ ಸೊಪ್ಪು ನಾರ ಸೀರೆ
ಬಗೆ ಬಗೆಯಿಂದ ಶೃಂಗಾರ ಮಾಡಿ
ನೆಗೆನೆಗೆದು ಆಡಲು ಕುಣಿಯಲು ನಿನಗಿನ್ನು
ಮಿಗಿಲಾದ ಮುಕುತಿಯುಂಟೆ ಹುಚ್ಚುಮನವೆ ಕ.ಕೀ.೧೭೭

ಎಂದು ಹೇಳುವ ಕನಕದಾಸನೇ ದಾಸ ಪರಂಪರೆಯಂತೆ:

ತಾಳದಂಡಿಗೆ ಭೃಂಗಿ ಮೇಳಗಳ ಕೂಡಿ
ಶ್ರೀ ಲೋಲನ ಕೊಂಡಾಡಿ ಪಾಡುವೆನು ಕ.ಕೀ.೨೨

ಎನ್ನುತ್ತ ದಾಸ ವೇಷವನ್ನು ತೊಟ್ಟು:

ಗೆಜ್ಜೆಯ ಕಟ್ಟಿ ಆಡೊ
ಲಜ್ಜೆಯ ಬಿಟ್ಟು ಪಾಡೊ
ಮುಜ್ಜಗನ ಕೊಂಡಾಡೊ ಕ.ಕೀ. ೨೦೦

ಎಂದು ಭಾವನಾತ್ಮಕವಾಗಿ ಕುಣಿಯುವುದು ಯಾವ ರೀತಿಯಿಂದ ಭಿನ್ನ ಮತ್ತು ಸಮರ್ಥನೀಯವೊ ಗೊತ್ತಾಗದು. ಭಾವನಾತ್ಮಕ ಭಕ್ತಿ ಎರಡರಲ್ಲಿಯೂ ಇದೆ. ಉಚ್ಚವರ್ಗದ ಸಂಸ್ಕೃತಿ ಮಾತ್ರ ಸಮಾಜದಲ್ಲಿ ಮಾನ್ಯತೆ ಪಡೆದು ಶ್ರೇಷ್ಠವಾಯಿತು. ಸಾಮಾನ್ಯ ಜನರ ಸಂಸ್ಕೃತಿ ಅನಾಥವಾಗಿ ಅನಾಗರಿಕವಾಗಿ ಬಿಟ್ಟಿತು. ಬತ್ತಲೆ ದೇವರಿಗೆ ಬತ್ತಲೆ ಬಂದು ಸೇವೆ ಸಲ್ಲಿಸುವುದು ಅನಾಗರಿಕವಾದರೆ, ಕೊಳದ ದಡದಲ್ಲಿ ಬತ್ತಲೆಯಾಗಿ ಗೋಪಿಯರು ಕೃಷ್ಣನ ಸುತ್ತ ಕುಣಿಯುವುದು ಸರ್ವ ಸಮರ್ಪಣದ ಸಂಕೇತಾತ್ಮಕ ಅರ್ಥದಲ್ಲಿ ಸಮರ್ಥನೆಗೊಂಡು ಶಿಷ್ಟವಾಯಿತು. ಎಲ್ಲ ವಿಷಯದಲ್ಲಿಯೂ ಉಚ್ಚ ನೀಚ ವರ್ಗೀಕರಣಾಂಧತೆಯೇ ಅಂದಿನ ಸಮಾಜದ ಆದರ್ಶವಾಯಿತು. ಶೂದ್ರರು ರಾಜರಾದರೆ ಕ್ಷತ್ರಿಯರಾದರು, ಶ್ರೀಮಂತರಾದರೆ ದಾನ ಧರ್ಮದಿಂದ ಭಕ್ತರಾದರು, ಸಾಧಕರಾಗಿ ಸಿದ್ಧಿ ಪಡೆದರೆ ಸಂತರಾದರು. ಎಲ್ಲರೂ ಮತಾಂಧತೆಯಿಂದ ತಾವು ಹುಟ್ಟಿ ಬಂದ ವರ್ಗದ ಸಂಸ್ಕೃತಿಯ ಆಚರಣೆಯನ್ನು ಖಂಡಿಸುವಲ್ಲಿ ಉತ್ಸಾಹದಿಂದ ಮುಂದಾದರು. ಅವರು ಹೊಸ ಸಂಸ್ಕಾರವನ್ನು ಮೈಗೂಡಿಸಿಕೊಳ್ಳುವುದರಲ್ಲಿ ನಿರತರಾದರು. ಅವರ ಭಾಷೆ ಹೆಚ್ಚು ಗ್ರಾಂಥಿಕವಾಗುವುದರಲ್ಲಿ ಮೂಲದ ಬನಿಯನ್ನು ಕಳೆದುಕೊಂಡಿತು. ಇದಕ್ಕೆ ಕನಕದಾಸನು ಹೊರತಲ್ಲ. ಅವನಲ್ಲಿದ್ದ ಪ್ರತಿಭೆ ಭಕ್ತಿ ಸಾಹಿತ್ಯ ಸೃಷ್ಟಿಗೆ ಸಾಧನವಾಯಿತು. ಭಕ್ತಿಗೆ ಶ್ರುತಿಗೊಂಡ ಬದುಕು ವೈಯಕ್ತಿಕ ಮುಕ್ತಿ ಸಾಧಿಸುವಲ್ಲಿಯೇ ಸಾರ್ಥಕತೆ ಕಂಡುಕೊಂಡಿತು.

ಒಟ್ಟಿನಲ್ಲಿ ದಾಸ ಪಂಥದ ಪದ್ಮ ವ್ಯೂಹವನ್ನು ಪ್ರವೇಶಿಸಿದ ಏಕೈಕ ಶೂದ್ರನಾದ ಕನಕದಾಸನು ತನ್ನ ಭಕ್ತಿಯಿಂದ ದಾಸರ ಅನುಗ್ರಹಕ್ಕೆ ಪಾತ್ರನಾದುದೊಂದು ಪವಾಡವೇ ಸರಿ.♦

6. ನಾಮಧಾರಿ ಲಿಂಗಾಯಿತರು: ನೆಲೆ-ಹಿನ್ನೆಲೆ

೧

ನಾಮಧಾರಿ ಲಿಂಗಾಯಿತರು ಎಂಬ ಶಬ್ದ ಕಿವಿಗೆ ಬಿದ್ದೊಡನೆ ವೀರಶೈವರಿಗೆ ಮೈ ಉರಿಯುತ್ತದೆ. ಅನ್ಯರಿಗೆ ಕಿವಿ ನಿಮಿರುತ್ತದೆ. ವಿಷ್ಣು ಭಕ್ತರಿಗೆ ತಬ್ಬಿಬ್ಬಾಗುತ್ತದೆ. ಎಂದೂ ಕಂಡಿರದ, ಕೇಳರಿಯದ, ವೀರಶೈವ ಪರ ಮತ್ತು ವಿರೋಧಿ-ಯಾವ ಗ್ರಂಥಗಳಲ್ಲಿಯೂ ಹೆಸರಿಸದ ಈ ನಾಮಧಾರಿ ಪಂಗಡ ಯಾವುದು ಎಂದು ಸೋಜಿಗವಾಗುತ್ತದೆ. ಪರಮ ಪತಿವ್ರತೆಗೆ ಗಂಡನೊಬ್ಬ ಹೇಗೋ ಹಾಗೆ ವೀರಶೈವ ಭಕ್ತನಿಗೆ ಶಿವನೊಬ್ಬನೇ ದೇವರು. ಏಕ ದೇವತಾ ನಿಷ್ಠನಾದ ಶಿವಭಕ್ತ, ಪತಿವ್ರತಾ ಧರ್ಮದ ವ್ರತಿಯಾಗಿ, ತಾನು ನಂಬಿರುವ ತತ್ವಕ್ಕೆ ವಿರುದ್ಧ ನಾಮಧಾರಿಯಾಗಿ ಶರಣ ಸತಿ, ಲಿಂಗ ಪತಿ ಧರ್ಮಕ್ಕೆ ಭಂಗ ತರುವುದು ಎಂದಾದರೂ ಸಾಧ್ಯವೆ? ಅಂಥ ಒಂದು ಪಂಗಡ ಯಾರ ಕಣ್ಣಿಗೂ ಬೀಳದೆ ಒಂದು ಪಕ್ಷ ಅಸ್ತಿತ್ವದಲ್ಲಿದ್ದರೆ, ಅದರ ಪದ್ಧತಿ ಯಾವುದು? ಅದಕ್ಕೆ ಇತಿಹಾಸವಿದೆಯೊ ಅಥವಾ ಇತ್ತೀಚಿನದೊ? ಅದು ವೀರಶೈವರ ಒಂದು ಒಳಪಂಗಡವೋ ಅಥವಾ ಅವರ ವಿರುದ್ಧ ಸಿಡಿದು ಪ್ರತ್ಯೇಕಗೊಂಡ ಪಂಥವೊ? ಅದರ ಆಚಾರ ವಿಚಾರಗಳು ಯಾವುವು? ನಾಮಧಾರಿ ಲಿಂಗಾಯಿತರಿಗೆ ವೀರಶೈವ ವಿಧಿಯಂತೆ ದೀಕ್ಷೆಯಾಗುವುದೊ ಇಲ್ಲವೊ? ಅದರ ಮೂಲ ಪುರುಷ ಯಾರು ಮುಂತಾದ ಪ್ರಶ್ನೆಗಳ ಸುರಿಮಳೆಯಾಗುತ್ತದೆ. ಆದರೆ ಸಹನೆಯಿಂದ ಪರಿಶೀಲಿಸಿದರೆ ಇಂಥ ಒಂದು ಪದ್ಧತಿ ವೀರಶೈವ ಧರ್ಮದ ಆಚರಣೆಯಲ್ಲಿಯೇ ಬಹು ಹಿಂದಿನಿಂದಲೂ ಮುಂದುವರಿದಿರುವುದು ಕಂಡುಬರುತ್ತದೆ. ವೀರಶೈವ ವಿದ್ವಾಂಸರು ಗೊತ್ತಿದ್ದೂ ಗೊತ್ತಿಲ್ಲದಂತೆ (ಕಂಡೂ ಕಾಣದಂತೆ) ಇರುವುದರಿಂದಲೊ, ಅನ್ಯ ಮತೀಯ ವಿದ್ವಾಂಸರಿಗೆ ಅರ್ಥವಾಗದೆಯೊ, ಸಮಾಜ ಶಾಸ್ತ್ರಜ್ಞರ ಅಸಡ್ಡೆಯಿಂದಲೊ ಅಥವಾ ತಾಂತ್ರಿಕ ಅಂಶಗಳ ತೊಡಕಿನಿಂದಲೊ ನಾಮಧಾರಿ ಲಿಂಗಾಯಿತರ ಆಚರಣೆಯನ್ನು ಯಾರೂ ಅಧ್ಯಯನ ಮಾಡಿರುವುದಿಲ್ಲ. ಆದರೆ ನಾಮಧಾರಿ ಲಿಂಗಾಯಿತರ ಅಧ್ಯಯನ ಕರ್ನಾಟಕ ಸಂಸ್ಕೃತಿ ಅಧ್ಯಯನಕ್ಕೆ ಒಂದು ವಿಶೇಷ ಕಾಣಿಕೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ವೀರಶೈವ ಧರ್ಮಕ್ಕೆ ಎಷ್ಟು ಇತಿಹಾಸವಿದೆಯೋ ಅಷ್ಟೇ ಇತಿಹಾಸ ನಾಮಧಾರಿ ಲಿಂಗಾಯಿತರ ಆಚರಣೆಗೂ ಇದೆ. ವಚನಗಳಲ್ಲಿ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಅನ್ಯ ಮತ ಖಂಡನೆ ಮತ್ತು ಶಿವಭಕ್ತ ಅನಾಚಾರಿಗಳ ನಿಂದೆಯಲ್ಲಿ ನಾಮಧಾರಿ ಲಿಂಗಾಯಿತರ ಮೂಲವನ್ನು ಅರಸಬಹುದಾಗಿದೆ. ದೀಕ್ಷೆ ಹೊಂದಿ ವೀರಶೈವರಾದ ಅನಂತರವೂ ಬಹು ದೇವತೋಪಾಸನೆಯನ್ನು ಮುಂದುವರಿಸಿದವರನ್ನು ಡಾಂಭಿಕರು, ಅನಾಚಾರಿಗಳು ಎಂದು ಕರೆಯುತ್ತಾರೆ. ಅನಾಚಾರಿಗಳನ್ನು ಬಸವಣ್ಣನವರು ಹಾದರಿಗರು ಎನ್ನುತ್ತಾರೆ. ಶಿವ ಭಕ್ತರಾದ ವಿಷ್ಣುಪೂಜೆಯ ವೀರಶೈವರಿಗೆ ಅನಾಚಾರಿಗಳು ಎಂಬ ಮಾತು ಒಪ್ಪುತ್ತದೆ. ಶಿವ ಭಕ್ತರಾಗಿದ್ದು ವಿಷ್ಣು ಪೂಜೆಯನ್ನು ಮಾಡುವವರೇ ನಾಮಧಾರಿ ಲಿಂಗಾಯಿತರು. ಅನಾಚಾರಿಗಳ ಶಿವನಿಷ್ಠೆ ತೀವ್ರವಾಗಿದ್ದರೆ 'ಗುಪ್ತಭಕ್ತರು' ಎಂದು ಕರೆಯುತ್ತಾರೆ. ಅನ್ಯರಾಗಲಿ ಅಥವಾ

ವೀರಶೈವರೇ ಆಗಲಿ ಅಂಥ ಶಿವಭಕ್ತ ವಿಷ್ಣುಪೂಜಕರನ್ನು ನಾಮಧಾರಿಗಳು ಎಂದು ಕರೆಯುವ ರೂಢಿಯಲ್ಲಿಲ್ಲ. ವಿಷ್ಣು ಪೂಜಕರಾದರೂ ಶಿವಭಕ್ತರೆಂದೇ ಕರೆದುಕೊಳ್ಳುವುದಕ್ಕೆ ಅವರಿಗೆ ಹೆಮ್ಮೆ. ಅಲ್ಲದೆ ನಾಮಧಾರಿ ಲಿಂಗಾಯಿತರು ಎಂದು ತಮ್ಮನ್ನು ಕರೆದುಕೊಳ್ಳುವುದಕ್ಕೆ ತಾಂತ್ರಿಕ ಅಂಶಗಳ ತೊಡಕು ಬರುತ್ತದೆ. ನಾಮಧಾರಿ ಲಿಂಗಾಯಿತರು ವೀರಶೈವ ಧಾರ್ಮಿಕ ವಿಧಿಗೆ ಅನುಗುಣವಾಗಿ ದೀಕ್ಷಾಬದ್ಧರಾಗಿದ್ದು, ದೇಹದಮೇಲೆ ಲಿಂಗ ಧರಿಸಿ ಭಕ್ತ ದೇವಕದೇಹಿಗಳಾಗಿರುತ್ತಾರೆಯೆ ಹೊರತು ವಿಷ್ಣುಭಕ್ತಿ ಸಂಪ್ರದಾಯದ ಜನಿವಾರವನ್ನು ಧರಿಸಿರುವುದಿಲ್ಲ. ನಾಮಧಾರಿ ಲಿಂಗಾಯಿತರ ದೀಕ್ಷಾ ಪದ್ಧತಿ ವೀರಶೈವರದ್ದು, ಧಾರ್ಮಿಕ ಆಚರಣೆಯ ಪದ್ಧತಿ ಮಾತ್ರ ವಿಷ್ಣು ಪಂಥದ್ದು. ಅಂತ್ಯಕ್ರಿಯೆಯೂ ವೀರಶೈವ ವಿಧಿಗನುಗುಣವಾಗಿರುತ್ತದೆ. ನಾಮಕರಣ, ವಿವಾಹ, ಸೂತಕ ಮುಂತಾದವು ವಿಷ್ಣು ಪದ್ಧತಿಯವು. ನಾಮಧಾರಿ ಲಿಂಗಾಯಿತರು ನಾಮ ಧರಿಸಿದರೂ ಅವರಿಗೆ ವಿಭೂತಿ ವರ್ಜ್ಯವಲ್ಲ. ವಿಷ್ಣು ಮತ್ತು ಶಿವ ಪದ್ಧತಿಗಳು ನಾಮಧಾರಿ ಲಿಂಗಾಯಿತರ ಆಚರಣೆಯಲ್ಲಿ ಬೆರೆತಿದ್ದರೂ ವಿಷ್ಣು ಮತ್ತು ಶಿವ ಪಂಥಗಳ ಸಾಮರಸ್ಯ ಸಾಧಕರಲ್ಲ. ನಾಮಧಾರಿ ಲಿಂಗಾಯಿತರ ಆಚರಣೆಗಳನ್ನು ವೀರಶೈವ ಧಾರ್ಮಿಕ ಮತ್ತು ತಾತ್ತ್ವಿಕ ದೃಷ್ಟಿಯಿಂದ ಸಮರ್ಥಿಸಿಕೊಳ್ಳುವುದು ಕಷ್ಟವಾದರೂ ಇಂಥ ಪದ್ಧತಿಯನ್ನು ಅನುಸರಿಸುವ ಶಿವಭಕ್ತ ವಿಷ್ಣು ಪೂಜೆಯ-ನಾಮಧಾರಿ ಲಿಂಗಾಯಿತರ ಸಂಖ್ಯೆ ಕರ್ನಾಟಕಾದ್ಯಂತ ಗಣನೀಯವಾಗಿರುವುದನ್ನಂತೂ ಯಾರೂ ಅಲ್ಲಗಳೆಯುವಂತಿಲ್ಲ. ಇಂಥ ಶಿವಭಕ್ತ ವಿಷ್ಣು ಪೂಜಕರನ್ನು ನಾಮಧಾರಿ ಲಿಂಗಾಯಿತರೆಂದು ಗುರುತಿಸುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ. ಅಂಥ ಪಂಗಡದ ಅಧ್ಯಯನ ಅಗತ್ಯ ಎಷ್ಟಿದೆ ಎಂಬುದನ್ನು ಹೇಳಬರುವಂತಿಲ್ಲ. ನಾಮಧಾರಿ ಲಿಂಗಾಯಿತರ ಅಧ್ಯಯನದಿಂದ ಅನೇಕ ಹೊಸ ಹೊಸ ಅಂಶಗಳು ಹೊರಬೀಳುತ್ತವೆ. ಕರ್ನಾಟಕ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅದು ಒಂದು ವಿಶೇಷ ಸಾಧನೆಯಾಗಿ ಕಳೆದುಹೋಗಿರುವ ಕೊಂಡಿಯೊಂದು ದೊರಕಿದಂತೆ ಆಗುತ್ತದೆ.

ಒಕ್ಕಲಿಗರಲ್ಲಿ ನಾಮಧಾರಿ ಲಿಂಗಾಯಿತರು ಎಂಬ ಪಂಗಡವೊಂದಿದೆ. ಅವರ ಪೂರ್ವೇತಿಹಾಸ ಅಸ್ಪಷ್ಟವಾಗಿದೆ. ಅವರು ಇತರೆ ಒಕ್ಕಲಿಗರಿಗಿಂತ ಭಿನ್ನವಾದ ಆಚಾರವನ್ನು ಪಾಲಿಸುತ್ತಾರೆ. ಬಯಲುನಾಡಿನ ನಾಮಧಾರಿ ಒಕ್ಕಲಿಗರು ಮುಖ್ಯವಾಗಿ ಮಾಂಸ ತಿನ್ನುವುದಿಲ್ಲ. ಆದರೆ ಮಲೆನಾಡಿನ ಒಕ್ಕಲಿಗರಿಗೆ ಮಾಂಸ ನಿಷಿದ್ಧವಲ್ಲ. ನಾಮಧಾರಿ ಎಂಬುದು ವಿಷ್ಣುಪಂಥವನ್ನು ಸೂಚಿಸುತ್ತಾದರೂ ಅವರಲ್ಲಿ ಶಿವಪಂಥದವರೂ ಇದ್ದಾರೆ. ನಾಮಧಾರಿ ಒಕ್ಕಲಿಗರಲ್ಲಿಯೇ ವಿಷ್ಣುಭಕ್ತ ಮತ್ತು ಶಿವಭಕ್ತರಿದ್ದಾರೆ. ಇವರಿಬ್ಬರಲ್ಲಿ ಕೊಳುಕೊಡಿಗೆ ಇದ್ದು ರಕ್ತ ಸಂಬಂಧಕ್ಕೆ ಅವಕಾಶವಿದೆ. ಅವರಲ್ಲಿ ಯಾವ ಭೇದವೂ ಇರುವುದಿಲ್ಲ. ಇಬ್ಬರೂ ಸಂಪೂರ್ಣವಾಗಿ ಸಸ್ಯಾಹಾರಿಗಳು. ಇಂಥ ಸಸ್ಯಾಹಾರಿ ಒಕ್ಕಲಿಗರಲ್ಲಿ ಮತ್ತೊಂದು ಚೋಳೂರು ಒಕ್ಕಲಿಗರು ಎಂಬ ಪಂಗಡವಿದೆ. ಅವರು ಸಂಪೂರ್ಣವಾಗಿ ಶಿವಭಕ್ತರಾದರೂ ಅವರಲ್ಲೂ ವಿಷ್ಣು ಭಕ್ತರಿದ್ದಾರೆ. ಚೋಳರು ಎಂದರೆ ಚೋಳರ ಕಾಲದವರು ಎನ್ನುತ್ತಾರೆ. ಚೋಳರಂತೆ ಇವರೂ ಶಿವಭಕ್ತರು. ಇವರು ತಮ್ಮ ಮೂಲವನ್ನು ಚೋಳರ ಇತಿಹಾಸದಲ್ಲಿ ಗುರುತಿಸಿಕೊಳ್ಳುತ್ತಾರೆ.

ನಾಮಧಾರಿ ಒಕ್ಕಲಿಗರಿಗೂ ಚೋಳ ಒಕ್ಕಲಿಗರಿಗೂ ಆಚರಣೆಯಲ್ಲಿ, ಅನೇಕ ಅಂಶಗಳಲ್ಲಿ ಸಾಮ್ಯವಿದೆ. ಎರಡೂ ಬಣಗಳಲ್ಲಿಯೂ ವಿಷ್ಣು ಮತ್ತು ಶಿವ ಭಕ್ತರಿದ್ದಾರೆ. ವಿಷ್ಣು ಭಕ್ತರಲ್ಲಿ ಜನಿವಾರ ಧರಿಸುವುದಾಗಲಿ, ಶಿವಭಕ್ತರಲ್ಲಿ ಲಿಂಗ ಧರಿಸುವ ಪದ್ಧತಿಯಾಗಲಿ ಇರುವುದಿಲ್ಲ. ವಿಷ್ಣು ಭಕ್ತರು ನಾಮಧರಿಸುತ್ತಾರೆ. ಶಿವಭಕ್ತರು ವಿಭೂತಿ ಧರಿಸುತ್ತಾರೆ. ಇವರಲ್ಲಿ ಉಪನಯನ ಅಥವಾ ದೀಕ್ಷೆಯ ಧಾರ್ಮಿಕ ವಿಧಿ ಇರುವುದಿಲ್ಲ. ಇವರಿಗೆ ಯಾವ ಗುರುವಾಗಲಿ, ಮಠವಾಗಲಿ, ಒಂದು ಕುಲ ದೈವವಾಗಲಿ ಇಲ್ಲ. ಆಯಾ ಪ್ರಾಂತ್ಯದ ಸ್ಥಳೀಯ ಧಾರ್ಮಿಕ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಇವರು ಯಾವುದೋ ಕಾಲದಲ್ಲಿ ಜೈನಧರ್ಮದ ಪ್ರಾಬಲ್ಯವಿರುವಾಗ ಜೈನ ಧರ್ಮಕ್ಕೆ ಮತಾಂತರಿಯಾದವರು. ರಾಮಾನುಜರು ಕರ್ನಾಟಕಕ್ಕೆ ಬಂದು ಜೈನರನ್ನು ವೈಷ್ಣವರನ್ನಾಗಿ ಮತ ಪರಿವರ್ತನೆ ಮಾಡಿದಾಗ, ಈ ಜೈನ ಒಕ್ಕಲಿಗರನ್ನು ವೈಷ್ಣವರನ್ನಾಗಿಸಿದ ಅನಂತರ ನಾಮಧಾರಿ ಒಕ್ಕಲಿಗರು ಎಂದು ಹೆಸರು ಬಂದಿತು. ಅದೂ ಅಲ್ಲದೆ ವ್ಯವಸಾಯವನ್ನೇ ಮುಖ್ಯ ಕಸುಬಾಗಿರುವ ಜೈನ ಒಕ್ಕಲಿಗರಿಗೆ, ಉಳುವಾಗ ಹಿಂಸೆಗೆ ಅವಕಾಶವಿರುವುದರಿಂದ ಜೈನರಲ್ಲಿ ಅವರ ಬಗ್ಗೆ ಅಂಥ ಗೌರವ ಇರುವುದಿಲ್ಲ. ಜೈನರಲ್ಲಿಯೇ ಕೆಳವರ್ಗವಾಗಿ ಉಳಿಯುವ ಬದಲು ವೈಷ್ಣವರಾಗಿ ಪ್ರತ್ಯೇಕವಾದ ನಾಮಧಾರಿ ಒಕ್ಕಲಿಗ ಬಣವಾದರು. ನಾಮಧಾರಿ ಒಕ್ಕಲಿಗರಾದ ಅನಂತರವೂ ಕೆಲವು ಜೈನ ಸಂಪ್ರದಾಯಗಳು ಅವರಲ್ಲಿ ಮುಂದುವರಿದಿವೆ. ಜೈನೆಡೆ ಮುಂತಾದ ಆಚರಣೆಗಳು ನಾಮಧಾರಿ ಒಕ್ಕಲಿಗರಲ್ಲಿ ಜೈನ ಮತದ ಅವಶೇಷಗಳಾಗಿ ಉಳಿದುಕೊಂಡು ಬಂದಿರುವ ವಿಷಯ ಕುವೆಂಪು ಅವರ ನೆನಪಿನ ದೋಣಿ ಮತ್ತು ಅವರ ಇತರ ಕಾದಂಬರಿಗಳಲ್ಲಿ ವ್ಯಕ್ತವಾಗಿದೆ. ಕೇರಳದ ವೈನಾಡಿನ ಒಕ್ಕಲಿಗರು ನಾಮಧಾರಿ ಒಕ್ಕಲಿಗರು ಎಂಬುದಕ್ಕೆ ಬದಲಾಗಿ ತಮ್ಮನ್ನು ತಾವು 'ವೈಷ್ಣವ ಗೌಡರು' ಎಂದು ಕರೆದುಕೊಳ್ಳುತ್ತಾರೆ. ವೈಷ್ಣವ ಗೌಡರಿಗೂ ಮತ್ತು ಜೈನ ಗೌಡರಿಗೂ ಸಂಬಂಧವಿದೆ. ಅವರಿಬ್ಬರ ನಡುವೆ ಹೆಣ್ಣು ಕೊಟ್ಟು ತರುವ ರೂಢಿಯಿದೆ. ಹೆಗ್ಗಡದೇವನ ಕೋಟೆಯ ನಾಮಧಾರಿ ಒಕ್ಕಲಿಗರು ಶಿವಭಕ್ತರು. ವೈನಾಡಿನ ವೈಷ್ಣವ ಗೌಡರು ಮತ್ತು ಹೆಗ್ಗಡದೇವನ ಕೋಟೆಯ ಶಿವಭಕ್ತರಾದ ನಾಮಧಾರಿ ಗೌಡರ ನಡುವೆ ಹೆಣ್ಣು ಕೊಟ್ಟು ತರುವ ಸಂಪ್ರದಾಯವಿದೆ. ಒಟ್ಟಿನಲ್ಲಿ ವಿಷ್ಣು, ಶಿವ ಮತ್ತು ಜೈನ ಒಕ್ಕಲಿಗರು ಸಂಪೂರ್ಣವಾಗಿ ಸಸ್ಯಾಹಾರಿಗಳಾಗಿದ್ದು ಪರಸ್ಪರ ಹೆಣ್ಣು ಕೊಟ್ಟು ತರುವ ಸಂಪ್ರದಾಯವಿರುತ್ತದೆ. ಆಯಾ ಸ್ಥಳೀಯ ಒತ್ತಡಕ್ಕೆ ಸಿಕ್ಕಿ ವಿವಿಧ ಮತಗಳ ತತ್ತ್ವಗಳನ್ನು ಅನುಸರಿಸಿದ್ದಾರೆ.

ಕೇವಲ ಒಕ್ಕಲಿಗರಲ್ಲಿಯೇ ಅಲ್ಲದೆ ಇಡೀ ಕೆಳವರ್ಗದವರಲ್ಲಿಯೇ ಇಂಥ ಅವಸ್ಥಾಂತರದ ಧಾರ್ಮಿಕ ಸ್ಥಿತಿಗತಿಗಳನ್ನು ಗುರುತಿಸಬಹುದಾಗಿದೆ. ಜೈನ ಧರ್ಮದ ಪ್ರಾಬಲ್ಯವನ್ನು ಕುಗ್ಗಿಸಿದ ವಿಷ್ಣು ಮತ್ತು ಶಿವ ಪಂಥಗಳು ಭಾರತದ ಜನಾಂಗವನ್ನೇ ವಿಷ್ಣು ಮತ್ತು ಶಿವ ಪಂಥದವರನ್ನಾಗಿ ಇಬ್ಭಾಗ ಮಾಡಿತು. ಉಚ್ಚವರ್ಗದಿಂದ ಕೆಳವರ್ಗದತನಕ ಎಲ್ಲಾ ಹಿಂದೂ ಪಂಥೀಯರಲ್ಲೂ ವಿಷ್ಣು ಮತ್ತು ಶಿವಭಕ್ತರು ಇರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ವಿಷ್ಣು ಭಕ್ತರನ್ನು ವೈಷ್ಣವರು, ನಾಮಧಾರಿಗಳು, ಶನಿವಾರದವರು, ದೇಶಾಭಾಗಸ್ಥರು- ಮುಂತಾಗಿ ಕರೆಯುತ್ತಾರೆ.

ಶೈವಭಕ್ತರನ್ನು ಶೈವರು, ಗಂಧದವರು, ಸೋಮವಾರದವರು, ಮುಳ್ಳುಜನ ಎನ್ನುತ್ತಾರೆ. ವಿಷ್ಣು ಪಂಥದ ಉಚ್ಚವರ್ಗದ ಧಾರ್ಮಿಕ ವಿಧಿಯ ಮಾರ್ಗದರ್ಶಕರನ್ನು ಗುರುಗಳು, ಆಚಾರ್ಯರು ಎಂದು ಕರೆದರೆ, ಅದೇ ಪಂಥದ ಕೆಳವರ್ಗದ ವಿಷ್ಣು ಪಂಥಗಳ ಧಾರ್ಮಿಕ ವಿಧಿಯ ಮಾರ್ಗದರ್ಶಕ ದಾಸಯ್ಯನಾಗುತ್ತಾನೆ. ಹಾಗೆಯೇ ಶೈವರಿಗೆ ಉಚ್ಚವರ್ಗಕ್ಕೆ ಗುರು, ಆಚಾರ್ಯ ಇದ್ದರೆ, ಕೆಳವರ್ಗಕ್ಕೆ ಗೊರವಯ್ಯ ಇರುತ್ತಾನೆ. ಒಂದೇ ಪಂಥದ ಕೆಳವರ್ಗ ಮತ್ತು ಉಚ್ಚ ವರ್ಗದ ಆಚಾರ ವಿಚಾರಗಳು ಭಿನ್ನವಾಗಿವೆ. ಉಚ್ಚವರ್ಗದವರು ತಮ್ಮ ಧಾರ್ಮಿಕ ವಿಧಿಯ ಆಚರಣೆಗೆ ಸಿದ್ಧಾಂತಗಳನ್ನು ರೂಪಿಸಿಕೊಂಡು ಸಂಸ್ಕೃತ ಭಾಷೆಯನ್ನು ಉಪಯೋಗಿಸುತ್ತ ವೇದ ಪ್ರಮಾಣವನ್ನು ಆಧಾರವಾಗಿ ಸ್ವೀಕರಿಸಿದರು. ಕೆಳವರ್ಗದವರು ತಮ್ಮ ಧಾರ್ಮಿಕ ವಿಧಿಯ ಆಚರಣೆಗೆ ತಲೆತಲಾಂತರದಿಂದ ಬಂದ ಹಿರಿಯರು ಅನುಸರಿಸಿದ ಆಚಾರಗಳೇ ಆಧಾರವಾಗಿ ಸಂಸ್ಕೃತಕ್ಕೆ ಬದಲಾಗಿ, ಅವರವರ ಮಾತೃಭಾಷೆಯೇ ಧಾರ್ಮಿಕ ವ್ಯವಹಾರದ ಭಾಷೆಯೂ ಆಯಿತು. ಉಚ್ಚವರ್ಗದವರು ತಾವು ಶ್ರೇಷ್ಠ ಮತ್ತು ಸುಸಂಸ್ಕೃತರು ಎಂದುಕೊಂಡರು. ಅದೇ ಪಂಥದ ಕೆಳವರ್ಗದವರು ಅವರಿಗಿಂತ ತಾವು ಕೀಳೆಂದು ಒಪ್ಪಿಕೊಂಡು, ಅವರ ಒತ್ತೆಯಾಳುಗಳಾಗಿ ಸೇವಕರಾದರು. ವರ್ಣ ವ್ಯವಸ್ಥೆಯ ವಿರುದ್ಧ ಪ್ರಬಲವಾದ ವಿಷ್ಣು ಮತ್ತು ಶೈವ ಭಕ್ತಿಪಂಥಗಳಲ್ಲಿಯೂ ಕ್ರಮೇಣ ವರ್ಣ ವ್ಯವಸ್ಥೆಯೊಂದು ಅಸ್ತಿತ್ವಕ್ಕೆ ಬಂದು, ಜಾತಿಯಲ್ಲಿ ವರ್ಣ ವ್ಯವಸ್ಥೆ, ವರ್ಣ ವ್ಯವಸ್ಥೆಯಲ್ಲಿ ಜಾತಿ ರಚನೆಯಾಗಿ, ಭಾರತದಲ್ಲಿ ಜಾತಿ ಪದ್ಧತಿಯ ಗೋಜು ಸೃಷ್ಟಿಯಾಗಿ ಎಂದೆಂದೂ ಬಿಡಿಸಲಾಗದ ಬಂತೆಯಾಯಿತು. ವೇದ ಪೂರ್ವದ ಜನಪ್ರಿಯ ವಿಷ್ಣು ಮತ್ತು ಶಿವ ಪಂಥಗಳನ್ನು ವೈದಿಕ ಧರ್ಮ ಪುರಾಣ ಕಾಲದಲ್ಲಿ ಧರ್ಮ ಪ್ರಚಾರಕ್ಕೆ ಯಶಸ್ವಿ ಮಾಧ್ಯಮವನ್ನಾಗಿ ಬಳಸಿಕೊಂಡು, ವೈದಿಕ ತತ್ತ್ವಗಳನ್ನು ಈ ಎರಡೂ ಪಂಥಗಳಲ್ಲಿ ಅರಗಿಸಿ, ಭಕ್ತಿ ಪಂಥಗಳನ್ನು ವೈದಿಕ ಪ್ರಧಾನ ಪಂಥಗಳನ್ನಾಗಿಸುವಲ್ಲಿ ಗೆಲವನ್ನು ಸಾಧಿಸಿದುವು. ಜೈನರ ಪ್ರಾಬಲ್ಯವನ್ನು ಕುಗ್ಗಿಸುವಲ್ಲಿ ಸಂಘಟಿತರಾದ ವಿಷ್ಣು ಮತ್ತು ಶಿವ ಪಂಥಗಳೇ ಕ್ರಮೇಣ ಪರಸ್ಪರವಾಗಿ ಮುಷ್ಟಿ ಮತ್ತು ಮಿದುಳನ್ನು ಬಳಸಿ ಮೇಲ್ಮೆಗಾಗಿ ಕಿತ್ತಾಡಿರುವುದು ಚಾರಿತ್ರಿಕ ಸತ್ಯವಾಗಿದೆ. ಕಾಲ, ಪರಿಸರ ಮತ್ತು ರಾಜಕೀಯ ಒತ್ತಡಕ್ಕನುಗುಣವಾಗಿ ಮತಾಂತರವಾಗಿದೆ. ರಾಜಕೀಯ ಮತ್ತು ಧರ್ಮ ಸಾಮಾನ್ಯ ಜನರ ಬದುಕಿನ ಮೇಲೆ ಪ್ರಭಾವ ಬೀರಿ, ಅವರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿರುವುದೇ ಅಲ್ಲದೆ ಅವರ ಮೂಲ ಸಂಸ್ಕೃತಿಯನ್ನು ತೀವ್ರವಾದ ಆಘಾತಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ಕೆಳವರ್ಗದ ಆಚರಣೆಗಳನ್ನು ಕ್ಷುಲ್ಲಕ ಎಂದು ಕರೆದ ಉಚ್ಚವರ್ಗದ ಆಚರಣೆಗಳೇ ನಿಜವಾದ ಸಂಸ್ಕೃತಿ ಎಂದು, ಅದರ ಅನುಕರಣೆಯಲ್ಲಿಯೇ ಕೆಳವರ್ಗಕ್ಕೆ ಮುಕ್ತಿ ಎಂದು ಸಾರಿ, ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಕಾರಣವಾಯಿತು. ಆದರೆ ಕೆಳವರ್ಗದ ಸಂಸ್ಕೃತಿಯ ಅನೇಕ ಅಂಶಗಳನ್ನು ಅರಗಿಸಿಕೊಂಡ ಉಚ್ಚ ವರ್ಗ, ಕೆಳವರ್ಗದ ಸಂಸ್ಕೃತಿಯ ಅವಶೇಷದ ನಾಶದಿಂದ, ಅವುಗಳಿಂದ ಕದ್ದ ಅಂಶಗಳನ್ನೆ ತಮ್ಮ ಮುಕ್ತ ಚಿಂತನೆಯ ಮೂಲ ಅಂಶಗಳೆಂದು ಹಕ್ಕನ್ನು ಚಲಾಯಿಸಿ ಕೊಂಡುದು ಒಂದು ವಿಪರ್ಯಾಸವಾಗಿ, ಸಂಸ್ಕೃತೀಕರಣ, ಬ್ರಾಹ್ಮಣೀಕರಣ ಮತ್ತು ಪಾಶ್ಚಾತ್ಯೀಕರಣ ನಾಣ್ಯಗಳು ಚಲಾವಣೆಗೆ ಬಂದು ಶೂದ್ರೀಕರಣ ನಾಣ್ಯ

ಸವಕಲಾಗಿ ಮೌಲ್ಯ ವಿಚ್ಛೇದನಕ್ಕೆ ಒಳಗೊಂಡಿತು. ಬುಡಕಟ್ಟಿನ ಅನೇಕ ಉತ್ತಮ ಅಂಶಗಳು ಸುಧಾರಕ ಮತ್ತು ಉಚ್ಚವರ್ಗದ ಸಂಸ್ಕೃತಿಯಲ್ಲಿ ಸೇರಿದರೂ, ಅವುಗಳ ಮೂಲಕ್ಕೆ ಋಣಿಯಾಗಿರುವುದು ಉಚ್ಚ ವರ್ಗದ ಸಂಸ್ಕೃತಿಯಲ್ಲಿ ಬೆಳೆದು ಬರಲಿಲ್ಲ. ಕೆಳವರ್ಗದ ಸಂಸ್ಕೃತಿಯ ಮುದ್ರೆ ಉಚ್ಚ ಸಂಸ್ಕೃತಿಯ ಮೇಲೆ ಬಿತ್ತೆಂದು ಒಪ್ಪಿಕೊಳ್ಳುವುದು ಧಾರ್ಮಿಕ ಅನು ಶ್ರೇಣಿಯ ಸ್ಥಾನಮಾನದ ಸವಲತ್ತನ್ನು ಅನುಭವಿಸುವ ಉಚ್ಚ ವರ್ಗದ ಜಾಯಮಾನಕ್ಕೆ ಒಗ್ಗಿ ಬರಲಿಲ್ಲ. ಇದರಿಂದ ಭಾರತದಲ್ಲಿ ಊರ್ಧ್ವಮುಖ ಸಾಮಾಜಿಕ ಬದಲಾವಣೆಯ ಬಾಗಿಲನ್ನು ಸದಾ ಸ್ಥಾಯಿಯಾಗಿ ಮುಚ್ಚಿ, ಅಧೋಮುಖ ಸಾಮಾಜಿಕ ಬದಲಾವಣೆಯ ಬಾಗಿಲನ್ನು ತೆರೆಯಿತು. ಅದರಿಂದಲೇ ವೇದ ಕಾಲದಲ್ಲಿ ಬ್ರಾಹ್ಮಣರಾದ ಶೂದ್ರರು ಸರಿಯಾದ ಸ್ಥಾನಮಾನ ಸಿಗದೆ, ಮತ್ತೆ ಸುಧಾರಿತ ಬೌದ್ಧ, ಜೈನ, ಶೈವ ಮತ್ತು ವೀರಶೈವ ಮತ್ತಿತರ ಮತಗಳಿಗೆ ಪರಿವರ್ತಿತರಾಗಿ, ಸುಧಾರಿತ ಮತಗಳಲ್ಲಿ ವರ್ಣ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತಂದು ಅವುಗಳಲ್ಲಿ ತಾವು ಉಚ್ಚವರ್ಗದವರಾಗಿ, ವೈದಿಕ ವರ್ಗಕ್ಕಿಂತ ಕೆಳಮಟ್ಟದ, ಶೂದ್ರವರ್ಗಕ್ಕಿಂತ ಹೆಚ್ಚಿನ ಒಂದು ಮಧ್ಯವರ್ತಿ ವರ್ಗ ರಚನೆಗೆ ಅವಕಾಶವಾಯಿತು. ಈ ಮಧ್ಯವರ್ತಿ ವರ್ಗ, ಜೈನರಲ್ಲಿ ಜೈನಬ್ರಾಹ್ಮಣರಾಗಿ, ಶೈವರಲ್ಲಿ ಶೈವ ಬ್ರಾಹ್ಮಣರಾಗಿ, ವೀರಶೈವರಲ್ಲಿ ವೀರಶೈವ ಬ್ರಾಹ್ಮಣರಾಗಿ (ಜಂಗಮರು)-ಕರ್ನಾಟಕದಲ್ಲಿ ಸುಧಾರಿತ ವೈದಿಕ ಮತ್ತು ಅವೈದಿಕ ಧಾರ್ಮಿಕ ವಿಧಿಗಳ ಸೂತ್ರಧಾರರಾಗಿ ಧಾರ್ಮಿಕ ತತ್ತ್ವಗಳನ್ನು ನಿಯಂತ್ರಿಸಿದರು. ಧರ್ಮ ಧರ್ಮಕ್ಕೂ ತತ್ತ್ವ ಭೇದವಿದ್ದರೂ, ಮತಾಂತರಿಯಾದ ಈ ಬ್ರಾಹ್ಮಣ ವರ್ಗದ ಸುಪ್ತಪ್ರಜ್ಞೆ ಒಂದೇ ಆಗಿ, ಕೆಳವರ್ಗಗಳನ್ನು ಶೋಷಿಸುವುದರಲ್ಲಿ ತಮಗೆ ಅರಿವಿಲ್ಲದೇ ಅಪ್ರಜ್ಞಾಪೂರ್ವಕರಾಗಿ ಸಂಘಟಿತವಾಗಿರುವುದು, ಉಚ್ಚವರ್ಗದ ಧಾರ್ಮಿಕ ಗ್ರಂಥಗಳ ಅಧ್ಯಯನದಿಂದ ತಿಳಿದುಬರುತ್ತದೆ. ಹಾಗೆಯೇ ಜೈನ, ವೈಷ್ಣವ ಮತ್ತು ವೀರಶೈವ ಮತಕ್ಕೆ ಕೆಳವರ್ಗದಿಂದ ಮತಾಂತರಗೊಂಡವರ ಆಚಾರ ವಿಚಾರದಲ್ಲಿ ತೀವ್ರ ವಿಭಿನ್ನ ನಡವಳಿಕೆಗಳಿದ್ದು, ತಮ್ಮ ತಮ್ಮ ಮತಾಂತರ ಪೂರ್ವದ ಆಚರಣೆಗಳೇ, ಮತಾಂತರವಾದ ಮೇಲೂ ಮುಂದುವರಿದಿರುವುದನ್ನು ಗುರುತಿಸಬಹುದಾಗಿದೆ. ಇದರಿಂದ ಕೆಳವರ್ಗದವರಲ್ಲಿ ಅವರವರ ಮತಾಂತರದ ಪೂರ್ವ ಸಂಸ್ಕಾರಕ್ಕನುಗುಣವಾಗಿ ಅನೇಕ ಒಳ ಪಂಗಡಗಳು ಸೃಷ್ಟಿಯಾದುವು. ಉಚ್ಚ ವರ್ಗದವರಾಗಲಿ, ಕೆಳ ವರ್ಗದವರಾಗಲಿ 'ಮದುವೆ'ಯ ಸಂದರ್ಭದಲ್ಲಿ ಎರಡೂ ಪಂಗಡಗಳ ಪೂರ್ವ ಸಂಸ್ಕಾರಗಳನ್ನು ಗುರುತಿಸುವುದಕ್ಕೆ ಹೆಚ್ಚು ಸಹಕಾರಿಯಾಗಿರುತ್ತದೆ. ಯಾವುದೇ ಮತದಲ್ಲಿಯಾಗಲಿ ಮದುವೆ ಕಾಲದಲ್ಲಿ, ಮದುವೆಯ ಪೂರ್ವ ಅಥವಾ ಅನಂತರ ಮನೆದೇವರನ್ನು ಪೂಜಿಸುವ ಪದ್ಧತಿ ಸಾಮಾನ್ಯವಾಗಿದೆ. ಉಚ್ಚ ವರ್ಗದವರಾದ ಬ್ರಾಹ್ಮಣರಲ್ಲಿಯೂ ಹಲಸು, ಆಲ, ಅತ್ತಿ ಮುಂತಾದ ಕೊನೆಯನ್ನು ತಂದು ಸೀರೆ ಕುಪ್ಪಸ ತೊಡಸಿ, ಒಡವೆ ಹಾಕಿ ಅಲಂಕರಿಸಿ ಮನೆ ದೇವರನ್ನು ಮಾಡುವ ಪದ್ಧತಿ ಈಗಲೂ ಇದೆ. ಹಳ್ಳಿಗಳಲ್ಲಿ ಹೊಲೆಯರ ಮನೆಯ ಕೆರ ಹೊಲಿಯುವ ಕರಿಯ ಬಾನಿಯ ನೀರು ಬ್ರಾಹ್ಮಣರ ಮದುವೆಯ ಸಂದರ್ಭದಲ್ಲಿ ಪವಿತ್ರ ಎಂದು ಹೇಳುತ್ತಾರೆ. ಮಾರಿ ಬ್ರಾಹ್ಮಣ ಮನೆಯ ಹೆಣ್ಣುಮಗಳು ಮೋಸದಿಂದ ಹೊಲೆಯರ ಮನೆಯ ಸೊಸೆಯಾದಳು ಎಂಬ ಕತೆ

ಮಾರಿ ಹಬ್ಬದ ಸಂಬಂಧವಾಗಿ ಪ್ರಚಲಿತವಾಗಿದೆ. ಇದರಿಂದ ಪ್ರಾಚೀನ ಕಾಲದಲ್ಲಿ ಶೂದ್ರರಾದ ಬ್ರಾಹ್ಮಣರ ಶೂದ್ರ ಆಚಾರಗಳಿಗೆ ಸಾಕ್ಷಿ ದೊರೆಯುತ್ತದೆ. ಸಂಸ್ಕೃತ ಬರದ ಹಳ್ಳಿಯ ಬ್ರಾಹ್ಮಣರ ಆಚಾರ ವಿಚಾರಗಳು ಹೆಚ್ಚು ಶೂದ್ರೀಕರಣವಾಗಿರುತ್ತವೆ. ಅನೇಕ ಬ್ರಾಹ್ಮಣ ಕುಟುಂಬಗಳು ಇತ್ತ ವೇದ ಉಪನಿಷತ್ತು ಪುರಾಣ ಕಾವ್ಯಗಳ ಅಧ್ಯಯನ ಮಾಡುತ್ತಲೇ, ಅತ್ತ ಅನೇಕ ಶೂದ್ರ ವೃತ್ತಿಗಳಲ್ಲಿ ತೊಡಗಿರುತ್ತಾರೆ. ಹವ್ಯಕರು ಮತ್ತು ಸಂಕೇತಿಗಳು ವ್ಯವಸಾಯದಲ್ಲಿ ಚೆನ್ನಾಗಿ ಪಳಗಿರುವ ಒಕ್ಕಲಿಗ ವೃತ್ತಿಯ ಬ್ರಾಹ್ಮಣರು! ಹಾಗೆಯೇ ಕೆಳವರ್ಗದಿಂದ ಮತಾಂತರಿಯಾದ ಅನೇಕ ವೀರಶೈವರ ಒಳ ಪಂಗಡಗಳ ಆಚರಣೆಯೂ ಮತಾಂತರದ ಪೂರ್ವದ ಆಚರಣೆಗಳೇ ಆಗಿರುತ್ತವೆ. ಅಲ್ಲದೆ ಅವರಿಗೂ ವಿವಾಹ ಕಾಲದಲ್ಲಿ ಮನೆದೇವರನ್ನು ಪೂಜಿಸುವ ಪದ್ಧತಿ ಅತಿ ಮುಖ್ಯವಾದುದು. ನೊಣಬ ಲಿಂಗಾಯಿತರಲ್ಲಿ ನಾಲ್ಕು ದಿವಸದವರು ಮನೆದೇವರನ್ನು ಮೂರು ದಿವಸದವರನ್ನು ಸೇರಿಸದೆ ಬಹಳ ರಹಸ್ಯವಾಗಿ ಆಚರಿಸುತ್ತಾರೆ. ಅದನ್ನು ಕೆಲವು ಕಡೆ 'ತಿಪ್ಪೇಸ್ವಾಮಿ' ಎಂದು, ಮತ್ತೆ ಕೆಲವು ಕಡೆ 'ಹೊಂಗೆಸ್ವಾಮಿ' ಎಂದು ಕರೆಯುವ ರೂಢಿ ಇದೆ. ನಾಲ್ಕು ದಿವಸದವರು ಹೊಂಗೆ ಸೌದೆ ಮತ್ತು ಹೊಂಗೆ ಎಣ್ಣೆಯನ್ನು ಮನೆಯಲ್ಲಿ ಯಾವುದಕ್ಕೂ ಬಳಸುವುದಿಲ್ಲ. ಹೊಂಗೆ ಸೌದೆ ಅವರಿಗೆ ನಿಷಿದ್ಧ. ಹೀಗೆ ಉಚ್ಚವರ್ಗದವರು ಬ್ರಾಹ್ಮಣ ಅಥವಾ ಲಿಂಗಾಯಿತರಾಗಲಿ ಕೆಲವು ವಿಧಿ ನಿಷೇಧಗಳು ಅವರ ಆಚರಣೆಗಳಲ್ಲಿ ಕಂಡುಬಂದು ಅವರ ಸಂಸ್ಕೃತಿಯ ಮೂಲವನ್ನು ತಿಳಿಯುವುದಕ್ಕೆ ಸಹಕಾರಿಯಾಗುತ್ತವೆ. (ಉಚ್ಚವರ್ಗದವರು ಕೆಳವರ್ಗದ ಸಂಸ್ಕೃತಿಯ ಅನುಕರಣ ಮಾಡಿರುವುದಕ್ಕೆ ಕ್ಷೇತ್ರಕಾರ್ಯದಿಂದ ಹೆಚ್ಚು ಮಾಹಿತಿಯನ್ನು ಒದಗಿಸಬಹುದಾಗಿದೆ.) ಬೌದ್ಧ ಮತ್ತು ಜೈನ ಧರ್ಮಗಳು ಇಂಥ ಅವಸ್ಥಾಂತರದಿಂದ ಹೊರತಲ್ಲ.

(ವೇದ ಕಾಲದ ಕರ್ಮ ಪ್ರಧಾನ ಯಜ್ಞ, ಉಪನಿಷತ್ತಿನ ಕಾಲದಲ್ಲಿ ಜ್ಞಾನ ಪ್ರಧಾನವಾದ ಆತ್ಮಯಜ್ಞವಾಯಿತು.) ಬ್ರಹ್ಮ ತತ್ತ್ವ ಚಿಂತನೆ ಪ್ರಧಾನ್ಯತೆ ಪಡೆಯಿತು. ಉಪನಿಷತ್ತಿನ ಬ್ರಹ್ಮ ತತ್ತ್ವ ಅತ್ಯಂತ ಶ್ರೇಷ್ಠವಾಯಿತು. ಯಾವುದನ್ನು ಪಡೆದರೆ ಎಲ್ಲವನ್ನೂ ಪಡೆದಂತಾಗುವುದೋ ಅದೇ ಬ್ರಹ್ಮ. ಅದೇ ಅಂತಿಮ ಸತ್ಯ. ಅದನ್ನು ಪಡೆದಾಗಲೇ ಲೋಕದ ಬದುಕು ಸಾರ್ಥಕವಾಗುವುದು. ಅಂಥ ಬ್ರಹ್ಮತ್ವ ಪ್ರಾಪ್ತಿಗೆ ಹಲವು ಸಾಧನ ಮಾರ್ಗಗಳು ರೂಪಿತವಾದವು. ಎಲ್ಲಾ ಪಂಥಗಳು ಬ್ರಹ್ಮ ತತ್ತ್ವವನ್ನೇ ಗುರಿಯನ್ನಾಗಿ ತಮ ತಮಗೆ ತೋರಿದ ಬೇರೆ ಬೇರೆ ಮಾರ್ಗಗಳನ್ನು ರೂಪಿಸಿಕೊಂಡರು. ಬೌದ್ಧ ಮತ್ತು ಜೈನ ಧರ್ಮದಲ್ಲಿ ಕ್ರಮವಾಗಿ ಅಂಥ ಸ್ಥಿತಿಯಾದ ಬೋಧಿಸತ್ವ ಮತ್ತು ಅರ್ಹಂತ ಸ್ಥಿತಿ ಸಾಧಿಸಲು ಕ್ಷತ್ರಿಯ ಜನ್ಮ ಮಾತ್ರದಿಂದಲೇ ಅರ್ಹತೆ ಪಡೆದರೆ, ವೀರಶೈವರಲ್ಲಿ ಜಂಗಮತ್ವ ಸಾಧಿಸುವುದರಿಂದ ಮಾತ್ರ ಅಂಥ ಅರಿವು ಸಾಧ್ಯವಾಗುವುದು. ಬ್ರಾಹ್ಮಣರಂತೂ ಬ್ರಹ್ಮಪದವಿ ಪಡೆಯಲು ಅರ್ಹರಾಗುತ್ತಾರೆ. ಒಟ್ಟಿನಲ್ಲಿ ಯಾವ ಕೆಳವರ್ಗದವನೂ, ಯಾವ ಮತದ ಪಂಥದ ತತ್ತ್ವ ಬೋಧನೆಯಿಂದಲೂ ಕೆಳವರ್ಗದಲ್ಲಿ ಇದ್ದ ಸ್ಥಿತಿಯಲ್ಲಿಯೇ ಸಿದ್ಧಿ ಪಡೆದು ಮುಕ್ತನಾಗುವುದು ಮಾತ್ರ ಸಾಧ್ಯವಿಲ್ಲ. ದೀಕ್ಷೆಯಿಂದ ಮತಾಂತರಿಯಾಗಿಯೊ, ಹಲವು ಜನ್ಮಾಂತರದಿಂದಲೊ ತೀವ್ರಸಾಧನೆಯ ಫಲವಾಗಿ ಮಾತ್ರ ಶೂದ್ರನಾದವನು ಮುಕ್ತಿ

ಪಡೆಯಬಹುದೇ ಹೊರತು ನೇರವಾಗಿ ತನ್ನ ಹುಟ್ಟಿನ ಜನ್ಮದಿಂದ ಅಂಥ ಜ್ಞಾನಕ್ಕೆ ಅರ್ಹನಾಗುವ ಹಕ್ಕನ್ನು ಮಾತ್ರ ಪಡೆಯುವಂತಿಲ್ಲ. ಶೂದ್ರರು ಸೇವೆಯಿಂದ ಮಾತ್ರ ಮುಕ್ತಿಗೆ ಅರ್ಹರು ಎಂದು ವೈದಿಕರ ವರ್ಣವ್ಯವಸ್ಥೆಯ ಸಿದ್ಧಾಂತದ ತತ್ತ್ವವಾದರೆ, ಶೂದ್ರರು ಮತಾಂತರದಿಂದ ಮಾತ್ರ ಬದುಕನ್ನು ಸಾರ್ಥಕ ಪಡಿಸಿಕೊಳ್ಳುವುದು ಎಂಬುದು ಸುಧಾರಿತ ಮತಗಳ ಬೋಧನೆಯ ಸಾರವಾಯಿತು. ವೈದಿಕ ಮತ ಶೂದ್ರರ ಸೇವೆಯನ್ನು ದೂರದಿಂದ ಬಯಸಿದರೆ, ಸುಧಾರಿತ ಮತಗಳು ಹತ್ತಿರಕ್ಕೆ ಕರೆದು ಶೂದ್ರರಿಂದ ಕಾಲೊತ್ತಿಸಿಕೊಳ್ಳುವ ತಂತ್ರವನ್ನು ಅನುಸರಿಸಿದರು. ಇದರಿಂದ ಇಹದ ಬದುಕಿಗಿಂತ ಪರದ ಬದುಕಿಗೆ ಹೆಚ್ಚು ಒತ್ತುಬಿದ್ದಿತು. ನಶ್ವರವಾದ ಸಂಪತ್ತು ಮತ್ತು ದೇಹವನ್ನು ಉಚ್ಚವರ್ಗಕ್ಕೆ ಮೀಸಲಿಟ್ಟು ಸವೆಸಿದರೆ ಜನ್ಮ ಸಾರ್ಥಕವಾಗುವುದೆಂಬ ಗಿಳಿ ಪಾಠ ಶೂದ್ರನಿಗಾಯಿತು. ಬ್ರಹ್ಮನ ಹಣೆಬರಹ ಎಲ್ಲರ ಬದುಕನ್ನು ನಿಯಂತ್ರಿಸಿತು!

ಕ್ರಮೇಣವಾಗಿ ಜಗತ್ತಿನ ಸೃಷ್ಟಿಗೆ ಬ್ರಹ್ಮ ಸ್ಥಿತಿಗೆ ವಿಷ್ಣು ಮತ್ತು ಲಯಕ್ಕೆ ರುದ್ರರು ಎಂಬ ತ್ರಿಮೂರ್ತಿ ತತ್ತ್ವ ಸಾರ್ವತ್ರಿಕವಾಗಿ ಭಾರತದ ಧಾರ್ಮಿಕ ಕ್ಷೇತ್ರದಲ್ಲಿ ಮನ್ನಣೆ ಪಡೆಯಿತು. ಆರಂಭ ಕಾಲದಲ್ಲಿ ಪ್ರಜಾಪತಿಯಾಗಿ ಸೃಷ್ಟಿಗೆ ಕಾರಣನಾಗಿದ್ದವನೇ ಅನಂತರ ಬ್ರಹ್ಮವಾಗಿ ಪ್ರಧಾನನಾಗಿ ಕ್ರಮೇಣ ಹಿಂದೆ ಸರಿದು ಬ್ರಹ್ಮ ಮತ ಒಂದು ಪಂಥವಾಗಿ ಭಾರತದಲ್ಲಿ ಬೆಳೆಯಲಿಲ್ಲ. ಹೀಗಾಗಿ ತ್ರಿಮೂರ್ತಿಗಳಲ್ಲಿ ಬ್ರಹ್ಮನಿಗೆ ಸರಿಸಮಾನವಾದ ಸ್ಥಾನವಿದ್ದರೂ, ವಾಸ್ತವಿಕವಾಗಿ ವಿಷ್ಣು ಮತ್ತು ರುದ್ರರಷ್ಟು ಪ್ರಭಾವವನ್ನಾಗಲಿ, ಪ್ರತಿಷ್ಠೆಯನ್ನಾಗಲಿ ಬ್ರಹ್ಮ ಗಳಿಸಿಕೊಳ್ಳಲಿಲ್ಲ. ಉಪನಿಷತ್ತಿನ ಬ್ರಹ್ಮ ತತ್ತ್ವಕ್ಕೂ ಪುರಾಣಗಳ ಬ್ರಹ್ಮನಿಗೂ ಇರುವ ಸಂಬಂಧ ಸ್ಪಷ್ಟವಾಗಬೇಕಾಗಿದೆ. ಆಯಾ ಪುರಾಣಗಳಲ್ಲಿ ವಿಷ್ಣು ಮತ್ತು ರುದ್ರರೇ ಉಪನಿಷತ್ತಿನ ಬ್ರಹ್ಮತತ್ತ್ವಕ್ಕೆ ಸಂವಾದಿಯಾಗಿ ಸ್ಥಾನಮಾನ ಪಡೆದು ವಿಶ್ವ ಸೂತ್ರ ಹಿಡಿದು ಆಡಿಸಿದರು. ಈ ಮತಗಳು ಭಾರತೀಯರ ಬದುಕಿನಲ್ಲಿ ಎಲ್ಲಾ ವರ್ಗದವರಲ್ಲಿಯೂ ಆಳವಾಗಿ ಬೇರು ಬಿಟ್ಟು ಸಾಹಿತ್ಯ, ಸಂಗೀತ, ಶಿಲ್ಪ, ಚಿತ್ರ ಮತ್ತಿತರ ಕಲೆಗಳ ವಸ್ತುವಾಗಿ ಭಾರತೀಯ ಸನಾತನ ಸಂಸ್ಕೃತಿಗೆ ಭದ್ರ ತಳಹದಿಯಾಯಿತು.

ಹುಟ್ಟು, ಜಾತಿ, ವೃತ್ತಿ, ಭಕ್ತಿ, ಭಾಷೆ ಮತ್ತಿತರ ಅಂಶಗಳು ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ನಿರ್ಣಯಿಸುವ ಪ್ರಧಾನ ಅಂಶಗಳಾದುವು. ಇವು ಉಚ್ಚವರ್ಗದವರಿಗೆ ತಮ್ಮ ಹುಟ್ಟಿನ ಸಂಸ್ಕಾರದಿಂದಲೇ ಸಂದರ್ಭೋಚಿತವಾಗಿ ಸಾಧಿಸಬಹುದಾದ ಅಂಶಗಳಾದುವು. ಆದರೆ ಶೂದ್ರರಿಗೆ ಮಾತ್ರ ಹುಟ್ಟಿನ ಸಂಸ್ಕಾರ ಸಂಪೂರ್ಣ ಬದಲಾವಣೆ ಹೊಂದದೇ ಈ ಅಂಶಗಳ ಸಾಧನೆ ಅಸಾಧ್ಯವಾಯಿತು. ಇದರಿಂದ ಶೂದ್ರ ಶೂದ್ರನಾಗಿಯೇ ಉಳಿಯುವ ಸ್ಥಾಯಿ ಸ್ಥಿತಿ ಸೃಷ್ಟಿಯಾಯಿತು. ಆದ್ದರಿಂದಲೇ ಶೂದ್ರ ಮತಾಂತರಿಯಾಗಿ ಸಂಸ್ಕೃತೀಕರಣ ಅಥವಾ ಬ್ರಾಹ್ಮಣೀಕರಣದತ್ತ ಸದಾ ತುಡಿಯುವ ಮನಸ್ಸನ್ನು ರೂಢಿಸಿಕೊಂಡನು. ದಕ್ಷಿಣ ಭಾರತದಲ್ಲಿ ಎಡಗೈ ಮತ್ತು ಬಲಗೈ ಎಂಬ ವಿಶಿಷ್ಟ ಅಂಶವೊಂದು ಸಾಮಾಜಿಕ ಅನುಶ್ರೇಣಿಯನ್ನು ನಿರ್ಣಯಿಸುವಲ್ಲಿ ಪ್ರಧಾನವಾಗಿದೆ. ಅದರಿಂದ ಹೊಂದುವ ಹಕ್ಕುಗಳಿಗಾಗಿ ಹೊಡೆದಾಟ

ದಾಟವಾಗಿ ರಕ್ತದ ಕೋಡಿ ಹರಿದಿದೆ. ಅದರಂತೆ ಶೈವರು ಬಲಗೈ ಗುಂಪಿಗೂ, ವೈಷ್ಣವರು
ಗೈ ಗುಂಪಿಗೂ ಸೇರಿರುತ್ತಾರೆ. ಕುಶಲ ಕೆಲಸಗಾರರು ಎಡಗೈಗೂ, ಬೇಸಾಯಗಾರರು
ಗೈಗೂ ಸೇರಿರುವ ಮತ್ತೊಂದು ವೃತ್ತಿಪರ ವಿಂಗಡಣೆ ಇದೆ. ಇದರ ಜೊತೆಗೆ ಉತ್ತಮರು
ಗೈಗೂ, ಕೀಳು ಜಾತಿಯವರು ಎಡಗೈಗೂ ಸೇರಿದವರೆಂಬ ಅಭಿಪ್ರಾಯವಿದೆ. ಇದೂ
ದೆ ಪಣಕಟ್ಟಿನ ವಿಂಗಡಣೆಯ ಆಧಾರದ ಅಂಶವಾಗಿ ಹದಿನೆಂಟು ಪಣದವರು ಬಲಗೈಗೂ,
ಎತ್ತು ಪಣದವರು ಎಡಗೈಗೂ, ಒಂಬತ್ತು ಪಣದವರನ್ನು ವಿಷ್ಣು ಭಕ್ತರನ್ನಾಗಿ ಮತ್ತು
ನೆಂಟು ಪಣದವರನ್ನು ಶಿವಭಕ್ತರನ್ನಾಗಿ ವಿಂಗಡಿಸುವ ಪದ್ಧತಿ ಇದೆ. ಆದರೆ ಈ ವಿವಿಧ
ಡಣೆಯ ಪಟ್ಟಿಯನ್ನು ಪರಿಶೀಲಿಸಿದಾಗ, ಸಾಮಾನ್ಯ ಸೂತ್ರವೊಂದು ರೂಪುಗೊಳ್ಳದೆ,
ಗೊಂದಲ ಸೃಷ್ಟಿಯಾಗುತ್ತದೆ. ದಕ್ಷಿಣದಲ್ಲಿ ಮಾತ್ರ ಇಂಥ ವಿವಿಧ ವಿಂಗಡಣೆಗಳು
ತ್ವದಲ್ಲಿದ್ದು ಬಲಗೈ ಮತ್ತು ಎಡಗೈ ಗುಂಪು ಉಚ್ಚ ವರ್ಗದಿಂದ ಕೆಳವರ್ಗದ ತನಕ ಯಾರನ್ನೂ
ನೆ ಸರ್ವ ವ್ಯಾಪಿಯಾಗಿ ಹಬ್ಬಿದೆ. ಬ್ರಾಹ್ಮಣರು ಮಾತ್ರ ತಾವು ಅತ್ಯಂತ ಶ್ರೇಷ್ಠರಾದ
ಾಜನರು' ಎಂದು ವಾದಿಸುತ್ತ ಈ ವಿಂಗಡಣೆಯಿಂದ ತಟಸ್ಥರಾಗಿದ್ದು ಪಣಕಟ್ಟಿನಿಂದ
ಸರಿಯಲು ಪ್ರಯತ್ನಿಸಿದರೂ ಇತರ ಕೋಮಿನವರು ಬ್ರಾಹ್ಮಣರನ್ನು ಲೆಕ್ಕಕ್ಕೆ ತೆಗೆದುಕೊಂಡೇ
ಟ್ಟನ್ನು ರೂಪಿಸುವ ಸಂಪ್ರದಾಯವನ್ನು ಬೆಳಸಿಕೊಂಡೇ ಬಂದಿದ್ದಾರೆ. ತಾಂತ್ರಿಕ ಮತ
ದಾಯದಲ್ಲಿಯೂ ಇಂಥ ವಿಂಗಡಣೆ ಇದೆ. ಎಡಗೈ ಮತ್ತು ಬಲಗೈ ವಿಂಗಡಣೆ ಪಣಕಟ್ಟಿನ
ರದ ಮೇಲೆ ದಕ್ಷಿಣದ ಎಲ್ಲಾ ಜಾತಿ ಮತ್ತು ವರ್ಗಗಳಿಗೂ ಅನ್ವಯಿಸುತ್ತಾದರೂ, ಅಂಥ
ವಿಂಗಡಣೆಯನ್ನು ಅಂತ್ಯಜರಿಗೆ ಮಾತ್ರ ಮಿತಗೊಳಿಸುವ ರೂಢಿಯನ್ನು ಉತ್ತಮ
ಯ ಸಮಾಜ ತಜ್ಞರು ಬೆಳೆಸಿಕೊಂಡು ಗೊಂದಲವನ್ನೇ ಸೃಷ್ಟಿಸಿದ್ದಾರೆ. ಶಿಷ್ಟ ಮತ್ತು
ಪದ ಸಾಹಿತ್ಯದ ಅಧ್ಯಯನ ಮತ್ತು ರಚನೆಯ ಮೇಲೆ ಹಿಡಿತ ಸಾಧಿಸಿರುವ ಉತ್ತಮ
ಯವರಿಂದಾಗಿ, ಸಾಮಾನ್ಯ ವರ್ಗದಲ್ಲಿ ಆಚರಣೆಯಲ್ಲಿರುವ ಇಂಥ ಸಂಪ್ರದಾಯಗಳು
ಗೂ ಅಸ್ತಿತ್ವದಲ್ಲಿದ್ದರೂ ಲಿಖಿತ ಮತ್ತು ಅಲಿಖಿತ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆಯದಿರುವುದು
ಉದ್ದೇಶ ಸಾಧನೆಯ ತಂತ್ರವಾಗಿರುವುದು ವಿಷಾದದ ಸಂಗತಿಯಾಗಿದೆ. ವರ್ಣ ಮತ್ತು
ಭೇದದ ಸಾಮ್ಯ ವೈಷಮ್ಯದ ಅಧ್ಯಯನಕ್ಕೆ ಪ್ರಮುಖ ಅಂಶವಾಗಬಹುದಾದ ಇಂಥ
ತಣೆಯ ವಿಷಯವಾಗಿ ಕೆಳವರ್ಗದಲ್ಲಿ ಪಕ್ಷಪಾತ ರಹಿತ ಕ್ಷೇತ್ರ ಕಾರ್ಯ ನಡೆಯುವುದರಿಂದ
ವಿಷಯಗಳು ಬೆಳಕಿಗೆ ಬಂದು ವಿವಿಧ ಸಂಸ್ಕೃತಿಗಳ ವೈಶಿಷ್ಟ್ಯವನ್ನು ಗುರುತಿಸಲು
ವಾಗುತ್ತದೆ. ಇದರಿಂದ ಸಂಸ್ಕೃತಿ ಸಂಸ್ಕೃತಿಯಲ್ಲಿ ಕರಗಿಹೋಗುವ ಅಥವಾ ಒಂದರ
ಮತ್ತೊಂದು ಪ್ರಭಾವ ಬೀರುವ ಪರಿಕಲ್ಪನೆಗಳೇ, ಮರು ವಸ್ತುನಿಷ್ಠ ಅಧ್ಯಯನದಿಂದ
ಗಾಗುವ ಸಂಭವವಿದೆ. ತಮಿಳು, ಕೇರಳ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ
ವಿಶಿಷ್ಟ ಆಚರಣೆಗಳು ರೂಢಿಯಲ್ಲಿದ್ದು, ಉತ್ತರ ಭಾರತದಲ್ಲಿ ಅದರ ಸುಳಿವೇ
ರುವುದನ್ನು ನೋಡಿದರೆ ಇಂಥ ಆಚರಣೆಗಳು ದ್ರಾವಿಡ ಸಂಸ್ಕೃತಿಯ ಒಂದು ವಿಶಿಷ್ಟ
ಂಬುದು ಸ್ಪಷ್ಟವಾಗುತ್ತದೆ.

ವಿಷ್ಣು ಮತ್ತು ಶೈವ ಪಂಥದಲ್ಲಿ ವಿಷ್ಣು ಪುರುಷನಾಗಿ ಲಕ್ಷ್ಮಿ ಶಕ್ತಿಯಾಗಿ, ಶಿವ ಪುರುಷನಾಗಿ ಪಾರ್ವತಿ ಶಕ್ತಿಯಾಗಿ ಪುರುಷ-ಶಕ್ತಿ ಸಂಯೋಗದ ಸಾಂಖ್ಯತತ್ತ್ವ ಸಂಯೋಗದ ತಾಂತ್ರಿಕ ತತ್ತ್ವ ಈ ಪಂಥಗಳಲ್ಲಿ ನುಸುಳಿದುದೇ ಅಲ್ಲದೆ, ವಿಷ್ಣು ಪಂಥದಲ್ಲಿ ವಿಷ್ಣು ಪುರುಷನಾಗಿ ರುದ್ರ ಶಕ್ತಿಯಾಗಿ, ಶಿವ ಪಂಥದಲ್ಲಿ ಶಿವ ಪುರುಷನಾಗಿ ವಿಷ್ಣು ಪ್ರಕೃತಿಯಾಗಿ ಕಲ್ಪಿತವಾಗಿರುವುದು ತಾಂತ್ರಿಕ ಮತದ ಮಹತ್ವಕ್ಕೆ ಸಾಧನವಾಯಿತು. ಹೀಗೆ ಈ ಎರಡೂ ಪಂಥಗಳಲ್ಲಿ ಇತ್ತ ವೈದಿಕ, ಅತ್ತ ಅವೈದಿಕ ತಾಂತ್ರಿಕ ಮತ ಸಂಪ್ರದಾಯ ಅರಗಿಸಿ ಕೊಂಡಂತೆ ಬಹಿರಂಗದಲ್ಲಿ ಸಾಮರಸ್ಯ ಮಂತ್ರ ಪಠಿಸುತ್ತಲೇ ಅಂತರಂಗದಲ್ಲಿ ಸಮರ ಸಿದ್ಧತೆ ನಡೆಯುತ್ತ, ಭಾರತೀಯ ಸಂಸ್ಕೃತಿ ಎಂದರೆ ಭಿನ್ನತೆಯಲ್ಲಿ ಏಕತೆ, ಏಕತೆಯಲ್ಲಿ ಭಿನ್ನತೆ ಸಾರುವ ಸೂತ್ರ ಸೃಷ್ಟಿಯಾಯಿತು. ಆದರೆ ಕ್ರಮೇಣ ಈ ಎರಡೂ ಪಂಥಗಳ ಚಟುವಟಿಕೆಗಳನ್ನು ವೈದಿಕ ಧಾರ್ಮಿಕ ವಿಧಿಯ ವ್ಯಾಖ್ಯಾನಕ್ಕೆ ಒಗ್ಗಿಕೊಂಡ ವಿಷಯ ಮಾತ್ರ ವಿಚಿತ್ರವಾಗಿದೆ.

ಈ ಎರಡೂ ಪಂಥಗಳಿಗೆ ವೈದಿಕ ಮುದ್ರೆ ಬಿದ್ದರೂ, ಮತಾಂತರಕ್ಕೆ ಅವಕಾಶವಾದುದು, ತಮ್ಮ ತಮ್ಮ ಮತೀಯರ ಸಂಖ್ಯೆಯನ್ನು ಅಧಿಕಗೊಳಿಸಿ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಬದುಕಿನ ಮೇಲೆ ಹಿಡಿತ ಸಾಧಿಸುವುದರಲ್ಲಿ ಪರಸ್ಪರ ಸ್ಪರ್ಧೆಗೆ ಅವಕಾಶವಾಯಿತು. ಇದರಿಂದ ಪಂಥಗಳ ಹೊರಗೆ ಮತ್ತು ಒಳಗೆ ಹದಿನೆಂಟು ಕೋಮುಗಳು ಸಮ ಸಮವಾಗಿ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಮತಾಂತರಿಯಾದ ಅಧಿಕ ಸಂಖ್ಯೆಯ ಕೆಳವರ್ಗದವರು ತಮ್ಮ ಸಾಮಾಜಿಕ ಸ್ಥಾನಮಾನ ಉತ್ತಮಪಡಿಸಿಕೊಳ್ಳುವ ಆಮಿಷವಿದ್ದರೂ, ಆಯಾ ಪಂಥದ ಉತ್ತಮ ಜಾತಿಯಿಂದ ಮತಾಂತರಿಯಾದವರಿಗಿಂತ ಕೆಳಗಿನ ಸ್ಥಾನ ಪಡೆದು, ತಮ್ಮ ತಮ್ಮ ಮೂಲ ಜಾತಿಯವರಿಗಿಂತ ಮಾತ್ರ ಉತ್ತಮರಾದಂತೆ ಭ್ರಮಿಸಿದರು. ಶಿವದಾರ ಅಥವಾ ಜನಿವಾರ ಧರಿಸಿ ತಮ್ಮ ತಮ್ಮ ಪೂರ್ವಾಶ್ರಮದ ವೃತ್ತಿಯನ್ನೇ ಮುಂದುವರಿಸಿಕೊಂಡು ವೀರಶೈವ ಅಥವಾ ವೀರವೈಷ್ಣವರಾಗಿ ಆಯಾ ಪಂಥಗಳನ್ನು ಭದ್ರಗೊಳಿಸಿ, ಅಪಾಯ ಒದಗದಂತೆ ರಕ್ಷಿಸುವ ಮತ ಕೋಟೆಯ ಸುತ್ತಲಿನ ಕಂದಕಗಳಾದರು. ಆಯಾ ಮತಗಳಲ್ಲಿಯೇ ಇದರಿಂದ ಉಚ್ಚ ಮತ್ತು ಕೆಳವರ್ಗದ ಸಂಸ್ಕೃತಿಯ ಭೇದಕ್ಕೆ ಕಾರಣವಾಯಿತು. ಆಯಾಯಾ ಸ್ಥಳದ ವಿಷ್ಣು ಅಥವಾ ಶಿವ ದೇವಾಲಯಗಳು ವಿಷ್ಣು ಅಥವಾ ಶಿವ ಭಕ್ತರ ವಲಯಗಳನ್ನಾಗಿ ಪರಿವರ್ತಿಸಿ, ಪಂಥ ಮತ್ತು ಪಂಥೇತರರ ಬದುಕಿನಲ್ಲಿ ಅಚ್ಚಳಿಯದ ಪ್ರಭಾವ ಬಿದ್ದಿತು. ಈ ಎರಡೂ ಪಂಥಗಳಿಗೆ ಮತಾಂತರಿಯಾಗದ ಇತರ ಕೋಮುಗಳಲ್ಲಿಯೂ ವಿಷ್ಣು ಮತ್ತು ಶಿವ ಸಂಪ್ರದಾಯದ ಆಚರಣೆಯ ಬಣಗಳಾದುವು. ಈ ಎರಡೂ ಪಂಥಗಳ ಉಚ್ಚವರ್ಗ ವೈದಿಕ ಕರ್ಮ ಪ್ರಧಾನ ಧಾರ್ಮಿಕ ವಿಧಿಯನ್ನು ಆಚರಿಸಿದರೆ, ಕೆಳವರ್ಗ ತಾಂತ್ರಿಕ ಕರ್ಮ ಪ್ರಧಾನ ಧಾರ್ಮಿಕ ವಿಧಿಯನ್ನು ಅನುಸರಿಸಿತು. ಆಧ್ಯಾತ್ಮಿಕ ಹಂತದಲ್ಲಿ ಸಮಾನತೆಯ ತತ್ತ್ವ ಸ್ವೀಕೃತವಾದರೂ, ಸಾಮಾಜಿಕ ಹಂತದಲ್ಲಿ ಮಾತ್ರ ಅಸಮಾನತೆ ಸ್ಥಾಯಿಯಾಯಿತು.

ಹರಿಹರ ಭೇದವನ್ನು ಎಣಿಸದ ತತ್ತ್ವ ಬೋಧನೆಯ ಸಂಪ್ರದಾಯ ಸ್ಮಾರ್ತರದ್ದು. ವಿಷ್ಣುಪೂಜೆ ಮಾಡದಿದ್ದರೂ ವೈದಿಕ ವಿಧಿಯನ್ನು ಆಚರಿಸುವ ಆರಾಧ್ಯ ಬ್ರಾಹ್ಮಣರ ಮತ್ತೊಂದು

ಪಂಗಡವಿದೆ. ಆರಾಧ್ಯ ಬ್ರಾಹ್ಮಣರ ಆಚಾರ ವಿಚಿತ್ರವಾಗಿದೆ. ಯಾವ ಮಠವೂ, ಪೀಠವೂ ಇಲ್ಲದ ಅವರು ಸ್ವಯಮಾಚಾರ್ಯರು ಎಂದು ಕರೆದುಕೊಳ್ಳುತ್ತಾರೆ. ಸ್ಮಾರ್ತರು ಜನಿವಾರ ಧರಿಸುತ್ತಾರೆಯೇ ಹೊರತು ಲಿಂಗವನ್ನು ಧರಿಸದ ಸ್ಥಾವರ ಲಿಂಗದ ಆರಾಧಕರು. ಆರಾಧ್ಯ ಬ್ರಾಹ್ಮಣರು ಶಿವದಾರ ಮತ್ತು ಜನಿವಾರ ಎರಡನ್ನೂ ಧರಿಸುತ್ತಾರೆ. ವಿವಾಹ ವಿಧಿಯಲ್ಲಿ ಹೋಮ ಮತ್ತು ಸಪ್ತಪದಿಗಳ ವೈದಿಕ ಧಾರ್ಮಿಕ ವಿಧಿಯನ್ನು ಆಚರಿಸುವ ಆರಾಧ್ಯ ಬ್ರಾಹ್ಮಣರು ಅಂತ್ಯಕ್ರಿಯೆಯಲ್ಲಿ ಶೈವ ಪದ್ಧತಿ ಅನುಸರಿಸುತ್ತಾರೆ. ಸ್ಮಾರ್ತರು ಮೂಲತಃ ವೈದಿಕರಾಗಿ ಲಿಂಗ ಧರಿಸದ ಸ್ಥಾವರ ಪೂಜೆಯ ಶಿವಭಕ್ತರಾದರೆ,ಆರಾಧ್ಯ ಬ್ರಾಹ್ಮಣರು ಮೂಲತಃ ಶಿವ ಪಂಥದ ವೈದಿಕ ಕರ್ಮ ಪ್ರಧಾನ ಆಚಾರ ಸಂಪನ್ನರು. ಸ್ಮಾರ್ತರಿಗೆ ವೈದಿಕ ಧಾರ್ಮಿಕ ವಿಧಿ ಪ್ರಧಾನವಾಗಿ ಲಿಂಗ ಪೂಜೆ ಗೌಣವಾದರೆ, ಆರಾಧ್ಯ ಬ್ರಾಹ್ಮಣರಿಗೆ ಲಿಂಗ ಪೂಜೆ ಪ್ರಾಧಾನವಾಗಿ ವೈದಿಕ ವಿಧಿ ಗೌಣವಾಗುತ್ತದೆ. ಸ್ಮಾರ್ತರು ವೈದಿಕರಾದರೂ ಶಿವ ವಿರೋಧಿಗಳಲ್ಲ. ಹರಿಹರ ಸಾಮರಸ್ಯ ಸಾಧನೆಯಾಗಿ ವೈದಿಕ ಧಾರ್ಮಿಕ ವಿಧಿ ಮಾಧ್ಯಮವಾಗಿರುವುದನ್ನು ಸ್ಮಾರ್ತ ಮತ್ತು ಆರಾಧ್ಯ ಬ್ರಾಹ್ಮಣರಲ್ಲಿ ಗುರುತಿಸಬಹುದು.

ಭಕ್ತಿ ಪಂಥ ಸ್ತ್ರೀ ಮತ್ತು ಶೂದ್ರರಿಗಾಗಿ ಅಸ್ತಿತ್ವಕ್ಕೆ ಬಂದದ್ದು. ಆದರೆ ಅದರಲ್ಲಿ ಮತ್ತೆ ಕರ್ಮ ಪ್ರಧಾನ ವಿಧಿ ನುಸುಳಿತು. ವೈದಿಕ ವಿಧಿಯ ವಿರೋಧದ ಅನೇಕ ಅಂಶಗಳು ಭಕ್ತಿ ಪಂಥದಲ್ಲಿ ಕಂಡುಬಂದರೂ ಕ್ರಮೇಣ ಭಕ್ತಿ ಪಂಥಕ್ಕೆ ವೈದಿಕ ಮುದ್ರೆ ಬಿದ್ದಿತು. ಬ್ರಾಹ್ಮಣರಲ್ಲಿಯೇ ವಿಷ್ಣು ಮತ್ತು ಶಿವ ಪಂಥಗಳಿವೆ. ವಿಷ್ಣು ಪಂಥದಲ್ಲಿಯೇ ತಮಿಳುನಾಡಿನ ವೈಷ್ಣವ ಪಂಥಕ್ಕಿಂತ ಬಂಗಾಳದ ವೈಷ್ಣವ ಪಂಥ ಭಿನ್ನವಾಗಿದೆ. ವಿಶಿಷ್ಟಾದ್ವೈತದ ವೈಷ್ಣವ ಪಂಥಕ್ಕೂ ಮಾಧ್ವ ಮತದ ವೈಷ್ಣವ ಪಂಥಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ತಮಿಳುನಾಡಿನ ಶೈವ ಸಿದ್ಧಾಂತದ ವೈದಿಕ ಅಂಶಗಳನ್ನು ಕರ್ನಾಟಕದ ವೀರಶೈವರು ತಿರಸ್ಕರಿಸಿ ವೇದ ವಿರೋಧಿ ಶೈವ ತತ್ತ್ವಗಳನ್ನು ಎತ್ತಿಹಿಡಿದರು. ಆದರೆ ಅಂಥ ವೀರಶೈವರಲ್ಲಿಯೇ ಕ್ರಮೇಣ ಹಲವು ಪಂಗಡ ಒಳಪಂಗಡಗಳು ಸೃಷ್ಟಿಯಾದವು. ಶುದ್ಧ ವೀರ ವೈಷ್ಣವ ಮತ್ತು ಶುದ್ಧ ವೀರಶೈವರು ಪರಸ್ಪರ ಕಟ್ಟಾ ವಿರೋಧಿಗಳು. ಅವರಲ್ಲಿ ಪರಸ್ಪರ ಮುಖದರ್ಶನ ಮತ್ತು ನಾಮಸ್ಮರಣೆ ಕಿವಿಗೆ ಬಿದ್ದೊಡನೆ ಪಾಪ ಸಂಚಯವಾಗುತ್ತದೆ. ಯಮ ಆನೆಯ ರೂಪದಲ್ಲಿ ಬಂದು ಶಿವಾಲಯಕ್ಕೆ ಅಟ್ಟಿಸಿಕೊಂಡು ಹೋದರೂ ಶಿವಾಲಯವನ್ನು ಪ್ರವೇಶಿಸಕೂಡದೆಂದು ವೀರ ವೈಷ್ಣವರ ಪ್ರತಿಜ್ಞೆ. (ಯಾನೈ ವಂದಾಲುಂ ಶಿವಾಲಯಂ ಪುಗವೇಂಡಾ) ವೈಷ್ಣವನ ಶವದ ಮೇಲೂ ಊರ್ಧ್ವ ತ್ರಿಪುಂಡ್ರ ದರ್ಶನವಾಗುತ್ತಿರಲೇ ಬೇಕೆಂಬುದೇ ಅವರ ನಂಬಿಕೆ. ವೀರ ವೈಷ್ಣವರು ವಿಷ್ಣುವಲ್ಲದೆ ಅನ್ಯದೇವರ ದರ್ಶನ ಮಾಡದವರನ್ನು 'ಏಕಾಂತಿಗಳು' ಎನ್ನುತ್ತಾರೆ. ಅವರು ಅಪ್ಪಿತಪ್ಪಿ ಮರೆತಾದರೂ 'ಶಿವ' ಎಂಬ ಶಬ್ದ ನಾಲಿಗೆ ಮೇಲೆ ಬರದಂತೆ ಎಚ್ಚರಿಕೆ ವಹಿಸುತ್ತಾರೆ. ತಮಿಳಿನಲ್ಲಿ "ಬೋಶಿ ವಾಂಗಿಟ್ಟು ವಾಡಾ" ಎಂಬ ಮಾತಿದೆ. (ಬೋಶೀ=ಚರಕಲು, ವಾಂಗಿಟ್ಟು=ತೆಗೆದುಕೊಂಡು, ವಾಡಾ=ಬಾ) ಅದಕ್ಕೆ ಕನ್ನಡದಲ್ಲಿ "ಚರಕಲನ್ನು ತೆಗೆದುಕೊಂಡು ಬಾ" ಎಂದು ಅರ್ಥ. ಈ

ವಾಕ್ಯದ ಎರಡು ಪದಗಳಾದ ಬೋಶಿ ಮತ್ತು ವಾಂಗಿಟ್ಟು ಎಂಬ ಪದಗಳ, ಮೊದಲನೆಯ ಪದದ ಅಂತ್ಯ ಅಕ್ಷರ 'ಶಿ' , ಎರಡನೆಯ ಪದದ ಮೊದಲನೆಯ ಅಕ್ಷರ 'ವಾ' ಸೇರಿ ಉಚ್ಚರಿಸುವಾಗ 'ಶಿವಾ' ಎಂದಾಗಿ ಬಿಡುತ್ತದೆ. ಇದರಿಂದ 'ಶಿವ' ನಾಮಸ್ಮರಣೆಯಾದಂತಾಗಿ ಪಾಪ ಸಂಚಯವಾಗುವುದೆಂದು ಹೆದರುವ ವೀರ ವೈಷ್ಣವರು "ಬೋಶಿ ವಾಂಗಿಟ್ಟು ವಾಡಾ" ಎಂಬ ವಾಕ್ಯವನ್ನೇ ಉಚ್ಚರಿಸುವುದಿಲ್ಲ. ಅದಕ್ಕೆ ಬದಲಾಗಿ "ಬೋಶಿ ಎಡತ್ತ್ಕೊಂಡು ವಾಡಾ"(ಬೋಶಿ=ಚರಕಲು, ಎಡತ್ತ್ಕೊಂಡು=ಎತ್ತಿಕೊಂಡು, ವಾಡಾ=ಬಾ) ಎಂದು ಉಚ್ಚರಿಸುತ್ತಾರೆ. ಇದರಿಂದ ಶಿವ ಎಂದು ನಾಲಿಗೆ ಮೇಲೆ ಬಂದಾಗ ಬರುವ ಪಾಪವನ್ನು ಎರಡನೆಯ ಪದವನ್ನೇ ಬದಲಿಸಿ 'ಶಿಎ' ಎಂದು ಉಚ್ಚರಿಸಿ ತಪ್ಪಿಸಿಕೊಳ್ಳುತ್ತಾರೆ. ಶುದ್ಧ ವೀರಶೈವರಿಗೆ ಅನ್ಯದೇವರು 'ಹಾದರ'. ಘಂಟಾಕರ್ಣ ಶಿವನಲ್ಲದೆ ಅನ್ಯದೇವರ ಶಬ್ದ ಕಿವಿಗೆ ಬೀಳದಂತೆ ಘಂಟೆ ಕಟ್ಟಿಕೊಂಡಿರುತ್ತಾನೆ. ಶಿವ ವೇಷಧಾರಿಯಾಗಿ ಬಂದು ಅವನನ್ನು ಪರೀಕ್ಷಿಸುವುದಕ್ಕಾಗಿ 'ಹರಿಯಿತು' ಎಂಬ ಶಬ್ದವನ್ನು ಪ್ರಯೋಗಿಸುತ್ತಾನೆ. ಆದರಿಂದ ಸಿಡಿಮಿಡಿಗೊಂಡ ಘಂಟಾಕರ್ಣ ವೇಷಧಾರಿ ಶಿವನನ್ನು ಸಟ್ಟುಗ ಹಿಡಿದು ಅಟ್ಟಿಸಿಗೊಂಡು ಹೋಗುತ್ತಾನೆ. 'ಹರಿಯಿತು' ಎಂಬ ಪದದ 'ಹರಿ' ಎಂಬ ಮಾತು ಶಿವಭಕ್ತ ಘಂಟಾಕರ್ಣನಿಗೆ ಹರಿಯ ನಾಮಸ್ಮರಣೆಯಾಗಿ ಕಿವಿಗೆ ಬಿದ್ದು ವ್ರತಭಂಗವಾಗಿ ಬಿಡುತ್ತದೆ. ಶಿವಭಕ್ತರಿಗೆ ಭವಿಯೊಂದಿಗೆ ವ್ಯವಹಾರ ನಿಷಿದ್ಧ. ವೀರಶೈವರಲ್ಲಿಯೂ ಅನ್ಯದೇವರನ್ನು ಪೂಜಿಸದ, ನಾಮಸ್ಮರಣೆ ಕೇಳದ ವೀರ ವ್ರತಿಗಳಿಗೆ 'ಏಕಾಂತಿ'ಗಳು ಎಂದು ಕರೆಯುವ ರೂಢಿಯಲ್ಲಿ ಇತ್ತೆಂಬುದಕ್ಕೆ ಏಕಾಂತದ ರಾಮಯ್ಯನ ಬದುಕೇ ಸಾಕ್ಷಿ.

ತಮಿಳುನಾಡಿನ ಶ್ರೇಷ್ಠ ಸಂತ ನಮ್ಮಾಳ್ವಾರರ ದಿವ್ಯ ಪ್ರಬಂಧಗಳಲ್ಲಿ ಸ್ಮಾರ್ತರ ವಿಭೂತಿಯ ಬಗ್ಗೆ ಸಹನೆಯ ಮಾತು ಬರುತ್ತದೆ. ಆದರೆ ಅನಂತರ ಬಂದ ವೇದಾಂತ ದೇಶಿಕರಿಗೆ ಅದನ್ನು ಸಹಿಸದಾಗುತ್ತದೆ. ದೇಶಿಕರು ವಿಭೂತಿಗೆ 'ವಿಷ್ಣುವಿನ' ಪಾದದ ಧೂಳಿ ಎಂದು ವ್ಯಾಖ್ಯಾನಿಸಿ ಅದಕ್ಕೆ ವಿಷ್ಣುಪರವಾದ ಅರ್ಥದಿಂದ ಶಿವಪರವಾದ ಅರ್ಥದ ದೋಷವನ್ನು ತೊಡೆಯುತ್ತಾರೆ. ಹಾಗೆಯೇ ವೀರಶೈವರಲ್ಲಿಯೂ ಇದಕ್ಕೆ ಸಂವಾದಿಯಾಗಿ ಒಂದು ಉದಾಹರಣೆ ದೊರೆಯುತ್ತದೆ. ಗುಪ್ತ ಮಂಚಣ್ಣ ಶಿವಭಕ್ತ. ಆದರೂ ಅವನು ನಾಮಧಾರಿಯಾಗಿ ವಿಷ್ಣು ಪೂಜಕನಾದ 'ನಾಮದ ದಾಸ' ಎಂದು ತಾನು 'ಹರಿಭಕ್ತನೇ ಹೊರತು ಶಿವಭಕ್ತನಲ್ಲ' ಎಂದು ಘೋಷಿಸುತ್ತಾನೆ. ವೀರಶೈವರನ್ನು ಇದು ತುಂಬಾ ಇಕ್ಕಟ್ಟಿಗೆ ಸಿಕ್ಕಿಸುತ್ತದೆ. ವೀರಶೈವರು ಮಂಚಣ್ಣನನ್ನು 'ಗುಪ್ತಭಕ್ತ'ನೆಂದು ಕರೆದು ಅವನಿಗೆ ಅಂಟಿರುವ ವಿಷ್ಣು ಭಕ್ತಿ ಕಳಂಕವನ್ನು ತೊಳೆಯಲು ಪ್ರಯತ್ನಿಸುತ್ತಾರೆ. ಅದೂ ಅಲ್ಲದೆ ಗುಪ್ತಮಂಚಣ್ಣ "ಮಾಧವನ ಮನೆಯ ಬಾಗಿಲಿನಲ್ಲಿ ಮಹಾಜನಂಗಳೆಲ್ಲರು ಕೂಡಿ" ಮತ್ತು "ತೊಳಸಿಯ ಗಿಡವ ಮೆಲಲಾರದೆ ಕಿವಿಯೊಳಗಿಕ್ಕಿ"- ಈ ಎರಡು ವಿಷ್ಣು ಪರ ಬೆಡಗಿನ ವಚನಗಳಿಗೆ ವೀರಶೈವ ಟೀಕಾಕಾರರು ಶಿವ ಪರವಾದ ಅರ್ಥಮಾಡಿರುವುದರಿಂದ ವಿಷ್ಣು ಪರವಾದ ಅರ್ಥದ ದೋಷವನ್ನು ತೊಡೆಯುತ್ತಾರೆ.

ವಿಷ್ಣು ಮತ್ತು ಶಿವ ಪಂಥದ ಪರಸ್ಪರ ಸಹನೆ ಮತ್ತು ಸಾಮರಸ್ಯವನ್ನು ಸಹಿಸದ ಅತ್ಯುಗ್ರ ಮತನಿಷ್ಠರು ತಮ್ಮ ತಮ್ಮ ಮತದ ಪರವಾಗಿ ಬದುಕನ್ನು ವ್ಯಾಖ್ಯಾನಿಸುವುದು ಒಂದು ಸಂಪ್ರದಾಯವಾಗಿ ಸಾಮರಸ್ಯಕ್ಕಿಂತ ಮತ ಮತಗಳಲ್ಲಿ ಸಮರವೇ ಒಂದು ಲಕ್ಷಣವಾಗಿ ಪರಿಣಮಿಸಿತು. ಆತ್ಮಸಾಧನೆಯ ತಾತ್ವಿಕ ಹಂತದಲ್ಲಿ ಹೊಂದಾಣಿಕೆ ಮತ್ತು ಸಮಾನತೆಯನ್ನು ಒಂದು ಪಕ್ಷ ಒಪ್ಪಿದರೂ, ಸಾಮಾಜಿಕ ಹಂತದ ಧಾರ್ಮಿಕ ವಿಧಿಗಳ ಆಚರಣೆಗಳಲ್ಲಿ ಮಾತ್ರ ಮತ ಮತಗಳ ಘರ್ಷಣೆ ಅನಿವಾರ್ಯವಾಯಿತು. ಹಿಂದೆ ಅಂಥ ಘರ್ಷಣೆಗೆ ಧರ್ಮವನ್ನೇ ಒಂದು ಪ್ರಬಲ ಆಯುಧವನ್ನಾಗಿ ಬಳಸಿದರೆ, ಇಂದೂ ಅಂತದೇ ಘರ್ಷಣೆಗೆ ಅದೇ ಧರ್ಮವೇ ರಾಜಕೀಯದ ಒಂದು ಪ್ರಬಲ ಆಯುಧವಾಗಿ ಪ್ರಯೋಗವಾಗುತ್ತಿದೆ. ಸ್ವಾತಂತ್ರ್ಯದ ಸಂವಿಧಾನಾತ್ಮಕ ಬದುಕಿನಲ್ಲಿ ಜಾತ್ಯಾತೀತತೆ ಎಂದರೆ ವಿಷ್ಣುಭಕ್ತ ಶಿವಾಲಯದಲ್ಲಿ ತನ್ನ ವಿಷ್ಣುವನ್ನೂ, ಶಿವಭಕ್ತ ವಿಷ್ಣು ದೇವಾಲಯದಲ್ಲಿ ತನ್ನ ಶಿವನನ್ನೂ ಕಂಡು ಪೂಜಿಸುವಷ್ಟು ಪರಮತ ಸಹಿಷ್ಣುಗಳೇ ಹೊರತು, ಆಯಾಯಾ ದೇವರ ಗುಡಿಯಲ್ಲಿ ಆಯಾಯಾ ದೇವರುಗಳನ್ನೇ ಮೂಲ ಸ್ವರೂಪದಲ್ಲಿ ಪೂಜಿಸುವಷ್ಟು ಔದಾರ್ಯದ ಸಂಸ್ಕೃತಿ ಬೆಳೆದು ಬರಲಿಲ್ಲ. ಇದರಿಂದ ಭಾರತೀಯ ಸಂಸ್ಕೃತಿ ತಿಯಾ ಜಾತಿಯ ವ್ಯಾಖ್ಯಾನದ ವಸ್ತುವಾಯಿತು. ಇದು ಸಮಗ್ರ ಸಂಸ್ಕೃತಿಯ ಐಕ್ಯತೆಯ ಅಭಾವಕ್ಕೆ ಕಾರಣವಾಯಿತು. ಹಿಂದೆ ವಿಷ್ಣು ಕೇಂದ್ರವಾದ ಕಂಚಿಯಲ್ಲಿ ಶಿವಭಕ್ತ ಪುರೋಹಿತರು ಆತ್ಮಹತ್ಯೆ ಮಾಡಿಕೊಂಡದ್ದು, ಶಿವ ಭಕ್ತ ಚೋಳರಿಂದ ವಿಷ್ಣು ಭಕ್ತರಿಗೆ ಚಿತ್ರಹಿಂಸೆಯಾದದ್ದು, ಶಿವ ಮತ್ತು ವಿಷ್ಣುಭಕ್ತರಿಂದ ಜೈನರ ರಕ್ತ ಹರಿದದ್ದು, ಚಿಕ್ಕದೇವರಾಯನ ಕಾಲದಲ್ಲಿ ನಂಜನಗೂಡಿನಲ್ಲಿ ಜಂಗಮರ ಕೊಲೆ ಮುಂತಾದ ಘಟನೆಗಳು ಸಾಂಸ್ಕೃತಿಕ ದಾಖಲೆಗಳಾದರೆ, ಸಮ ಕಾಲೀನದಲ್ಲಿ ಜಾತಿ ಸಮ್ಮೇಳನಗಳು ಸಂಘಟಿತವಾಗಿ, ರಾಜಕೀಯ ಪ್ರಾಬಲ್ಯಕ್ಕೆ, ಜಾತಿ ಪ್ರಾತಿನಿಧ್ಯಕ್ಕೆ ಸತತ ಹೋರಾಟ ನಡೆಸುತ್ತಿರುವುದೇ ಸತತ ದ್ವೇಷದ ರೂಪಾಂತರದ ಸಾತ್ವಿಕ ಸೇವಾ ಮುಖವಾಡದ, ಅಪ್ರಜ್ಞಾ ಸ್ಥಿತಿಯ ಸಂಪ್ರದಾಯ ರಕ್ಷಣೆಯ ಜಾಗ್ರತ ಮನಸ್ಸಿನ ಅಭಿವ್ಯಕ್ತಿಯಾಗಿದೆ. ಹಿಂದೆ ವಿಷ್ಣು ಮತ್ತು ಶೈವ ಪಂಥಗಳು ಬೌದ್ಧ ಮತ್ತು ಜೈನ ಮತಗಳಿಗೆ ನಾಸ್ತಿಕ ಮತಗಳೆಂದು ಹಣೆಪಟ್ಟಿ ಕಟ್ಟಿ ಅವರ ವಿರುದ್ಧ ಸಂಘಟಿಸಿ ಹೋರಾಡಿದಂತೆ, ಇಂದೂ ಸಹ ಹಿಂದುಳಿದ ಕೆಳವರ್ಗದವರ ಸಂಸ್ಕೃತಿಯ ನಾಶಕ್ಕೆ ಎಂದಿನಂತೆ ಕೆಳವರ್ಗದವರನ್ನೇ ಆಯುಧವನ್ನಾಗಿ ಬಳಸಿಕೊಳ್ಳುವ ಹಿಂದಿನ ಸಂಚನ್ನೇ ಮುಂದುವರಿದ ವರ್ಗ 'ಸನಾತನ ಧರ್ಮದ ರಕ್ಷಣೆಯ' ಹೆಸರಿನಲ್ಲಿ ಯಶಸ್ವಿಯಾಗಿ ಬಳಸುತ್ತಿರುವುದಕ್ಕೆ ಸಮಕಾಲೀನ ರಾಜಕೀಯ ಘಟನೆಗಳೇ ನಿದರ್ಶನವಾಗಿವೆ. ಸಣ್ಣ ಮೀನನ್ನು ದೊಡ್ಡ ಮೀನು ನುಂಗಿ ಬದುಕುವ ಮೃಗೀಯ ಅರಣ್ಯ ನ್ಯಾಯ ಮಾತ್ರ ಧರ್ಮದ ಹೆಸರಿನಲ್ಲಿ ಮುಂದುವರಿಯುತ್ತಿರುವುದು ಒಂದು ದುರಂತವೇ ಸರಿ. ಇದರಿಂದ ಅಲ್ಪ ಸಂಖ್ಯಾತರ ಸಂಸ್ಕೃತಿಯ ಅಭಿವೃದ್ಧಿಯಾಗುವುದೇ ಹೊರತು, ಬಹು ಸಂಖ್ಯಾತ ಕೆಳವರ್ಗದ ಸಂಸ್ಕೃತಿ ನಾಶವಾಗುತ್ತದೆ. ಇದರಿಂದ ಕೇವಲ ಕೆಲವೇ ವರ್ಗದ ಹಿತ ಸಾಧನೆಯಾಗಿ ಭಾರತೀಯ ಸಂಸ್ಕೃತಿಯ ಸಮತೋಲನ ತಪ್ಪುತ್ತದೆ. ಮುಂದೆಂದೂ ತುಂಬಲಾರದ ಕಂದರ ಸೃಷ್ಟಿಯಾಗಿ ಭಿನ್ನತೆಯಲ್ಲಿ ಏಕತೆ ಎಂಬ ಮಾತಿನ 'ಏಕತೆ' ಛಿದ್ರ ಛಿದ್ರವಾಗುವುದರ ಬಗ್ಗೆ ಎಚ್ಚರ ಅಗತ್ಯ

ಎನ್ನಿಸುತ್ತದೆ. ಇಂದಿನ ಧಾರ್ಮಿಕ ಸ್ಥಿತಿಗತಿಗಳ ಒಳಸಂಚಿನಲ್ಲಿ ಸನಾತನ ಧರ್ಮ ತನ್ನ ಇತಿಹಾಸ ಪೂರ್ವದ ಪ್ರಾಚೀನ ಮೂಲ ಸಂಸ್ಕೃತಿಗೆ ಹಿಂತಿರುಗುವುದರಿಂದ, ತನ್ನ ಅಸ್ತಿತ್ವವನ್ನು ಸ್ಥಳೀಯ ಸಂಸ್ಕೃತಿಗಳೊಂದಿಗೆ ಕಡಿದುಕೊಂಡು 'ಇಂಡೋ ಯೂರೋಪಿಯನ್' ಸಂಸ್ಕೃತಿಯಲ್ಲಿ ತನ್ನನ್ನು ತಾನು ಕಂಡುಕೊಳ್ಳುವುದರ ಮೂಲಕ ತಾನು ಅಂತರರಾಷ್ಟ್ರೀಯ ಸದಸ್ಯನಾದೆನೆಂದು ಭ್ರಮಿಸುತ್ತ ಹಿಗ್ಗುವ ಅಪಾಯವಿದೆ. ಅದು ಭಾಷೆಯ ಸೆಲೆ ಹಿಡಿದು ಪ್ರಾಚೀನವಾದ ತನ್ನ ಮಧ್ಯ ಏಷ್ಯಾದ ಸಂಸ್ಕೃತಿಗೆ ಮರಳುವ ಸಂಚಿನ ಬಯಕೆಯಲ್ಲಿ ಹುಟ್ಟಿದ ಮಗು ಮತ್ತೆ ತಾಯಿ ಗರ್ಭ ಸೇರಿ ರಕ್ಷಣೆ ಪಡೆಯುವ ಸುಪ್ತ ಬಯಕೆ ಅಡಕವಾಗಿದೆ. ಅದರ ವಾಸನೆಯನ್ನು ಬಹು ಹಿಂದಿನ ಕಾಲದಲ್ಲಿಯೇ ಹಿಡಿದ ಭಾರತೀಯ ಧರ್ಮದ ತತ್ವ ಶಾಸ್ತ್ರಜ್ಞರಾದ ಪಾಶ್ಚಾತ್ಯ ದೇಶದವರು ಜಗತ್ತಿನ ಧರ್ಮಗಳೆಂದರೆ ಇಸ್ಲಾಂ ಧರ್ಮ, ಕ್ರಿಸ್ತಧರ್ಮ ಮತ್ತು ಬೌದ್ಧಧರ್ಮ-ಮೂರೇ ಎಂದು ಸಾರಿದುದು.

ಭಾರತದಲ್ಲಿನ ಅನ್ಯದೇಶೀಯ ಅಲ್ಪಸಂಖ್ಯಾತರ ಸಂಸ್ಕೃತಿಗಳಿಗೆ ಒಂದು ಪಕ್ಷ ಧಕ್ಕೆ ಬಂದರೆ ಅವು ತಮ್ಮ ಮೂಲ ನೆಲದಲ್ಲಿ ಅಭಿವೃದ್ಧಿಯಾಗುತ್ತವೆ. ಆದರೆ ಬಹು ಸಂಖ್ಯಾತ ಕೆಳವರ್ಗದ ಸಂಸ್ಕೃತಿ ಭಾರತದಲ್ಲಿ ನಾಶವಾದರೆ ವಿಶ್ವದಲ್ಲಿ ಮತ್ತೆಲ್ಲಿಯೂ ತಲೆ ಎತ್ತಲಾರದು. ಅಲ್ಪಸಂಖ್ಯಾತರ ಸನಾತನ ಧರ್ಮ ಬಹು ಸಂಖ್ಯಾತ ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಶತ ಶತಮಾನದಿಂದ ಪ್ರಯತ್ನ ನಡೆಸುತ್ತಿದ್ದರೂ, ಕೆಳವರ್ಗದ ಸಂಸ್ಕೃತಿ ನಾಶವಾಗದೆ ಅಸ್ತಿತ್ವದಲ್ಲಿರುವುದು ಒಂದು ಪವಾಡವೇ ಸರಿ. ಹಾಗಾದರೆ ಕೆಳವರ್ಗದ ಸಂಸ್ಕೃತಿ ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ಇಂದಿನ ಸನಾತನ ಧರ್ಮದ ಮೂಲ ಸ್ವರೂಪ ಸ್ಪಷ್ಟವಾದರೆ ಕೆಳವರ್ಗದ ಸಂಸ್ಕೃತಿ ಸ್ಪಷ್ಟವಾಗುತ್ತದೆ. ಅದೂ ಅಲ್ಲದೆ ದೆವ್ವ ಭೂತ ಮಾಟ ತಂತ್ರ ಮುಂತಾದ ಆಚರಣೆಗಳು ಕೆಳವರ್ಗದ ಸಂಸ್ಕೃತಿಯೆಂದು ಖಂಡಿಸಲ್ಪಟ್ಟವೋ ಅಂಥ ಆಚರಣೆಗಳನ್ನೇ ಇಂದು ಶಿಷ್ಟ ದೇವರುಗಳಾದ ರಾಘವೇಂದ್ರ, ತಿರುಪತಿ ಮತ್ತು ಧರ್ಮಸ್ಥಳಗಳು ಪವಾಡ ಕ್ಷೇತ್ರಗಳಾಗಿ ದೆವ್ವ ಭೂತ ಮಾಟ ತಂತ್ರಗಳಲ್ಲಿ ತೊಡಗಿವೆಯೋ, ಅದನ್ನು ಎತ್ತಿಹಿಡಿಯುವ ಉಚ್ಚವರ್ಗದವರ ವೈರುಧ್ಯದಲ್ಲಿ ಕೆಳವರ್ಗದ ಸಂಸ್ಕೃತಿಯ ಬೇರನ್ನು ಅರಸಬಹುದಾಗಿದೆ. ಹಿಂದೆ ಕೆಳವರ್ಗದ ಸಂಸ್ಕೃತಿಗೆ ವೈದಿಕ ವ್ಯಾಖ್ಯಾನವಿತ್ತು ಪ್ರಚಾರಮಾಡಿದರೆ, ಇಂದು ಬದಲಾದ ಸಾಮಾಜಿಕ ಸ್ಥಿತಿಗತಿಗನುಗುಣವಾಗಿ ವೈದಿಕ ಸಂಸ್ಕೃತಿಗೆ ಕೆಳವರ್ಗದ ಸಂಸ್ಕೃತಿಯ ವ್ಯಾಖ್ಯಾನ ಮಾಡಿ ಪ್ರಚಾರ ಮಾಡುತ್ತಿರುವುದೂ ಕೆಳವರ್ಗದ ಸಂಸ್ಕೃತಿಯ ನಾಶದ ಒಳಸಂಚಿನ ರೂಪಾಂತರವಾಗಿದೆ. ಬೇರು ಸತ್ತ, ಸತ್ವಗುಂದಿರುವ ಕೊಳೆತ, ಮುಖವಾಡದ ಸ್ಥಾಯಿ ಆದರ್ಶ ಮೌಲ್ಯಗಳನ್ನೇ ಮತ್ತೆ ಸನಾತನ ಧರ್ಮದ ಪುನರುತ್ಥಾನದ ಹೆಸರಿನಲ್ಲಿ ಚಲಾವಣೆಗೆ ತರುವ ಸಂಚಿದೆ. ಇದಕ್ಕಾಗಿ ಪುರೋಹಿತ ರಹಿತ ಶೂದ್ರವರ್ಗದಲ್ಲಿ ಮಠಾಧಿಪತಿಗಳನ್ನು ಸೃಷ್ಟಿಸಿ ಪುರೋಹಿತರನ್ನಾಗಿಸಿ ಅನಂತರ ಅವರನ್ನೇ ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಗಾಳವಾಗಿ ಬಳಸುತ್ತಿರುವುದು ಸನಾತನ ಧರ್ಮದ ಮೂಲ ಗುರಿಯಾಗಿದೆ.

ಇಂಥ ಘನ ಉದ್ದೇಶಕ್ಕೆ ಸಂಸ್ಕೃತ ಭಾಷೆಯೂ ಒಂದು ಸಾಧನವಾಗುತ್ತಿರುವುದು ದುರದೃಷ್ಟವೇ ಆಗಿದೆ. ಪ್ರಾಚೀನ ಕಾಲದಲ್ಲಿ ಜ್ಞಾನ ಸಾಧನೆಗೆ ಸಂಸ್ಕೃತ ಅತ್ಯಗತ್ಯವಾಗಿದ್ದಾಗ ಶೂದ್ರರಿಗೆ ದೊರಕದ ವ್ಯವಸ್ಥೆ ಇತ್ತು. ಬದಲಾಗಿರುವ ಸಾಮಾಜಿಕ ಪರಿಸ್ಥಿತಿಯಲ್ಲಿ ಇಂದು ಕೆಳವರ್ಗಕ್ಕೆ ಜ್ಞಾನಸಂಪಾದನೆಗೆ ಇಂಗ್ಲೀಷು ಮತ್ತು ಮಾತೃಭಾಷೆ ಅತ್ಯಗತ್ಯವಾಗಿರುವಾಗ ಅವರಿಗೆ ಸಂಸ್ಕೃತ ಭಾಷೆಯ ಪ್ರಲೋಭನೆ ಒಡ್ಡುತ್ತಿರುವುದರಲ್ಲಿ ಕೆಳವರ್ಗದ ಅಭಿವೃದ್ಧಿಯಂತೂ ಖಂಡಿತ ಇಲ್ಲ. ಸಂಸ್ಕೃತ ಪ್ರಲೋಭನೆಯಲ್ಲಿ ಕೆಳವರ್ಗದವರು ಇಂಗ್ಲೀಷನ್ನು ಕಲಿಯದಂತೆ ತಡೆ ಒಡ್ಡುವ ಮತ್ತು , ಇಂಗ್ಲೀಷು ಮತ್ತು ಸಂಸ್ಕೃತದ ವ್ಯಾಮೋಹದ ಇಕ್ಕಳಕ್ಕೆ ಸಿಕ್ಕಿದ ಕೆಳವರ್ಗ ಮಾತೃಭಾಷೆಯನ್ನು ಮರೆತು ತಮ್ಮತಮ್ಮ ಸಂಸ್ಕೃತಿಯನ್ನೇ ಸಂಪೂರ್ಣ ನಾಶಗೊಳಿಸಿಕೊಳ್ಳುವುದಕ್ಕೆ ಬಲಿಯಾಗತ್ತಿರುವುದು ಒಂದು ವಿಪರ್ಯಾಸವಾಗಿದೆ. ಸಂಸ್ಕೃತ ಭಾಷೆಯನ್ನು ವಿರೋಧಿಸಿದ ವೀರಶೈವ ಮತ್ತು ಶೂದ್ರ ಮತಗಳು ಸಂಸ್ಕೃತ ಪ್ರಚಾರಕ್ಕೆ ಮುಂದಾಗುತ್ತಿರುವುದು, ಸಂಸ್ಕೃತವನ್ನೇ ಮಾತೃಭಾಷೆಯೆಂದು ತಿಳಿದ ವೈದಿಕರಿಗೆ ಇಂಗ್ಲೀಷು ಮಾತೃಭಾಷೆಯಾಗುತ್ತಿರುವುದು ದ್ವಂದಕ್ಕೆ ಸಾಕ್ಷಿಯಾಗಿದೆ. ಹಿಂದಿನ ಸಂಸ್ಕೃತದ ಸ್ಥಾನವನ್ನು ಇಂಗ್ಲೀಷು ಆಕ್ರಮಿಸಿರುವುದಂತೂ ಸ್ಪಷ್ಟ. ಅಲ್ಪಸಂಖ್ಯಾತರ ಭಾಷಾ ಸಮಸ್ಯೆಯನ್ನು ಮುಂದುಮಾಡಿ ಮಾತೃಭಾಷೆಯ ಅಭಿವೃದ್ಧಿಗೆ ಅಡ್ಡಿ ಒಡ್ಡುತ್ತಿರುವುದು ಕೆಳವರ್ಗದ ಸಂಸ್ಕೃತಿಯ ನಾಶದ ಸಂಚಾಗಿರುತ್ತದೆ. ಕೆಳವರ್ಗಕ್ಕೆ ಸಂಸ್ಕೃತ ಭಾಷೆಯ ದಾನ ಉಟ್ಟುತೊಟ್ಟು ಜೀರ್ಣವಾಗಿರುವ ಹಳೆ ಬಟ್ಟೆಯ ದಾನದಂತಿದೆ! ಒಟ್ಟಿನಲ್ಲಿ ಉಚ್ಚವರ್ಗ ಕೆಳವರ್ಗಕ್ಕೆ ಅವರವರ ಮಾತೃಭಾಷೆಯಲ್ಲಿಯಾಗಲಿ ಅಥವಾ ಅನ್ಯಭಾಷೆಯಲ್ಲಿಯಾಗಲಿ ಬೋಧಿಸುವ ಜ್ಞಾನದ ಕೀಲಿಕೈ ಸದಾ ತಮ್ಮಲ್ಲಿ ಭದ್ರವಾಗಿರುವಂತೆ ಪರಿಸರಕ್ಕೆ ತಕ್ಕಂತೆ ಸಮಸ್ಯೆಗಳನ್ನು ಹುಟ್ಟುಹಾಕಿ ಯೋಜನಾ ಸಿದ್ಧತೆಯಿಂದ ಜ್ಞಾನ ನಿಧಿಯ ಅಯೋನಿಜರೆನ್ನಿಸಿಕೊಳ್ಳುವುದರಲ್ಲಿ ಬಲ್ಲಿದವರೆಂದೇ ಹೇಳಬಹುದು.

ಭಾಷೆಗೂ ಧರ್ಮಕ್ಕೂ ಸಂಬಂಧವಿದೆ. ಸಂಸ್ಕೃತ ಮಾಧ್ಯಮದಲ್ಲಿ ಕಲಿತ ಧರ್ಮ ಶ್ರೇಷ್ಠವಾಯಿತು. ಮಾತೃಭಾಷೆಯಲ್ಲಿ ಕಲಿತ ಧರ್ಮ ಕನಿಷ್ಠವಾಯಿತು. ಒಂದೇ ಪಂಥದಲ್ಲಿ ಇಂಥ ಭೇದಕ್ಕೆ ಅವಕಾಶವಾಗಿ ಒಳಪಂಗಡಗಳ ಸೃಷ್ಟಿಗೆ ಭಾಷೆಯೂ ಒಂದು ಪ್ರಧಾನ ಅಂಶವಾಯಿತು. ಜೈನರು ಸಾಮಾನ್ಯ ಜನರನ್ನು ಮತ ಪರಿವರ್ತಿಸುವುದಕ್ಕೆ ಕನ್ನಡವನ್ನು ಬಳಸಿ, ಸಂಸ್ಕೃತವನ್ನು ತಮ್ಮ ವಿದ್ವತ್ತಿನ ಭಾಷೆಯನ್ನಾಗಿ ಉಳಿಸಿಕೊಂಡರು. ವೀರಶೈವರಲ್ಲಿಯೇ ಪಂಚಾಚಾರ್ಯರು ಸಂಸ್ಕೃತವನ್ನೂ, ವಚನ ಸಂಪ್ರದಾಯದ ಬಸವ ಪಂಥದವರು ಕನ್ನಡವನ್ನೂ ಬಳಸಿದರು. ಮಾಧ್ವಮತದಲ್ಲಿಯೂ ಸಂಸ್ಕೃತದ ವ್ಯಾಸಕೂಟ, ಕನ್ನಡದ ದಾಸಕೂಟ ಭೇದವಿದೆ. ಅಂತೆಯೇ ವೈಷ್ಣವ ಪಂಥದಲ್ಲಿ ಆಚಾರ್ಯ ಪರಂಪರೆ ಮತ್ತು ಆಳ್ವಾರರ ಪರಂಪರೆಯೂ, ಶೈವ ಪಂಥದಲ್ಲಿ ನಯನಾರರು ಮತ್ತು ಆಚಾರ್ಯ ಪರಂಪರೆ ಭಾಷೆಯ ಆಧಾರದ ಮೇಲೆ ಬೆಳೆದು ಬಂದಿತು. ಎಲ್ಲಾ ಪಂಥದಲ್ಲಿಯೂ ಕೆಳ ವರ್ಗದವರದ್ದು ಮಾತೃಭಾಷೆ ಕನ್ನಡವಾಗಿ, ಉಚ್ಚ ವರ್ಗದವರದ್ದು ಸಂಸ್ಕೃತ ಭಾಷೆಯಾಗಿರುವುದು ಕಂಡುಬರುತ್ತದೆ. ಇಂಗ್ಲೀಷು ಇತ್ತೀಚೆಗೆ ಸಂಸ್ಕೃತದ ಸ್ಥಾನಮಾನವನ್ನು ಆಕ್ರಮಿಸಿದ್ದರೂ, ಇಂದಿಗೂ ಧರ್ಮ ಮತ್ತು ದೇವರಿಗೆ ಅರ್ಥವಾಗುವ

ಭಾಷೆ ಸಂಸ್ಕೃತವೇ ಆಗಿದ್ದು, ಇಂಗ್ಲೀಷು ವ್ಯವಹಾರದ ಭಾಷೆಯಾಗಿದೆ. ಧರ್ಮ ಮತ್ತು ವ್ಯವಹಾರದಲ್ಲಿ ಕನ್ನಡ ಭಾಷೆ ಮೂರನೆಯ ದರ್ಜೆಯದಾಗಿರುತ್ತದೆ. ಪ್ರಾಚೀನ ಕಾಲದ ಸಂಸ್ಕೃತ ನಿಷ್ಠೆ ಇಂದಿನ ಇಂಗ್ಲೀಷಿನ ನಿಷ್ಠೆಯಾಗಿ ಪರಿವರ್ತಿತವಾಗಿದೆ ಅಷ್ಟೆ. ಕೆಳವರ್ಗದ ಭಾಷೆಯ ಬಗ್ಗೆ ಉಚ್ಚವರ್ಗದವರಿಗೆ ಅನಾಸಕ್ತಿ ಬೆಳೆದು ಬಂದಂತೆ, ಕೆಳವರ್ಗದವರ ಸಂಸ್ಕೃತಿಯ ಬಗ್ಗೆಯೂ ಅಷ್ಟೇ ಅನಾದರ ಹಿಂದಿನಿಂದ ಮೂಡಿತು. ಕೆಳವರ್ಗದವರೊಂದಿಗೆ ವ್ಯವಹರಿಸಲು ಉಚ್ಚವರ್ಗ ಕನ್ನಡದಲ್ಲಿಯೇ ಶಿಷ್ಟ ಭಾಷೆಯೊಂದನ್ನು ಸಂಸ್ಕೃತದೊಂದಿಗೆ ಕೃಷಿಮಾಡಿಕೊಂಡು ಬಳಸಿತು. ಇದರಿಂದ ಶಿಷ್ಟ ಮತ್ತು ಗ್ರಾಮ್ಯಭಾಷೆಗಳ ಕೃಷಿಯಾಯಿತು. ಭಾಷೆಗೂ ವರ್ಗ ಮತ್ತು ಜಾತಿಗೂ ಗಂಟು ಬಿದ್ದದ್ದು ಭಾರತದ ಬದುಕಿನಲ್ಲಿ ಒಂದು ದುರಂತವೇ ಆಗಿದೆ. ಇದರಿಂದ ಸ್ಥಾಯಿಯಾದ ಭೇದ ಜನಾಂಗದಲ್ಲಿ ಸೃಷ್ಟಿಯಾಗಿ ಒಂದೇ ಪಂಥದ ಹೃದಯ ಹೃದಯಗಳು ಹತ್ತಿರ ಬರದೆ ದೂರ ದೂರ ಸರಿದವು. ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿಯೂ, ಬದಲಾದ ಭಾಷೆಯಿಂದಲೂ ಹಿಂದಿದ್ದ ಸ್ಥಿತಿಯೇ ಮುಂದುವರಿಯಿತು.

೨

ನರಬಲಿಯಿಂದ ಆತ್ಮಬಲಿಯ ತನಕ ಶಿವಭಕ್ತರಲ್ಲಿ ಹಲವು ಪಂಥಗಳಿವೆ. ಶಿವಭಕ್ತರು ಎಂದೊಡನೆ ಶೈವ ಸಿದ್ಧಾಂತ ಅಥವಾ ವೀರಶೈವ ತತ್ತ್ವಮಾರ್ಗಿಗಳು ಎಂದು ತಿಳಿಯುವುದು ತಪ್ಪು. ಶಿವ ಒಬ್ಬನೇ ಅಲ್ಲ. ಹಲವು ಶಿವರಿದ್ದಾರೆ. ಅಂದರೆ ಹಲವು ಸ್ತರದ ಸಂಸ್ಕೃತಿಯ ಜನರ ಕಲ್ಪನೆಯ ಶಿವರಿದ್ದಾರೆ. ಅವರ ಆರಾಧನೆಯ ಮಾರ್ಗಗಳು ಭಿನ್ನ ಭಿನ್ನವಾಗಿವೆ. ಭಕ್ತಿ ಪಂಥ ಆರಂಭ ಕಾಲಕ್ಕಿಂತ ಭಿನ್ನವಾಗಿ, ಕ್ರಮೇಣ ಅದೂ ಒಂದು ಸಿದ್ಧಾಂತ ಸ್ವರೂಪ ಪಡೆಯಲು ಯತ್ನಿಸಿತು. ಭಕ್ತಿ ಪಂಥ ಆರಂಭದಲ್ಲಿ ಕೆಳವರ್ಗದ ಸಂಸ್ಕೃತಿಗೆ ಹತ್ತಿರ ಹತ್ತಿರವಾಗಿತ್ತು. ಸಮಾಜ ಸಂಕೀರ್ಣಗೊಂಡಂತೆ, ಯಜ್ಞಯಾಗಾದಿಗಳ ಹಿಂಸೆ ಜನತೆಯ ತೀವ್ರ ವಿರೋಧಕ್ಕೆ ತುತ್ತಾದಂತೆ, ಜ್ಞಾನದ ಶುಷ್ಕಮಾರ್ಗ ತೀವ್ರ ಖಂಡನೆಗೆ ಒಳಗಾಗಿ, ಉಚ್ಚವರ್ಗ ಸಾಮಾನ್ಯರ ಜನಪ್ರಿಯ ಭಕ್ತಿ ಪಂಥದತ್ತ ತಿರುಗಿತು. ಭಕ್ತಿ ಪಂಥ ಜ್ಞಾನ ಮತ್ತು ಕರ್ಮ ಸಿದ್ಧಾಂತ ತಾತ್ತ್ವಿಕ ಚಿಂತನೆಗೆ ವಿರೋಧಿಯಾದುದು. ಕರ್ಮ ವಿಧಿಗೆ ಅಪಾರ ಸಂಪತ್ತು ಬೇಕು. ಜ್ಞಾನ ಸಂಪಾದನೆಗೆ ಹುಟ್ಟಿನ ಶ್ರೇಷ್ಠತೆ ಅಗತ್ಯ. ಎರಡೂ ಇಲ್ಲದ ಸಾಮಾನ್ಯ ಜನ ಭಕ್ತಿಯನ್ನು ಆರಂಭದಲ್ಲಿ ಜ್ಞಾನ ಮತ್ತು ಕರ್ಮ ವಿರೋಧಿಯನ್ನಾಗಿ ಬಳಸಿದರು. ಬುಡಕಟ್ಟಿನವರ ಮಾಂತ್ರಿಕ ಧರ್ಮಕ್ಕೆ ಭಕ್ತಿ ಹತ್ತಿರವಾಗಿತ್ತು. ಅಂಥ ಭಕ್ತಿಯ ಜನಪ್ರಿಯತೆಯ ಮಹತ್ವವನ್ನು ಮನಗಂಡ ಉಚ್ಚವರ್ಗದವರು ಭಕ್ತಿಯಲ್ಲಿ ಕರ್ಮ ಮತ್ತು ಜ್ಞಾನ ಮಾರ್ಗವನ್ನು ರೂಪಾಂತರದಿಂದ ತಂದು ಭಕ್ತಿ ಪಂಥವನ್ನು ಜೈನ ಮತ್ತು ಬೌದ್ಧ ಮತಗಳ ವಿರುದ್ಧವಾಗಿ ಬಳಸಿದ್ದೇ ಅಲ್ಲದೆ, ಸಾಮಾನ್ಯ ವರ್ಗದವರನ್ನು ಶಾಶ್ವತವಾಗಿ ಗುಲಾಮರನ್ನಾಗಿಸುವ ಸಾಧನವನ್ನಾಗಿ ಉಪಯೋಗಿಸಿಕೊಂಡರು. ಅಲ್ಲಿಯೂ ಸಗುಣ ನಿರ್ಗುಣ ಉಪಾಸನೆಯನ್ನು ತಂದರು. ಸಗುಣೋಪಾಸಕರು ಅನಕ್ಷರಸ್ಥರಾದರು. ನಿರ್ಗುಣೋಪಾಸಕರು ಜ್ಞಾನಮಾರ್ಗಿಗಳಾದರು. ಸಾಕಾರ ಪೂಜಕರು ಸಾಮಾನ್ಯ ವರ್ಗವಾಯಿತು. ನಿರಾಕಾರ ಪೂಜಕರು ಉತ್ತಮ ವರ್ಗವಾಯಿತು. ಎಲ್ಲದಕ್ಕಿಂತ ಮುಖ್ಯವಾಗಿ ಸಾಕಾರ

ನಿರಾಕಾರ-ಎರಡನ್ನೂ ಮೀರಿದ ಅನುಭಾವವೇ ದೊಡ್ಡದು ಎಂದು ಸಾರಿದರು. ಆತ್ಮ ಸಾಕ್ಷಾತ್ಕಾರಕ್ಕೆ ಮೌನವೇ ಮಹಾಸ್ತುತಿ ಎಂದರು. ಅರಿತು ಮೌನವಾದವನಿಗೂ, ಅರಿಯದೇ ಮೌನವಾದವನಿಗೂ ಭಿನ್ನವಿಲ್ಲ. ಇಂಥ ಮಾತುಗಳಿಂದ ಭಕ್ತಿ ಪಂಥದಲ್ಲಿ ಗೊಂದಲ ಸೃಷ್ಟಿಸಿ ಹೇಗೆ ಅಂದರೆ ಹಾಗೆ ನುಣಿಚಿಕೊಳ್ಳುವ ಯುಕ್ತಿಯನ್ನು ಭಕ್ತಿ ಪಂಥದಲ್ಲಿ ಬೆರಸಿದರು. ಸಾಮಾನ್ಯರ ಸರಳ ಮಾತಿನ, ನಿತ್ಯಾನುಭವದ ನಡವಳಿಕೆಯಲ್ಲಿ ವ್ಯಕ್ತವಾಗುತ್ತಿದ್ದ ಭಕ್ತಿಯನ್ನು ಜಟಿಲಗೊಳಿಸಿ, ವ್ಯಾಖ್ಯಾನಗಳ ಬೇಲಿ ಸೃಷ್ಟಿಸಿ, ಮಾತೃಭಾಷೆಯ ಭಕ್ತಿ ಗ್ರಂಥಗಳನ್ನು ಸಂಸ್ಕೃತ ಭಾಷೆಯಲ್ಲಿ ಬರೆದು ಸರಳವಾದ ಸಾಮಾನ್ಯರ ಭಕ್ತಿ ಸಾಮಾನ್ಯರಿಗೇ ಅರ್ಥವಾಗದಂತೆ ಮಾಡಿ ಉಚ್ಚವರ್ಗದವರು ಭಕ್ತಿಯನ್ನು ಮತ್ತೆ ಗುತ್ತಿಗೆಯ ಬಂಡವಾಳವನ್ನಾಗಿಸಿಕೊಂಡರು. ಶಿವಭಕ್ತರ ವಿವಿಧ ಪಂಥಗಳನ್ನು ಏಕದೇವತೋಪಾಸನೆಯ ಸೂತ್ರದಿಂದ ಸಂಘಟಿಸಿ, ದೀಕ್ಷಾಬದ್ಧರನ್ನಾಗಿಸಿ, ಶಿವಸಹೋದರ ಸಮಾಜವೊಂದನ್ನು ರಚಿಸುವ ಮೂಲ ಉದ್ದೇಶದಿಂದ ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಚಳುವಳಿಯೊಂದು ಕರ್ನಾಟಕದಲ್ಲಿ ತೀವ್ರಗೊಂಡಿತು. ಅಂಥ ಒಂದು ಕಟ್ಟಿಗೆ ಸಿಕ್ಕದ ಶಿವಭಕ್ತರು ಭವಿಗಳಾದರು. ದೀಕ್ಷಾಬದ್ಧರಾಗಿಯೂ ಆಚರಣೆ ತಪ್ಪಿದ ವೀರಶೈವರು ಅನಾಚಾರಿಗಳಾದರು. ಅನ್ಯ ಮತೀಯ ಕುಟುಂಬಗಳಲ್ಲಿ ರಹಸ್ಯವಾಗಿ ಶಿವಭಕ್ತ ಸಾಧಕರಾದ ಶಿವ ಪೂಜಾ ನಿಷ್ಠಾವಂತರು ಗುಪ್ತಭಕ್ತರಾದರು.

ಕರ್ನಾಟಕದಲ್ಲಿ ಮುಖ್ಯವಾಗಿ ಜೈನರ ಚಂಪೂ ಮತ್ತು ಸಾಂಗತ್ಯ, ವೀರಶೈವರ ವಚನ ಮತ್ತು ಷಟ್ಪದಿ, ವೈಷ್ಣವರ ಕೀರ್ತನೆ ಮತ್ತು ಷಟ್ಪದಿ ಸಾಹಿತ್ಯಗಳಲ್ಲಿ, ವೀರಶೈವ ಸಾಹಿತ್ಯದಲ್ಲಿ ಮಾತ್ರ 'ಗುಪ್ತಭಕ್ತಿ'ಗೆ ಅವಕಾಶವಾಯಿತು. ಮೂರೂ ಮತಗಳಲ್ಲಿ ಮತಾಂತರಕ್ಕೆ ಅವಕಾಶವಿದ್ದರೂ, ಜೈನಮತದಲ್ಲಿ ಜೈನಮತಾಂತರಿಯಾದವನು ತನ್ನ ಹಿಂದಿನ ಶೈವ ಮತ್ತು ವಿಷ್ಣು ಪೂಜೆಯನ್ನು ಮುಂದುವರಿಸಿಕೊಂಡು ಹೋಗಿರುವ ಸಂದರ್ಭಗಳು ಬರುತ್ತವೆ:

ಒಂದೆಸೆಯೊಳ್ ಜಿನ ಬಿಂಬಮ
ನೊಂದೆಸೆಯೊಳ್ ಲಿಂಗ ವಿಷ್ಣು ಬಿಂಬಮನವನಂ
ತೊಂದೆಡೆಯೊಳ್ಪೂಜಿಸುವಾ
ಸಂದೇಹಿಗೆ ಜೈನನೆಂಬ ಪೆಸರೆಂತೆಸೆಗುಂ॥ ಸಮಯ ಪರೀಕ್ಷೆ : ೪-೧೨೧

ಲಿಂಗ ಮತ್ತು ವಿಷ್ಣು ಪೂಜೆಯನ್ನು ಮಾಡುವ ಜೈನ ಎಂದೂ ಉತ್ತಮ ಜೈನನಾಗುವುದಿಲ್ಲ. ಅವನ ಸಂಶಯ ಪ್ರವೃತ್ತಿ ಸಮ್ಯಕ್‌ಜ್ಞಾನವನ್ನು ಗಳಿಸಿಕೊಡುವುದಿಲ್ಲ. ಅವನು ಸಂದೇಹದಲ್ಲಿಯೇ ಸರ್ವನಾಶ ಹೊಂದುತ್ತಾನೆ. ಅದನ್ನೇ ಭಗವದ್ಗೀತೆಯಲ್ಲಿ 'ಸಂಶಯಾತ್ಮ ವಿನಶ್ಯತಿ' ಎಂದು ವರ್ಣಿಸಿದೆ. ಕೀರ್ತನೆಗಳಲ್ಲಿ ಬರುವ ವೈಷ್ಣವ ಭಕ್ತಿ ಮುಖ್ಯವಾಗಿ ಮಧ್ವ ಮತ ಸಂಪ್ರದಾಯದ್ದು. ಅದು ಸಂಪೂರ್ಣ ವರ್ಣ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿದೆ. ಅದರಲ್ಲಿ ಸ್ಮಾರ್ತ ಮಾಧ್ವನಾಗಿ ಮತಾಂತರಿಯಾಗಬಹುದೇ ಹೊರತು, ಶೂದ್ರ ಮತಾಂತರಿಯಾಗಿ ಸ್ಮಾರ್ತ

ಅಥವಾ ಮಾಧ್ವನಾಗುವಂತಿಲ್ಲ. ಆದರೆ ಶೂದ್ರ ವೈಷ್ಣವನಾಗಿ ಶ್ರೀ ಹರಿಯ ಸೇವೆ ಸಲ್ಲಿಸಲು ಯಾವ ಅಡ್ಡಿಯೂ ಇರದಿರುವುದಕ್ಕೆ ಕೀರ್ತನಕಾರ ಕನಕದಾಸನೇ ಸಾಕ್ಷಿ. ಕೀರ್ತನೆಗಳಲ್ಲಿ ಎಲ್ಲಿಯೂ 'ಗುಪ್ತಭಕ್ತಿ'ಯ ಮಾತು ಬರುವುದಿಲ್ಲ. ಜೈನ ಸಾಹಿತ್ಯದಲ್ಲಿ ಜೈನನಾದವನು ಶೈವ ಮತ್ತು ವೈಷ್ಣವ ಪೂಜೆ ಮುಂದುವರಿಸಿದಾಗ ನಿಂದೆಗೆ ಗುರಿಯಾಗುವನೇ ಹೊರತು, ಅನ್ಯಮತೀಯರಲ್ಲಿ ಜೈನನಾಗಿ ಮುಂದುವರಿಯುವ ಅವಕಾಶ ಕಡಿಮೆಯಾಗಿದ್ದು, ಜೈನ ಸಾಹಿತ್ಯದಲ್ಲಿ ಗುಪ್ತ ಭಕ್ತಿಗೆ ಅವಕಾಶವಿಲ್ಲ. ವೈಷ್ಣವ ಸಾಹಿತ್ಯವೂ ಸಹ ವರ್ಣ ವ್ಯವಸ್ಥೆಯ ಮೇಲೆ ನಿಂತಿದ್ದು ಅದರಲ್ಲಿ ಗುಪ್ತಭಕ್ತಿಯ ಪ್ರಸಂಗ ಬರುವುದಿಲ್ಲ . ಗುಪ್ತಭಕ್ತಿಯ ಮಾತು ವೀರಶೈವ ಸಾಹಿತ್ಯಕ್ಕೆ ವಿಶಿಷ್ಟವಾದುದು. ವೀರಶೈವ ಸಾಹಿತ್ಯದಲ್ಲಿ ಅನ್ಯ ಮತೀಯರಲ್ಲಿ ರಹಸ್ಯವಾಗಿ ಶಿವಭಕ್ತಿಯನ್ನು ಕಾಪಾಡಿಕೊಂಡು ಬರುವ, ಶಿವಭಕ್ತನಾಗಿಯೇ, ಯಾವುದೋ ಸಂದರ್ಭದಲ್ಲಿ ವ್ರತಸ್ವೀಕರಿಸಿ, ಯಾರಿಗೂ ತಿಳಿಯದಂತೆ ಗುಟ್ಟಾಗಿ ವ್ರತವನ್ನು ಕಾಯ್ದುಕೊಂಡು ಶಿವನ ಪರೀಕ್ಷೆಗೆ ಒಳಗಾಗಿ ಜಯಿಸಿ ಅನುಗ್ರಹಕ್ಕೆ ಪಾತ್ರರಾಗುವ ಗುಪ್ತ ಭಕ್ತರ ವರ್ಣನೆ ಬರುತ್ತದೆ.

ಗುಪ್ತ ಸಮಾಜಗಳು ನಮ್ಮಲ್ಲಿ ತುಂಬಾ ಪ್ರಾಚೀನವಾದುವು. ಅಂಥ ಗುಪ್ತ ಸಮಾಜದಲ್ಲಿ ಶಿವಭಕ್ತಿ ಸಂಪ್ರದಾಯ ಪ್ರಧಾನವಾದುದು. ಯಾವುದೇ ಜಾತಿಗೆ ಸೇರಿದ ವ್ಯಕ್ತಿ ರಹಸ್ಯವಾದ ದೀಕ್ಷೆಯಿಂದ ಗುಪ್ತಸಮಾಜದ ಸದಸ್ಯನಾಗಿ ಗುಪ್ತವಾಗಿ ಸಾಧನೆಯನ್ನು ಮುಂದುವರಿಸಿಕೊಂಡು ಹೋಗಲು ಅವಕಾಶವುಂಟು. ಗುಪ್ತ ಸಮಾಜದಲ್ಲಿ ಧಾರ್ಮಿಕ ವಿಧಿಯ ಸಾಧನೆ ರಹಸ್ಯವಾದುದು. ವ್ಯಕ್ತಿ ಲೌಕಿಕವಾಗಿ ಯಾವುದೇ ಜಾತಿಗೆ ಸೇರಿದ್ದರೂ, ಗುಪ್ತ, ಸಮಾಜದ ಧಾರ್ಮಿಕ ವಿಧಿಯಲ್ಲಿ ಮಾತ್ರ ಜಾತಿಯ ಸಂಬಂಧ ಬರದೆ ಜಾತ್ಯಾತೀತ ಸಾಧನೆಗೆ ಅವಕಾಶವುಂಟು. ಗುಪ್ತ ಸಮಾಜದಲ್ಲಿ ಮತಾಂತರದ ಪ್ರಶ್ನೆ ಬರುವುದಿಲ್ಲ. ಗುಪ್ತ ಸಮಾಜದಲ್ಲಿ ದೀಕ್ಷಾಬದ್ಧನಾಗಿ ಜಾತ್ಯಾತೀತ ಶಿವ ಸಹೋದರನಾದವನು, ಲೌಕಿಕದಲ್ಲಿ ಮಾತ್ರ ತನ್ನ ಹುಟ್ಟಿನ ಜಾತಿಯ ಕಟ್ಟು ಕಟ್ಟಳೆಗೇ ಒಳಗಾಗಿ ಬದುಕನ್ನು ಮುಂದುವರಿಸುತ್ತಾನೆ. ಅಂಥ ಗುಪ್ತಭಕ್ತಿಯ ಸಂಪ್ರದಾಯ ವೀರಶೈವರಲ್ಲಿಯೂ ಮುಂದುವರೆದಿರುವುದು ಸಾಧ್ಯ ಎನ್ನಿಸುತ್ತದೆ. ಗುಪ್ತ ಸಮಾಜದಲ್ಲಿ ದೀಕ್ಷೆ ಮತ್ತು ಸಾಧನೆ ಅಂತರಂಗವಾಗಿ ರಹಸ್ಯವಾಗಿದ್ದರೆ, ವೀರಶೈವರಲ್ಲಿ ಬಹಿರಂಗವಾಗಿರುತ್ತದೆ. ಗುಪ್ತ ಸಮಾಜದಲ್ಲಿ ದೇಹದ ಮೇಲೆ ಇಷ್ಟಲಿಂಗ ಧರಿಸುವ ಪದ್ಧತಿ ಇರುವುದಿಲ್ಲ. ವೀರಶೈವರಲ್ಲಿ ಇಷ್ಟಲಿಂಗ ಧರಿಸುವ ಪದ್ಧತಿ ರೂಢಿಗೆ ಬಂದಿತು. ಗುಪ್ತ ಭಕ್ತರು ರುದ್ರಾಕ್ಷಿಯನ್ನು ಧರಿಸಬಹುದು. ಗುಪ್ತ ಸಮಾಜ ಮತ್ತು ವೀರಶೈವ ಸಮಾಜ- ಎರಡರಲ್ಲಿಯೂ ಸಹಜ ಸಾಧನೆಯಿಂದ ಅನುಭಾವಿಯಾಗಿ ಸ್ವಯಾನುಭವಿಯಾಗುವುದೇ ಅಂತಿಮ ಗುರಿಯಾಗಿರುತ್ತದೆ. ಈ ಎರಡೂ ಪಂಥಗಳಲ್ಲಿಯೂ ಹುಟ್ಟಿನ ಸಂಬಂಧ ಕಡಿದುಕೊಂಡು ದೀಕ್ಷಾಬದ್ಧ ಶಿವ ಸಹೋದರರಾಗಲು ಅವಕಾಶವಿದೆ. ಗುಪ್ತ ಸಮಾಜದಲ್ಲಿ ಮಾತ್ರ ದೀಕ್ಷಾಬದ್ಧ ಸದಸ್ಯ ತನ್ನ ಕುಟುಂಬದಲ್ಲಿಯೇ ಉಳಿದು, ಅದರ ಆಚರಣೆಗಳಿಗೆ ಬದ್ಧನಾಗಿ ಮುಂದುವರಿಯುವ ಅವಕಾಶವಿದ್ದರೆ, ವೀರಶೈವ ಪದ್ಧತಿಯಂತೆ ದೀಕ್ಷಾಬದ್ಧ ಸದಸ್ಯ ತನ್ನ ಕುಟುಂಬದ ಪೂರ್ವ ಸಂಬಂಧವನ್ನು ಸಂಪೂರ್ಣವಾಗಿ

ಕಡಿದುಕೊಳ್ಳಬೇಕಾಗುತ್ತದೆ. ದೀಕ್ಷೆಯಿಂದ ಮಾತ್ರ ಶಿವ ಸಹೋದರರಾಗುತ್ತಾರೆಯೇ ಹೊರತು, ದೀಕ್ಷೆಯಿಲ್ಲದ ತಂದೆ ತಾಯಿ ಬಂಧು ಬಳಗ ಯಾರೇ ಆದರೂ ಭವಿಗಳಾಗುತ್ತಾರೆ. ಭವಿಗಳ ಜೊತೆ ವ್ಯವಹಾರ ನಿಷಿದ್ಧ. ವೀರಶೈವರಲ್ಲಿ ಗುಪ್ತಭಕ್ತಿಗೆ ಅವಕಾಶವಾದದ್ದು ಎರಡೂ ಪಂಥಗಳ ಸಂಬಂಧಕ್ಕೆ ಸಾಕ್ಷಿಯಾಗಿರುತ್ತದೆ. ಈ ಎರಡೂ ಪಂಥಗಳ ಮತ್ತಷ್ಟು ಅಧ್ಯಯನದಿಂದ ವಚನ ಸಾಹಿತ್ಯದ ಅರಿವಿನ ಮೇಲೆ ಹೊಸ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಗುಪ್ತ ಸಮಾಜದಲ್ಲಿ ವ್ಯಕ್ತಿಯ ಹುಟ್ಟು ಮತ್ತು ವೃತ್ತಿಗೆ ದೀಕ್ಷೆ ಅಡ್ಡಿ ಬರುವುದಿಲ್ಲ. ಆದರೆ ವೀರಶೈವ ಸಮಾಜದ ದೀಕ್ಷೆಯಲ್ಲಿ ಹುಟ್ಟು ಮತ್ತು ವೃತ್ತಿ ಅಡ್ಡಿ ಬರುತ್ತದೆ. ವೀರಶೈವ ದೀಕ್ಷಾ ಬದ್ಧನಾದ ಅನಂತರ ಪೂರ್ವ ಸಂಬಂಧವನ್ನು ಕಡಿದುಕೊಳ್ಳಲೇಬೇಕಲ್ಲದೆ, ಭವಿಯ ಕೈಕೆಳಗೆ ದುಡಿದು ಅನ್ನವನ್ನು ತಿನ್ನಬಾರದು. ವೀರಶೈವ ಭಕ್ತ ಜೋಳಾವಾಳಿಯವನಾಗುವುದಿಲ್ಲ, ವೇಳಾವಾಳಿಯವನಾಗಿರುತ್ತಾನೆ. ಆದರೆ ಗುಪ್ತ ಸಮಾಜದ ಸದಸ್ಯ ಜೋಳಾವಾಳಿ ಮತ್ತು ವೇಳಾವಾಳಿಯವನಾಗಿರುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ. ಶಂಕರಾಚಾರ್ಯರ ಅದ್ವೈತ ಪದ್ಧತಿಯ ತಾಂತ್ರಿಕ ಸಾಧನೆಯನ್ನು ಗುಪ್ತ ಸಮಾಜದ ಸಾಧನೆಯಲ್ಲಿ ಗುರುತಿಸಬಹುದಾಗಿದೆ. ವೈದಿಕ ಮತ್ತು ಶೈವ ಪದ್ಧತಿಗಳ ಸಾಮರಸ್ಯದಿಂದ ಗುಪ್ತ ಸಮಾಜದ ತಾಂತ್ರಿಕ ಸಾಧನೆಯಲ್ಲಿ ವಿಶಿಷ್ಟ ಆಚರಣೆಗಳು ಅಸ್ತಿತ್ವಕ್ಕೆ ಬಂದುವು. ಬ್ರಾಹ್ಮಣ ಮತ್ತು ಅಂತ್ಯಜ ಗುಪ್ತ ಸಮಾಜದ ದೀಕ್ಷಾಬದ್ಧ ಸದಸ್ಯರಾಗಿ ಆಧ್ಯಾತ್ಮಿಕ ಸಮಾನತೆಯನ್ನು ಹೊಂದುವ ಕೆಲವು ಆಚರಣೆಗಳು ಗುಪ್ತ ಸಮಾಜದಲ್ಲಿ ಮಾತ್ರ ಇಂದಿಗೂ ಇವೆ. ವೀರಶೈವ ಮುಂತಾದ ಸುಧಾರಿತ ಮತಗಳಲ್ಲಿ ಸಾಮಾಜಿಕ ಅಸಮಾನತೆಯ ಮೇಲೆ ಆಧ್ಯಾತ್ಮಿಕ ಸಮಾನತೆಯ ಬೋಧನೆಯಾದರೆ, ಗುಪ್ತ ಸಮಾಜದಲ್ಲಿ ಮಾತ್ರ ಸಾಮಾಜಿಕ ಸಮಾನತೆಯ ಜೊತೆ ಜೊತೆಯಲ್ಲಿಯೇ ಆಧ್ಯಾತ್ಮಿಕ ಸಮಾನತೆಯೂ ಸಾಧಿತವಾಗುವುದು. ಗುಪ್ತ ಸಮಾಜದಲ್ಲಿ ಹೆಣ್ಣು ಅಥವಾ ಹೊಲೆಯ ಗುರುವಾಗಿ ದೀಕ್ಷೆ ಕೊಡುವ ಅಧಿಕಾರವನ್ನು ಪಡೆಯುವ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಆದರೆ ಸುಧಾರಿತ ಮತಗಳಲ್ಲಿ ಕೇವಲ ಮತಾಂತರಕ್ಕೆ ಅವಕಾಶವಿದ್ದು, ಉಚ್ಚವರ್ಗದಿಂದ ಮತಾಂತರಿಯಾದವನಿಗೆ ಮಾತ್ರ ದೀಕ್ಷೆ ಕೊಡುವ ಹಕ್ಕಿನ ಗುತ್ತಿಗೆಯಾಗುತ್ತದೆ. ಸಮಾನತೆ ಆದರ್ಶವಾಗುತ್ತದೆಯೇ ಹೊರತು ಆಚರಣೆಯಲ್ಲಿ ಮಾತ್ರ ಬರುವುದಿಲ್ಲ. ಆದರೆ ಗುಪ್ತ ಸಮಾಜದಲ್ಲಿ ಸಮಾನತೆ ಎನ್ನುವುದು ಆಚರಣೆಯಲ್ಲಿ ಬರುವ ಒಂದು ವಾಸ್ತವಿಕ ಅಂಶವೇ ಹೊರತು ಆದರ್ಶವಲ್ಲ. ಆದರೆ ಗುಪ್ತ ಸಮಾಜ ಮಾತ್ರ ಸಮಾಜದ ಮನ್ನಣೆ ಗಳಿಸಲಿಲ್ಲ. ಗುಪ್ತ ಸಮಾಜ ಮಾತ್ರ ವಿಶ್ವವ್ಯಾಪಿಯಾಗಿ ವ್ಯಾಪಿಸುತ್ತಿರುವುದನ್ನಂತೂ ಯಾರೂ ಅಡ್ಡಿಪಡಿಸುವುದು ಸಾಧ್ಯವೇ ಇಲ್ಲ. ಸುಧಾರಿತ ಮತಗಳು ಬ್ರಾಹ್ಮಣೀಕರಣಕ್ಕೆ ತುತ್ತಾಗಿ ಕ್ರಮೇಣ ಸತ್ವ ಕಳೆದುಕೊಂಡರೆ, ಗುಪ್ತ ಸಮಾಜ ಮಾತ್ರ ಶೂದ್ರೀಕರಣವನ್ನೇ ಕೇಂದ್ರ ಬಿಂದುವನ್ನಾಗಿಸಿಕೊಂಡು ಇನ್ನೂ ಜೀವಂತವಾಗಿ ಉಳಿದಿರುವುದು ಸೋಜಿಗವಾಗಿದೆ. ಗುಪ್ತ ಸಮಾಜದಲ್ಲಿ ಮಾತ್ರ ಊರ್ಧ್ವಮುಖ ಸಾಮಾಜಿಕ ಬದಲಾವಣೆಗೆ ಅವಕಾಶವಿರುವುದು. ಗುಪ್ತ ಸಮಾಜದ ಕೆಲವು ಆಚರಣೆಗಳು ಜಿಗುಪ್ಸೆ ತಂದರೂ ಸಾಧನೆಯಿಂದ ಸಿದ್ಧಿಯತನಕ ಮಾನವೀಯ ಮೌಲ್ಯಗಳ ಸಾಧನೆಯನ್ನು ಮಾತ್ರ ಯಾರೂ ಅಲ್ಲಗಳೆಯಲಾರರು.

ಅದರಲ್ಲಿಯೂ ಗುಪ್ತ ಸಮಾಜದ ಸಾತ್ವಿಕ ಆಚರಣೆಯ ಒಳಪಂಗಡ ಮಾತ್ರ ಸಮಾನತೆಯ ಮಾನವೀಯ ಮೌಲ್ಯದ ಬದುಕಿನ ಬತ್ತದ ಜಲದ ಕಣ್ಣಾಗಿರುತ್ತದೆ. ಸುಧಾರಿತ ಮತಗಳಲ್ಲಿ ಜಾತ್ಯಾತೀತ ಸಾಧನೆ ಒಂದು ಆದರ್ಶವಾಗಿ ಕ್ರಾಂತಿ ಕಲ್ಪನೆಯಾದರೆ, ಗುಪ್ತ ಸಮಾಜದಲ್ಲಿ ಜಾತ್ಯಾತೀತ ಸಾಧನೆ ಒಂದು ವಾಸ್ತವಿಕ ಅಂಶವಾಗಿ ಸಂಪ್ರದಾಯವಾಗಿದೆ.

ಹನ್ನೆರಡನೆಯ ಶತಮಾನದ ವಚನಕಾರರೆಲ್ಲರೂ ಶಿವಭಕ್ತರು. ಆದರೆ ಶಿವಭಕ್ತರಾದ ವಚನಕಾರರೆಲ್ಲರೂ ವೀರಶೈವ ಸಮಾಜದ ದೀಕ್ಷಾಬದ್ಧ ಸದಸ್ಯರಲ್ಲ. ಹಲವು ವಚನಕಾರರು ಮತ್ತು ವೀರಶೈವ ತತ್ವಗಳೆರಡನ್ನೂ ಅಧ್ಯಯನ ಮಾಡುವುದರಿಂದ ಈ ಅಂಶವು ಸ್ಪಷ್ಟವಾಗುತ್ತದೆ. ವಚನಕಾರರೆಲ್ಲರೂ ವೀರಶೈವರು ಎಂಬ ತಪ್ಪು ಅಭಿಪ್ರಾಯ ವಿದ್ವಾಂಸರಲ್ಲಿದೆ. ಆದರೆ ಅನ್ಯಮತೀಯರಾಗಿದ್ದು, ವಚನ ರಚನೆಯ ಪರಿಸರದಲ್ಲಿ ವಚನ ರಚನೆ ಮಾಡಿರುವ, ಅನ್ಯ ದೇವತೋಪಾಸನೆಯ ಶಿವಭಕ್ತ ವಚನಕಾರರ ಸಂಪ್ರದಾಯವೊಂದು ಮುಂದುವರಿದಿರುವುದನ್ನು ಗುರುತಿಸಬಹುದು. ಇಂಥ ವೀರಶೈವ ಸಮಾಜದ ಸದಸ್ಯರಲ್ಲದ ಶಿವಭಕ್ತರನ್ನೂ ಗುಪ್ತ ಭಕ್ತರೆಂದು ವೀರಶೈವರು ಕರೆದಿದ್ದಾರೆ. ಅನ್ಯ ಮತೀಯರಾಗಿದ್ದು ಶಿವಭಕ್ತಿಯನ್ನು ರಹಸ್ಯವಾಗಿ ಸಾಧನೆ ಮಾಡಲು ವೀರಶೈವರಲ್ಲಿ ಅವಕಾಶವಿದೆ. ಏಕೆಂದರೆ ಒಂದಲ್ಲ ಒಂದು ದಿನ ಅವರು ಶಿವಭಕ್ತರೇ ಆಗುತ್ತಾರೆ ಎಂಬ ಅಚಲ ವಿಶ್ವಾಸವಿದ್ದು, ಅಂತಹವರನ್ನು ಗುರುಭಕ್ತರೆಂದು ಕರೆಯುವುದು ಸೂಕ್ತವಾಗಿದೆ. ಆದರೆ ಶಿವಭಕ್ತರಾಗಿದ್ದೂ ಅನ್ಯದೇವತೋಪಾಸಕ ಶಿವಭಕ್ತರನ್ನು ಗುಪ್ತ ಭಕ್ತರು ಎಂದು ಕರೆದಿರುವ ಔಚಿತ್ಯವಂತೂ ಪ್ರಶ್ನಾರ್ಹವಾಗಿದ್ದು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಅನ್ಯಮತೀಯ ಶಿವಭಕ್ತರದ್ದು ಏಕದೇವತಾ ನಿಷ್ಠೆಯಾಗಲು ಸಾಧ್ಯವಾದರೂ ಶಿವಭಕ್ತರಾದ ಅನ್ಯದೇವತೋಪಾಸಕರದ್ದು ಬಹುದೇವತೋಪಾಸನೆಯ ನಿಷ್ಠೆಯಾಗುತ್ತದೆ. ಅದು ವೀರಶೈವ ತತ್ವದ ಏಕದೇವತೋಪಾಸನೆಯ ತತ್ವಕ್ಕೆ ವಿರೋಧವಾಗುತ್ತದೆ. ಆಗಿನ ರಾಜಕೀಯದ ತೀವ್ರ ಬದಲಾವಣೆಯ ಸಂದರ್ಭದ ಒತ್ತಡಕ್ಕೆ ಸಿಕ್ಕಿದ ಕುಟುಂಬಗಳು ಹೆಚ್ಚು ಹೆಚ್ಚು ಮತಾಂತರಿಯಾಗುತ್ತಿದ್ದುದು ಜೈನ ಮತ್ತು ವೀರಶೈವ ಸಾಹಿತ್ಯ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

> ಇಜಿಸಿಕೊಂಡು ಭಕ್ತರಾದರೆಮ್ಮವರು
> ತಜಿಸಿಕೊಂಡು ಭಕ್ತರಾದರೆಮ್ಮವರು
> ಕೊಜಿಸಿಕೊಂಡು ಭಕ್ತರಾದರೆಮ್ಮವರು
> ಕೂಡಲಸಂಗನ ಶರಣರಿಗೆ ಮುಳಿಸತಾಳಿ
> ಎನ್ನ ಭಕ್ತಿ ಅರೆಯಾಯಿತ್ತು. ಬ.ಷ.ವ. ೨೫೫

ವೀರಶೈವರಿಗಿಂತ ಕರ್ನಾಟಕದಲ್ಲಿ ಮೊದಲು ಮತಾಂತರಕ್ಕೆ ಕೈ ಹಾಕಿದ ಜೈನರಲ್ಲಿಯೂ ಇಂಥ ಬಹುದೇವತೋಪಾಸನೆಯ ಸಮಸ್ಯೆ ತಲೆದೋರಿರುವುದನ್ನು ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಬರುವ ಒಂದು ಪದ್ಯದಿಂದ ಪರಿಶೀಲಿಸಬಹುದು:-

ಪೆಂಡತಿ ಮಾಹೇಶ್ವರಿ ಗಡ
ಗಂಡಂ ಜೈನಂ ಗಡವನಮಕ್ಕಳ್ಗಡ ಮಾ
ರ್ತಂಡಂಗೆ ಭಕ್ತರೆನಿಪಾ
ಭಂಡಂಗುತ್ತಮದ ಜೈನವೆಸರೆಂತೆಸೆಗುಂ॥ ಸಮಯ ಪರೀಕ್ಷೆ ೪-೧೨೫

ಈ ಪದ್ಯದಲ್ಲಿ ಗಂಡ ಜೈನನಾಗಿ, ಹೆಂಡತಿ ಮಾಹೇಶ್ವರಿಯಾಗಿ, ಅವರ ಮಕ್ಕಳು ಮಾರ್ತಂಡಭಕ್ತರಾದ್ದು, ಅದು ಉತ್ತಮ ಜೈನ ಕುಟುಂಬವಾಗಲು ಹೇಗಾದರೂ ಸಾಧ್ಯವೆ? ಅದು ಒಂದು ಭಂಡ ಕುಟುಂಬವಾಗುತ್ತದೆ. ಎಂದೂ ಅಂಥ ಕುಟುಂಬಕ್ಕೆ ಜೈನ ಸಮಾಜದಲ್ಲಿ ಗೌರವವಾಗಲಿ, ಸ್ಥಾನಮಾನವಾಗಲಿ ಸಿಕ್ಕುವುದಿಲ್ಲ. ಅಂಥ ಕುಟುಂಬವನ್ನು ವೀರಶೈವರು ಅನಾಚಾರಿಗಳು ಎನ್ನುತ್ತಾರೆ. ಇದಕ್ಕೆ ಸಂವಾದಿಯಾಗಿ ವೀರಶೈವ ಚಳುವಳಿಯ ಮುಂಚೂಣಿಕಾರನಾದ ಬಸವಣ್ಣನವರ ವಚನಗಳಲ್ಲಿಯೂ ಒಂದು ನಿದರ್ಶನವನ್ನು ಕಾಣಬಹುದು:-

ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿ ಮಸಣೆಯ ಭಕ್ತೆ!
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆ ಮಾಂಸ
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊಜಿಗೆ ತೊಳೆದಂತೆ
ಕೂಡಲ ಸಂಗಮದೇವಾ! ಬ.ಷ.ವ. ೧೦೪

ಬ್ರಹ್ಮ ಶಿವ ಮತ್ತು ಬಸವಣ್ಣನವರ ಮಾತಿನಂತೆ ಮೇಲಿನ ಎರಡೂ ಪ್ರಸಂಗಗಳು ಮತಾಂತರಕ್ಕೆ ಸಂಬಂಧಿಸಿವೆ. ಉಚ್ಚವರ್ಗದಿಂದ ಮತಾಂತರಿಯಾದವರದ್ದು ಎಂದೂ ಸಮಸ್ಯೆಯಾಗುವುದಿಲ್ಲ. ಪಿತೃಪ್ರಧಾನ ಕುಟುಂಬದ ಉಚ್ಚವರ್ಗದವರು ಯಾವುದೇ ಮತವನ್ನು ಸ್ವೀಕರಿಸಿದರೂ, ಆ ಮತದ ಮುಂದಾಳುಗಳಾಗಿ ಧಾರ್ಮಿಕ ನಾಯಕರಾಗುವುದರಿಂದ, ಅಂತಹವರ ಕುಟುಂಬದಲ್ಲಿ ಹೆಂಡತಿ ಮಕ್ಕಳು ಒಂದು ಸಮಸ್ಯೆಯಾಗುವುದಿಲ್ಲ. ಅಂಥ ಕುಟುಂಬದಲ್ಲಿ ಗಂಡನೇ ದೇವರಾಗುವುದರಿಂದ, ಹೆಂಡತಿ ಗಂಡನ ಧರ್ಮವನ್ನೇ ಅವಲಂಬಿಸಬೇಕಾಗುವುದು ಅನಿವಾರ್ಯವಾಗುತ್ತದೆ. ಹೆಂಗಸರಿಗೆ ಉಚ್ಚವರ್ಗದಲ್ಲಿ ಪ್ರಾತಿನಿಧ್ಯವಾಗಲಿ, ದನಿಯಾಗಲಿ, ಸ್ಥಾನಮಾನವಾಗಲಿ ಧರ್ಮದಲ್ಲಿ ಇರುವುದಿಲ್ಲ. ಆದರೆ ಕೆಳವರ್ಗದವರ ಕುಟುಂಬದ ಸಮಸ್ಯೆ ಭಿನ್ನವಾಗಿರುತ್ತದೆ. ಗಂಡು ಪರಿಸರದ ಒತ್ತಡಕ್ಕೆ ಸಿಕ್ಕಿ ಸುಲಭವಾಗಿ ಮತವನ್ನು ಬದಲಿಸುತ್ತಾನೆ. ಕುಟುಂಬದ ಹೆಣ್ಣು ಅಷ್ಟು ಸುಲಭವಾಗಿ ತಾನು ಹಿಂದಿನಿಂದ ಅನುಸರಿಸಿದ ಸಂಪ್ರದಾಯವನ್ನು ಹೊಸ ಮತಕ್ಕೆ ಬಲಿಕೊಡುವುದಿಲ್ಲ. ಮೇಲಿನ ಎರಡು ಪ್ರಸಂಗಗಳೂ ಕೆಳವರ್ಗದವರಾದ ಶಿವಭಕ್ತಿ ಕುಟುಂಬ ಜೈನ ಮತಾಂತರಿಯಾಗಿಯೂ,

ಮಾರಿ ಮಸಣೆಯ ಭಕ್ತ ಕುಟುಂಬ ವೀರಶೈವ ಮತಾಂತರಿಯಾಗಿಯೂ ಗಂಡು ಪರಿವರ್ತಿತನಾದಾಗ ಹೆಂಡತಿ ಮಾತ್ರ ಸುಲಭವಾಗಿ ಹೊಸ ಮತವನ್ನು ಒಪ್ಪಿಕೊಳ್ಳದೇ ಇರುವುದು ಕಂಡು ಬರುತ್ತದೆ. ಅದೂ ಅಲ್ಲದೆ ಕೆಳವರ್ಗದಲ್ಲಿ ಹೆಣ್ಣಿನ ಬದುಕು ದುಡಿಮೆಯಲ್ಲಿ ಗಂಡಿಗೆ ಸರಿಸಮಾನವಾಗಿರುವುದರಿಂದಲೂ ಮತ್ತು ಮಾತೃಪ್ರಧಾನ ಕುಟುಂಬಗಳಾಗಿದ್ದು, ಹೆಣ್ಣಿಗೂ ಗಂಡಿನಷ್ಟೇ ಪ್ರಾಮುಖ್ಯತೆ ಇದ್ದಿತೆಂಬುದು ತಿಳಿದು ಬರುತ್ತದೆ. ಹೆಣ್ಣಿಗೆ ತೆರಕೊಟ್ಟು ಮದುವೆಯಾಗುವ ಪದ್ಧತಿ ಇದ್ದು ಹೆಣ್ಣಿನ ಸ್ಥಾನಮಾನ ಉಚ್ಚ ವರ್ಗದವರಿಗಿಂತ ಭಿನ್ನವಾಗಿತ್ತೆಂದು ತಿಳಿಯುತ್ತದೆ. ಕೆಳವರ್ಗದ ಹೆಣ್ಣಿನ ಬಗ್ಗೆ ಮತಾಂತರಕ್ಕೆ ಅವಕಾಶವಿರುವ ಉಚ್ಚವರ್ಗದ ಮತಗಳಿಗೆ ಅಷ್ಟು ಉತ್ಕೃಷ್ಟ ಭಾವನೆ ಇಲ್ಲದಿರುವುದೂ ವ್ಯಕ್ತವಾಗುತ್ತದೆ. ಬಸವಣ್ಣನವರಿಗಿಂತ ಪೂರ್ವದಲ್ಲಿದ್ದ ದೇವರ ದಾಸಿಮಯ್ಯನೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ:-

ಗಂಡ ಭಕ್ತನಾಗಿ, ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ
ಸತ್ತ ನಾಯ ತಂದು ಅಟ್ಟದಮೇಲಿಳಿಹಿ
ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ ಕಾಣ ರಾಮನಾಥ
ದೇ.ದಾ.ವ. ೫೫

ಜೈನ ಧರ್ಮಕ್ಕಿಂತ ಹೆಚ್ಚಾಗಿ ವೀರಶೈವ ಧರ್ಮದಲ್ಲಿ ಕೆಳವರ್ಗದ ಹೆಣ್ಣಿನ ಮೇಲೆ ಮಾನಸಿಕ ಒತ್ತಡ ತರುವ ಅಂಶವಿದೆ. ವ್ಯಕ್ತಿಯ ಅಂತರಂಗ ಮತ್ತು ಬಹಿರಂಗ ಒಂದು ಘಟಕವಾಗಿ ಶುದ್ಧಿಯನ್ನು ಬಯಸಿದಂತೆ, ವೀರಶೈವ ಧರ್ಮ ಕುಟುಂಬದ ಹೆಣ್ಣು ಮತ್ತು ಗಂಡು ಇಬ್ಬರನ್ನೂ ಒಂದು ಘಟಕವಾಗಿ ಪರಿಗಣಿಸಿ-ಇಬ್ಬರ ಮತಾಂತರದಿಂದ ಮಾತ್ರ ಕುಟುಂಬ ಸಾರ್ಥಕವಾಗುವುದು ಎಂದು ಸಾರುತ್ತದೆ. ಕುಟುಂಬದ ಹೆಣ್ಣು ಅಂತರಂಗ, ಗಂಡು ಬಹಿರಂಗ. ವೀರಶೈವರಲ್ಲಿ ಶರಣ ಸತಿ, ಲಿಂಗ ಪತಿ ಸಾಧನೆಯಂತೆ, ಕುಟುಂಬದಲ್ಲಿ ಸತಿ ಪತಿಗಳು ಒಂದಾಗಿ ಶಿವನನ್ನು ಪೂಜಿಸುವುದು ಹಿತವಾಗುವುದು:-

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷಬೆರದಂತೆ ಕಾಣಾ ರಾಮನಾಥ
ದೇ.ದಾ.ವ. ೫೪

ಇಡೀ ಕುಟುಂಬ ಮತ ಪರಿವರ್ತನೆಯಾದಾಗ ಮಾತ್ರ ವೀರಶೈವ ಧರ್ಮದ ಮತಾಂತರದ ಉದ್ದೇಶ ಸಾಧಿತವಾಗುತ್ತದೆ. ಆಗ ಮಾತ್ರ ಭಕ್ತನಾದ ಕುಟುಂಬ ಮರಳಿ ಭವಿಯಾಗುವುದಿಲ್ಲವೆಂಬುದು ಖಚಿತವಾಗುತ್ತದೆ. ವೀರಶೈವ ಧರ್ಮ ವಿರಕ್ತಮಾರ್ಗಕ್ಕಿಂತ ಸಂಸಾರದಲ್ಲಿದ್ದು ಸಾಧನೆಯನ್ನು ಎತ್ತಿ

ಹಿಡಿಯುವುದನ್ನು ಸೂಚಿಸುತ್ತದೆ. ಹೆಣ್ಣು ಮತ ಪರಿವರ್ತನೆಯಾದಾಗ ಮಾತ್ರ ವೀರಶೈವರಿಗೆ ತಮ್ಮ ಮತಕ್ಕೆ ಆ ಕುಟುಂಬದ ನಿಷ್ಠೆ ಎಂಬುದು ಖಚಿತವಾಗಿ ನೆಮ್ಮದಿಯಾಗುತ್ತದೆ. ಹೆಣ್ಣು ಅಷ್ಟು ಸುಲಭವಾಗಿ ಮತಾಂತರಿಯಾಗುವುದಿಲ್ಲ. ಹೆಣ್ಣಿನ ಮತಾಂತರವಾದಾಗಲೇ ಮತಾಂತರದ ಪ್ರಯತ್ನ ಪೂರ್ಣವಾಗಿ ಸಾರ್ಥಕವಾಗುವುದು. ಆದ್ದರಿಂದಲೇ ಬಹುದೇವತೋಪಾಸಕ ಕುಟುಂಬವನ್ನು ತೀವ್ರವಾಗಿ ಖಂಡಿಸಿ, ಏಕದೇವತೋಪಾಸನೆಯ ಕುಟುಂಬವನ್ನು ಹೊಗಳಿರುವುದು. ಕೆಳವರ್ಗದಲ್ಲಿ ಧರ್ಮದ ವಿಷಯವಾಗಿ ವ್ಯಕ್ತಿ ಸ್ವಾತಂತ್ರ್ಯವಿದ್ದರೂ, ಮತಾಂತರಕ್ಕೆ ಅವಕಾಶವಿರುವ ಜೈನ ಮತ್ತು ವೀರಶೈವ ಧರ್ಮದ ಕುಟುಂಬಗಳಲ್ಲಿ ಕುಟುಂಬದ ವ್ಯಕ್ತಿಗಳಿಗೆ ಧರ್ಮದ ವಿಷಯವಾಗಿ ಸ್ವಾತಂತ್ರ್ಯವಿಲ್ಲದಿರುವುದು ವ್ಯಕ್ತವಾಗುತ್ತದೆ. ಆದರೆ ತಾಂತ್ರಿಕ ಧಾರ್ಮಿಕ ವಿಧಿಯಲ್ಲಿ ಸ್ತ್ರೀಯರಿಗೇ ಪ್ರಾಮುಖ್ಯತೆ. ಹೆಣ್ಣಿಲ್ಲದೆ ತಂತ್ರ ಸಾಧನೆ ಪೂರ್ಣವಾಗುವುದಿಲ್ಲ. ಶಿವಭಕ್ತಿಯೂ ಹೆಣ್ಣಿಲ್ಲದೆ ಪೂರ್ಣವಾಗುವುದಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಇದರಿಂದ ವೀರಶೈವ ಧರ್ಮದ ಮೇಲೆ ತಾಂತ್ರಿಕ ಮತದ ಪ್ರಭಾವವನ್ನು ಗುರುತಿಸಬಹುದಾಗಿದೆ. ಒಟ್ಟಿನಲ್ಲಿ ಹೆಣ್ಣಿನ ಮತಾಂತರ ವೀರಶೈವರಲ್ಲಿ ಒಂದು ಕೇಂದ್ರ ಬಿಂದುವಾಗಿರುತ್ತದೆ. ಶಿವಭಕ್ತ ಹೆಣ್ಣುಮಗಳು ಜೈನ ಕುಟುಂಬ ಸೇರಿದರೂ ಅಥವಾ ಶಿವಭಕ್ತ ಗಂಡು ಜೈನ ಕುಟುಂಬದ ಹೆಣ್ಣನ್ನು ಮೋಹಿಸಿ ಹಿಡಿದು ಜೈನ ಕುಟುಂಬದಲ್ಲಿ ವಾಸಿಸುವಾಗ ಸಮಸ್ಯೆ ಬೇರೆಯಾಗುತ್ತದೆ. ಅಂಥ ಸಮಸ್ಯೆ ಆದಯ್ಯನ ಕತೆಯಲ್ಲಿ ಬರುತ್ತದೆ. ಶಿವಭಕ್ತ ಜೈನ ಕುಟುಂಬದಲ್ಲಿ ಸಿಕ್ಕಿಕೊಂಡಾಗ ಶೈವ ಧರ್ಮ ಜೈನ ಧರ್ಮವನ್ನು ಗೆದ್ದು ನಿಲ್ಲುವಂತೆ ವೀರಶೈವ ಸಾಹಿತ್ಯದಲ್ಲಿ ಚಿತ್ರಿತವಾಗಿರುತ್ತದೆ. ಅಂತಹ ಪ್ರಸಂಗಗಳಲ್ಲಿ ಅವರಿಗೆ 'ಗುಪ್ತಭಕ್ತ' ಪಟ್ಟ ಕಟ್ಟಿ ವೀರೋಚಿತ ಸ್ವಾಗತ ವೀರಶೈವರಿಂದ ದೊರೆಯುತ್ತದೆ. ಗುಪ್ತಭಕ್ತರು ವೀವಶೈವ ಸಾಹಿತ್ಯದ ಪ್ರಮುಖ ವಸ್ತುವಾಗಿ ಅನ್ಯಮತ ಖಂಡನೆ ಮತ್ತು ಸ್ವಮತ ಪ್ರತಿಷ್ಠಾಪನೆಗೆ ಅತ್ಯುತ್ತಮ ನಿದರ್ಶನವಾಗುತ್ತದೆ. ಅದು ಭವಿ ಮತ್ತು ಭಕ್ತರ ಹೋರಾಟವಾಗಿ ಪರಿಣಮಿಸಿ, ಭಕ್ತರು ಭವಿಗಳ ಮೇಲೆ ಅಂತ್ಯದಲ್ಲಿ ಸಾಧಿಸುವ ದಿಗ್ವಿಜಯದ ರ್ಣನೆಯೇ ಆಗಿರುತ್ತದೆ. ಇಂಥ ಸಂದರ್ಭದಲ್ಲಿ ವ್ಯಕ್ತಿ ಅಥವಾ ಕುಟುಂಬ ಹುದೇವತೋಪಾಸಕರಾಗಿದ್ದರೆ, ವೀರಶೈವರಲ್ಲಿ ಏಕದೇವತೋಪಾಸಕರಾಗಿ ಅಂತ್ಯದಲ್ಲಿ ರಿವರ್ತಿತವಾಗುವುದು ಕಂಡುಬರುತ್ತದೆ.

ಕುಟುಂಬ ಮತಪರಿವರ್ತನೆಯಾಗಿ ಶಿವಭಕ್ತರಾದ ಮೇಲೆ ಅನ್ಯದೇವತೋಪಾಸನೆ ಆ ಟುಂಬದಲ್ಲಿ ಮುಂದುವರಿದಾಗ ವೀರಶೈವ ಧರ್ಮದ ಪ್ರತಿಕ್ರಿಯೆ ಏನು? ಮತ ಪರಿವರ್ತನೆಯ ಧಿಕಾಲದಲ್ಲಿ ತಮ್ಮ ತಮ್ಮ ಮತಗಳಿಗೆ ಅಧಿಕ ಸಂಖ್ಯೆಯ ಮಂದಿಯನ್ನು ಸೇರಿಸಿಕೊಂಡು ತಿಷ್ಠಿತ ಮತವಾಗಿ ಬೆಳೆಯುವಲ್ಲಿ ಅಷ್ಟು ಕಟ್ಟುನಿಟ್ಟಾಗಿ ನಿಯಮಗಳನ್ನು ಅನುಸರಿಸುವಂತಿಲ್ಲ. ಂಥ ಸಂದರ್ಭದಲ್ಲಿ ಕೆಳವರ್ಗದ ದೇವರನ್ನೆಲ್ಲಾ ವೀರಶೈವ ಧರ್ಮ ಪರಿವಾರ ದೇವತೆಗಳೆಂದು ದು ತನ್ನ ಧರ್ಮದಲ್ಲಿ ಗೌಣವಾದ ಸ್ಥಾನ ಕೊಟ್ಟು ಪೂಜೆಗೆ ಅವಕಾಶಮಾಡಿಕೊಟ್ಟಿತು. ಶೈವ ಂಥಕ್ಕೆ ಒಗ್ಗುವ ದುರ್ಗಿ, ವಿನಾಯಕ, ಭೈರವ ಮೊದಲಾದ ದೇವತೆಗಳಿಗೆ ಪೂಜೆ

ಸಲ್ಲಿಸಬಹುದೇ ಹೊರತು ಶಿವನೊಂದಿಗೆ ಏಕ ಪೀಠ ಮಾತ್ರ ಸಲ್ಲದು ಎಂದು ಸಾರಿತು:-

....

ಅಂತಪ್ಪ ಶಿವನಲ್ಲಿ ಏಕ ನಿಷ್ಠೆಯ ಪಡೆದು
ಆ ಶಿವಂಗೆ ಅರ್ಚನೆ ಪೂಜೆಯಂ ಮಾಡುವಲ್ಲಿ
ದುರ್ಗಿ, ವಿನಾಯಕ, ಭೈರವ ಮೊದಲಾದ ಪರಿವಾರ ದೇವತೆಗಳನ್ನು
ಏಕ ಪೀಠದಲ್ಲಿ ಪೂಜೆಯಂ ಮಾಡುವಾತನು
ಅವಿವೇಕದ ಅಪರಾಧಿಯಲ್ಲದೆ
ವಿವೇಕವನ್ನುಳ್ಳ ಶೈವ ಸಂಪನ್ನನಲ್ಲ
ಅದಕ್ಕೆ ದೃಷ್ಟಾಂತವೆಂತೆಂದಡೆ :
ಅರಸು ಕುಳ್ಳಿಸಿರುವ ಸಿಂಹಾಸನದಲ್ಲಿ
ಪ್ರಧಾನ ಮೊದಲಾದ ಪರಿವಾರ ಕುಳ್ಳಿರಬಹುದೆ ?
ಬಾರದಾಗಿ ಪರಿವಾರ ದೇವತೆಗಳಿಗೆ ಏಕ ಪೀಠ ಸಲ್ಲದು

....

ಸ.ಪು.ವ. ೨ ಆದಯ್ಯ ವ. ೬೯೪/೨೯೪

ಆದ್ದರಿಂದ ಬಹುದೇವತೋಪಾಸಕ ಶಿವಭಕ್ತ ಶಿವನ ಏಕನಿಷ್ಠ ಪೂಜೆಯಲ್ಲಿ, ಅನ್ಯದೇವರುಗಳಿಗೂ ಶಿವನಿಗೆ ಸರಿಸಮಾನವಾಗಿ, ಏಕಪೀಠ ಒದಗಿಸುವುದು ಅಪರಾಧವಾಗುತ್ತದೆ. ಆದರೆ ಅನ್ಯದೇವರು ಶಿವನಿಗೆ ಪರಿವಾರ ದೇವತೆಗಳಾಗಿ ಸೇವೆ ಸಲ್ಲಿಸುವುದು ನಿಷಿದ್ಧವಲ್ಲ. ಶಿವ ಪಂಥದಲ್ಲಿ ಅಸ್ತಿತ್ವವನ್ನು ಕಂಡುಕೊಂಡ ಕೆಳವರ್ಗದ ದೇವತೆಗಳು ಶಿವ ಪಂಥದ ಪರಿವಾರ ದೇವತೆಗಳಾಗಿ ಸೇವೆ ಸಲ್ಲಿಸುವುದರಿಂದ ಕೆಳವರ್ಗದ ಗಂಡು ದೇವರು ಶಿವನ ರೂಪಾಂತರವಾಗಿಯೂ, ಹೆಣ್ಣು ದೇವತೆಗಳು ಪಾರ್ವತಿಯ ರೂಪಾಂತರವಾಗಿ ಆಚಾರ ವಿಚಾರಗಳು ಒಂದೇ ಆಗಿ ಸಮಸ್ಯೆ ಬಗೆಹರಿಯಬಹುದಾದರೂ ಶಿವಭಕ್ತಿ ಪಂಥದಲ್ಲಿ ವಿಷ್ಣುಭಕ್ತಿಯ ಪೂಜೆ ತಲೆಹಾಕಿದರೆ ಸಮಸ್ಯೆ ಬಗೆಹರಿಯುವುದೆ ? ವಿಷ್ಣು ಶಿವನ ಪರಿವಾರ ದೇವತೆಯಾದಾನೆ ? ಸಮಾನ ದೇವತೆಗಳು ಪರಸ್ಪರ ಪರಿವಾರ ದೇವತೆಗಳಾದಾಗ ಉಂಟಾಗುವ ಪರಿಸ್ಥಿತಿ ಯಾವುದು? ವಿಷ್ಣು ಮತ್ತು ಶೈವ ಪಂಥಗಳು ಎರಡೂ ತಮ್ಮ ತಮ್ಮ ಮೇಲ್ಮೆಗಾಗಿ ಪರಸ್ಪರ ಸ್ಪರ್ಧಿಸುವ ಮತಗಳು. ಅವುಗಳಲ್ಲಿ ವಿರೋಧವಿದೆ. ವಿಷ್ಣು ತನ್ನ ಭಕ್ತ ಪ್ರಹ್ಲಾದನನ್ನು ರಕ್ಷಿಸಿಕೊಳ್ಳಲು ನರಸಿಂಹಾವತಾರ ಎತ್ತಿ ಶಿವಭಕ್ತ ಹಿರಣ್ಯಕಶಿಪುವನ್ನು ಕೊಂದರೆ, ಶಿವ ನರಸಿಂಹನಿಗೆ ವಿರುದ್ಧವಾದ ಶರಬಾವತಾರ ಎತ್ತಿ ನರಸಿಂಹನನ್ನು ಕೊಲ್ಲುವ ವರ್ಣನೆ ಬರುತ್ತದೆ. ಶಿವ ತನ್ನ ಭಕ್ತನನ್ನು ಕೊಂದ ನರಸಿಂಹನನ್ನು ಕೊಂದು ಸೇಡು ತೀರಿಸಿಕೊಳ್ಳುವುದನ್ನು ಕಾಣಬಹುದು. ಹೀಗೆ ವಿಷ್ಣು ಮತ್ತು ಶಿವ ಪುರಾಣಗಳು ಒಂದರ ವಿರುದ್ಧ ಮತ್ತೊಂದು ಅನೇಕ

ಗಳನ್ನು ಸೃಷ್ಟಿಸಿದುವು. ಅಲ್ಲದೆ ಎರಡೂ ಪಂಥಗಳಿಗೂ ಮೂಲ ಮಂತ್ರ, ಲಾಂಛನ ಮತ್ತು
ತ್ವಿಕ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. ವಿಷ್ಣು ಪುರಾಣ ಮತ್ತು ಶಿವ ಪುರಾಣಗಳಲ್ಲಿ ತಮ್ಮ
ಮ್ಮ ದೇವತೆಗಳನ್ನು ದೊಡ್ಡದು ಮಾಡಿ ವರ್ಣಿಸಿರುವುದು ಕಂಡುಬರುತ್ತದೆ. ಆದರೆ ಈ
ಡೂ ಪಂಥಗಳಿಗೆ ವೈದಿಕ ವ್ಯಾಖ್ಯಾನವಾದ ಅನಂತರ ವೈದಿಕ ಧರ್ಮ ವಿಷ್ಣು ಪಂಥದಲ್ಲಿ
ನ್ನ ತಾನು ಕಂಡುಕೊಂಡಿತು. ಶೈವ ಪಂಥದಲ್ಲಿ ವೇದ ವಿರೋಧಿ ಪಂಥಗಳು ಹುಟ್ಟಿಕೊಂಡಿದ್ದರಿಂದ
ಕ ಧರ್ಮ ಶೈವ ಪಂಥಕ್ಕೆ ಗೌರವಕೊಟ್ಟರೂ, ವಿಷ್ಣು ಪಂಥದಲ್ಲಿ ವೈದಿಕ ಧರ್ಮವನ್ನು
ುರಸ್ಕಗೊಳಿಸಿತು. ವಿಷ್ಣುವನ್ನೇ ವೇದ ಕಾಲದ ಇಂದ್ರನಂತೆ ಪುರಾಣ ಕಾಲದಲ್ಲಿ
ಿಸಿದರು. ತ್ರಿಮೂರ್ತಿಗಳಲ್ಲಿ ವಿಷ್ಣು ಬುದ್ಧಿ, ಶಕ್ತಿ, ಸಾಮರ್ಥ್ಯ ಮತ್ತು ಚತುರತೆಯಲ್ಲಿ
ದನಾಗಿ, ಅವನ ಸುತ್ತ ಹತ್ತು ಅವತಾರದ ಕತೆ ಹಬ್ಬಿತು. ವಿಷ್ಣುವಿಗೆ ಮೊದಲ ಸ್ಥಾನ ಕೊಟ್ಟ
ಕ ಮತ ಶಿವನಿಗೆ ಎರಡನೆಯ ಸ್ಥಾನ ಕೊಡುವುದನ್ನು ವಿರೋಧಿಸಲಿಲ್ಲ. ಶಿವ ದ್ರಾವಿಡ
ೃತಿಯ ಸಂಕೇತವಾಗಿ, ವಿಷ್ಣು ಆರ್ಯ ಸಂಸ್ಕೃತಿಯ ಸಂಕೇತವಾಗಿ, ಭಾರತೀಯ
ೃತಿಯಲ್ಲಿ ವಿಷ್ಣು ಪಂಥವೇ ಮೇಲುಗೈ ಪಡೆಯುವಂತಾಯಿತು. ಶಿವ ಪಂಥ ವೈದಿಕ
ಖ್ಯಾನದಿಂದ ದುರ್ಬಲವಾಯಿತು. ತನ್ನ ನೆಲದ ಮೂಲ ಸತ್ವವನ್ನು ಕಳೆದುಕೊಂಡು ಆರ್ಯ
ೃತಿಯ ಪ್ರಭಾವಕ್ಕೆ ಒಳಗಾಯಿತು. ಶಿವ ಪುರಾಣಗಳಲ್ಲಿ ಶಿವ ಭಕ್ತನಾಗಿ ವಿಷ್ಣುವನ್ನು
ಸಿದ್ದರೂ, ವೈದಿಕರ ದೃಷ್ಟಿಯಲ್ಲಿ ವಿಷ್ಣುವೇ ಪ್ರಧಾನ ದೇವರು. ಕರ್ನಾಟಕದಲ್ಲಿಯೂ
ುವಿನ ಅವತಾರವಾದ ರಾಮ ಮತ್ತು ಕೃಷ್ಣರನ್ನು ವಸ್ತುವಾಗಿರುವ ಶ್ರೇಷ್ಠ ಕಾವ್ಯಗಳು
ುವೇ ಹೊರತು, ಶಿವನನ್ನು ವಸ್ತುವನ್ನಾಗಿ ಉಳ್ಳ ಶ್ರೇಷ್ಠ ಕಾವ್ಯಗಳು (ವೀರಶೈವ ಪಂಥ
ುಳಿಯಾದರೂ) ಹುಟ್ಟಿಬರದಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ವಿಷ್ಣು ಪಂಥದ
ತಿ ರಾಷ್ಟ್ರೀಯ ಸಂಸ್ಕೃತಿಯ ಸ್ವರೂಪ ಪಡೆಯಿತು. ಶೈವ ಪಂಥದ ಸಂಸ್ಕೃತಿಯ ಸ್ವರೂಪ
ುವಾಗಿ ರಾಷ್ಟ್ರೀಯ ವ್ಯಾಪ್ತಿ ಪಡೆದರೂ ಪ್ರಾಂತೀಯ ಸಂಸ್ಕೃತಿಯಾಗಿ ಮಿತವಾಯಿತು.
ಟಕದಲ್ಲಿ ಸ್ಮಾರ್ತ ಬ್ರಾಹ್ಮಣರು ಪ್ರಬಲರಾಗಿದ್ದರೂ, ಶಿವನ ಆರಾಧಕರಾದರೂ, ವಿಷ್ಣು
ರ ಕೃಷ್ಣನಿಗೇ ಕನ್ನಡ ಸಾಹಿತ್ಯದಲ್ಲಿ ಪ್ರಾಮುಖ್ಯತೆ ಸಿಕ್ಕಿದುದು ಎಂಬುದನ್ನು ಮರೆಯುವಂತಿಲ್ಲ.
ಪಂಥದ ವೈದಿಕ ಧರ್ಮ ಪ್ರಚಾರದ ರಾಮಾಯಣ ಮತ್ತು ಮಹಾಭಾರತಗಳು ರಾಷ್ಟ್ರೀಯ
ಳೆಂದು ಪರಿಗಣಿಸಲಟ್ಟವೇ ಹೊರತು, ಶಿವ ಪಂಥದ ಯಾವ ಕಾವ್ಯವೂ ರಾಷ್ಟ್ರೀಯ
ಾಗಲಿಲ್ಲ. ರಾಮಾಯಣ ಮತ್ತು ಮಹಾಭಾರತ ವಿಷ್ಣು ಪಂಥದ ವೈದಿಕ ಧರ್ಮ
ಸಿದರೂ ಶಿವ ಪಂಥಕ್ಕೆ ವಿರೋಧವಲ್ಲ ಎಂಬುದು ಸ್ಪಷ್ಟವಾಗುತ್ತದೆ. ರಾಮ ಶಿವ
ನ್ನು ಮುರಿದರೂ ಶಿವಭಕ್ತ, ಕೃಷ್ಣ ಭಕ್ತರಾದ ಪಾಂಡವರು ಶಿವ ಭಕ್ತರಾಗಿರಲು ಕೃಷ್ಣನ
ಧವಿಲ್ಲ. ಅರ್ಜುನ ಶಿವನ ತಪಸ್ಸಿನಿಂದ ಪಾಶುಪತಾಸ್ತ್ರವನ್ನು ಪಡೆದನು. ವೈದಿಕ ಧರ್ಮ
ದ ರಾಮ ಮತ್ತು ಕೃಷ್ಣರು ಶಿವ ವಿರೋಧಿಗಳಲ್ಲ. ಆದರೆ ಶೈವ ಪಂಥದಲ್ಲಿ ವಿಷ್ಣು ಪಂಥದ
ಧ ಎದ್ದು ಕಾಣುತ್ತದೆ. ಅದರಲ್ಲೂ ವೀರಶೈವ ಸಾಹಿತ್ಯದಲ್ಲಿ ರಾಮಾಯಣ ಮತ್ತು
ಾರತದ ಬಗ್ಗೆ ತೀವ್ರ ವಿರೋಧವಿದೆ. ವಿಷ್ಣು ಪುರಾಣಗಳನ್ನು ಪುಂಡರ ಗೋಷ್ಠಿ ಎಂದೇ
ರೆ. ವಿಷ್ಣು ದೇವರಾದರೂ ಕ್ಷತ್ರಿಯನಾಗಿ ಅವತರಿಸಿ ವರ್ಣ ಧರ್ಮವನ್ನು ರಕ್ಷಿಸಿದನು.

ಆದರೆ ಶಿವಯೋಗಿ, ಅವನು ಕ್ಷತ್ರಿಯನಾಗಿ ಹುಟ್ಟಲಾರ. ಆದ್ದರಿಂದಲೇ ವಿಷ್ಣುವಿಗೆ ಅವತಾರ ಗಂಟುಬಿದ್ದಂತೆ ಶಿವನಿಗೆ ಅವತಾರ ಗಂಟು ಬೀಳದೆ, ಲೀಲೆಯ ತತ್ತ್ವ ಗಂಟು ಬಿದ್ದಿತು. ವಿಷ್ಣುವಿನ ಅವತಾರದ ಕತೆಗಳು ಮಾನವನಿಗೆ ಹೆಚ್ಚು ಹತ್ತಿರವಾಗಿ ಕಾವ್ಯದ ವಸ್ತುವಾಗಿ ವಿಜೃಂಭಿಸಲು ಕಾರಣವಾಯಿತು. ಶಿವ ಅಜಾತನಾಗಿ ಲೀಲಾ ಮೂರ್ತಿಯಾದುದರಿಂದ ಮಾನವರ ಬದುಕಿನಿಂದ ದೂರ ಸರಿದು ನಿಲ್ಲುವಂತಾಗಿ ಕಾವ್ಯದ ವಸ್ತುವಾಗಿ ಮೆರೆಯಲು ಸಾಧ್ಯವಾಗಲಿಲ್ಲ. ಇದರಿಂದ ವಿಷ್ಣು ಜೀವಪರ ನಿಲವು ತಾಳಿದವನೆಂದೂ, ಶಿವ ಜೀವ ವಿರೋಧಿ ನಿಲವು ತಾಳಿದನೆಂಬ ವಿದ್ವಾಂಸರ ವ್ಯಾಖ್ಯಾಸಕ್ಕೆ ದಾರಿಯಾಯಿತು. ವಿಷ್ಣು ಭೋಗಿಯಾಗಿ ಶಿವ ಯೋಗಿಯಾಗಿ ಜನರ ಮನಸ್ಸಿನಲ್ಲಿ ಚಿತ್ರಿತವಾದರು.

ಬಡವರ ಭೋಜನ ಭೋಗಿಸಿದವ ಭವಾನೀಪುತ್ರ ನೋಡಯ್ಯಾ
ಕಡವರ ಎಡೆಗೊಂಡವ ವಿಷ್ಣುವಿನ ವಂಶದವ ನೋಡಯ್ಯಾ
ಬಡವರ ಭೋಜನ ಅಮೃತ ಸೇವನೆ
ಕಡವರ ನಮೃತ ಸುರಪಾನ ನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. ಸಿ.ವ. ೩೧೪

ಶ್ರೀಮಂತರು ವಿಷ್ಣು ವಂಶದವರಾದರು. ಬಡವರು ಶಿವನ ವಂಶಸ್ಥರಾದರು. ಶ್ರೀಮಂತರ ಆಧ್ಯಾತ್ಮಿಕ ಬಡತನ ಖಂಡಿಸಲ್ಪಟ್ಟು, ಬಡವರ ಆಧ್ಯಾತ್ಮಿಕ ಸಂಪತ್ತು ಸ್ತುತಿಸಲ್ಪಟ್ಟಿತು. ಶಿವ ಬಡವರ ಆಧ್ಯಾತ್ಮಿಕ ಸಂಪತ್ತಿನ ನಿಧಿಯಾದನು. ವಿಷ್ಣುಭಕ್ತರದ್ದು ಅರಮನೆಯಾಯಿತು. ಶಿವಭಕ್ತರದ್ದು ಗುರುಮನೆಯಾಯಿತು.

ಕವಿಗಳು ಶಿವನ ಭೋಗ ಜೀವನದ ಚಿತ್ರವನ್ನು ಕೊಡುವ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಆದರೆ ವಿಷ್ಣುವಿನ ಭೋಗ ಬದುಕಿನ ಚಿತ್ರಣ ಅವನ ದೇವತ್ವಕ್ಕಾಗಲಿ, ಅವತಾರ ತತ್ತ್ವಕ್ಕಾಗಲಿ ಕುಂದನ್ನು ತರಲಿಲ್ಲ. ಹೀಗೆ ಅಭಿವ್ಯಕ್ತಿ ಮಾಧ್ಯಮಗಳಲ್ಲಿಯೂ ವಿಷ್ಣು ಪಂಥ ಹೆಚ್ಚು ಜನಪ್ರಿಯವಾಯಿತು. ಆದರೆ ತೋಂಡಿ ಸಂಪ್ರದಾಯದ ಗುಪ್ತ ಸಮಾಜದಲ್ಲಿ ಶಿವಭಕ್ತಿ ಪಂಥ ಹೆಚ್ಚು ಪ್ರಚಲಿತವಾಯಿತು. ವಿಷ್ಣು ಪಂಥದ ವಸ್ತುವುಳ್ಳ ವೈದಿಕ ವ್ಯಾಖ್ಯಾನದ ಕಾವ್ಯಗಳು ಬದುಕಿನ ಸಮಗ್ರ ಸಂವೇದನೆಗಳಿಗೆ ಅವಕಾಶವಿದ್ದು ಲೌಕಿಕ ಕಾವ್ಯಗಳಾಗಿ ಪ್ರಸಿದ್ಧವಾದವು. ಶಿವ ಪಂಥದ ವಸ್ತುವುಳ್ಳ ಕಾವ್ಯಗಳು ವೈದಿಕ ವ್ಯಾಖ್ಯಾನವಿದ್ದರೂ ಆಗಮಿಕವಾಗಿ ಆಧ್ಯಾತ್ಮಿಕ ಮೌಲ್ಯದಿಂದ ಕೂಡಿದ್ದು ಬದುಕಿನ ಸಮಗ್ರ ಸಂವೇದನೆಗಳ ಅಭಿವ್ಯಕ್ತಿಗೆ ಅವಕಾಶವಾಗದೆ ವ್ಯಾಪ್ತಿಯನ್ನು ಪಡೆಯಲಿಲ್ಲ. ಶ್ರುತಿ, ಸ್ಮೃತಿ ಮತ್ತು ಆಗಮದ ತತ್ತ್ವಗಳ ಅಭಿವ್ಯಕ್ತಿಗೆ ವಿಷ್ಣು ಪಂಥದ ವೈದಿಕ ಕಾವ್ಯಗಳು ಒಗ್ಗಿದಂತೆ ಶೈವ ಪಂಥದ ವೈದಿಕ ಕಾವ್ಯಗಳು ಒಗ್ಗಲಿಲ್ಲ. ವೈದಿಕ ವಿರೋಧಿ ವೀರಶೈವ ಕಾವ್ಯಗಳೂ ಅಂತರ್ಮುಖಿ ಬದುಕಿಗೆ ವಸ್ತುವನ್ನು ಸೀಮಿತಗೊಳಿಸಿಕೊಂಡುದರಿಂದ ವಸ್ತು ವೈವಿಧ್ಯತೆಯ ಅಭಾವದಿಂದ ಜನರಿಂದ ದೂರ ಸರಿದವು. ಜನಸಾಮಾನ್ಯರ ಬದುಕು ವೀರಶೈವ

ವ್ಯಗಳ ವಸ್ತುವಾದರೂ ಅವರ ಆಧ್ಯಾತ್ಮಿಕ ಬದುಕಿನ ಏಕಮುಖ ಜೀವನ ಚಿತ್ರಣದಿಂದ ಾಂತ್ರಿಕವಾಯಿತು. ಅನ್ಯಮತದ ಶಿವಭಕ್ತ ಗುಪ್ತಭಕ್ತರ ವಸ್ತು ವೀರಶೈವ ಸಾಹಿತ್ಯದಲ್ಲಿ ್ರಮುಖ್ಯತೆ ಪಡೆಯಿತು. ಆದರೆ ವೀರಶೈವ ಭಕ್ತರ ವಿಷ್ಣುಪೂಜೆ ಬಹುದೇವತೋಪಾಸನೆಯಾಗಿ, ದು ವೀರಶೈವ ಕಾವ್ಯಕ್ಕೆ ವಸ್ತುವಾಗುವುದರಿಂದ ಹೊರತಾಯಿತು. ಅದೂ ಶಿವಭಕ್ತರಾಗಿದ್ದು ನ್ಯದೇವತೋಪಾಸಕರು ವಚನಕಾರರಾದರಂತೂ ಮತ್ತಷ್ಟು ಗೊಂದಲಕ್ಕೆ ಅವಕಾಶವಾಗುತ್ತದೆ. ವರಿಂದ ಬಿಡಿಸಲಾಗದ ಹಲವು ತಾತ್ತ್ವಿಕ ತೊಡಕುಗಳು ಎದುರಾಗುತ್ತವೆ. ಅಂತಹವರ ಚನಗಳು ಭವಿಗಳ ವಚನಗಳಾಗುತ್ತವೆಯೊ? ಭಕ್ತರ ವಚನಗಳಾಗುತ್ತವೆಯೊ? ಎಂಬುದು ಾದಲು ನಿರ್ಧಾರವಾಗಬೇಕಾಗುತ್ತದೆ.

ಶಿವಭಕ್ತ ವಚನಕಾರರಲ್ಲಿ ವಿಷ್ಣು ಪೂಜೆಯ ಸಂಪ್ರದಾಯದ ವಚನಕಾರರು ಇದ್ದರೆಂಬುದು ರರ ಅಂಕಿತಗಳ ಪರಿಶೀಲನೆಯಿಂದ ಸ್ಪಷ್ಟವಾಗುತ್ತದೆ. ಅಂಕಿತಗಳು ವಚನಕಾರರ ಇಷ್ಟ ನವನ್ನು ಸೂಚಿಸುತ್ತದೆ. ಅಂಥ ವಿಷ್ಣು ಭಕ್ತ ವಚನಕಾರರಲ್ಲಿ ರಾಮಭಕ್ತಿ ಪಂಥದ ಚನಕಾರರೇ ಅಧಿಕವಾಗಿದ್ದಾರೆ. ಕೃಷ್ಣಭಕ್ತ ವಚನಕಾರರ ಸಂಖ್ಯೆ ಇಲ್ಲವೇ ಇಲ್ಲ. ಏಕಪತ್ನೀ ಿಷ್ಠ ಶ್ರೀ ರಾಮಚಂದ್ರ ಶಿವಭಕ್ತ. ಆದರೆ ಕೃಷ್ಣ ಶಿವಭಕ್ತನಾಗಿ ಅಷ್ಟಾಗಿ ಕಂಡುಬರುವುದಿಲ್ಲ. ್ಣನ ಭಗವದ್ಗೀತೆಗೆ ಬದಲಾಗಿ ಶಿವಗೀತೆ ಹುಟ್ಟಿತು. ಕೃಷ್ಣ ವೀರಶೈವರಿಗೆ ವಿರುದ್ಧ ಪಂಥದ ಯಕನಾದನು. ಆದ್ದರಿಂದಲೇ ಮಹಾಭಾರತ ಮತ್ತು ಭಾಗವತಗಳು ವೀರಶೈವರಿಗೆ ಜಾರ ೀರರ ಕತೆಯಾಗಿ ಕಂಡವು. ವಚನಕಾರರಿಗೆ ಕೃಷ್ಣ ಭಕ್ತಿಗಿಂತ ಶಿವಭಕ್ತನಾದ ರಾಮ ಮನಾದನು. ಇದಕ್ಕೆ ಸಾಕ್ಷಿ ಎಂದರೆ ವಚನಕಾರರ ಅಂಕಿತಗಳು-ಗುಪ್ತ ಮಂಚಣ್ಣನ ಾಯಣಪ್ರಿಯ ರಾಮನಾಥ, ದೇವರ ದಾಸಿಮಯ್ಯನ ರಾಮನಾಥ, ಚಂದಿಮರಸನ ್ಮಲಿಗೆಯ ಚೆನ್ನರಾಮ, ಭಂತೇಶ್ವರದ ಚನ್ನಬಸವಣ್ಣನ ರಾಮೇಶ್ವರ ಲಿಂಗ, ಮಾದಾರ ಯ್ಯನ ನಿಜಾತ್ಮ ರಾಮ ರಾಮನಾ, ಮೇರೆ ಮಿಂಡಯ್ಯನ ರಾಮೇಶ್ವರ ಲಿಂಗ ಇನ್ನೂ ಂತಾದ ವಚನಕಾರರ ಅಂಕಿತಗಳನ್ನು ವಿಶ್ಲೇಷಿಸುವುದರಿಂದ ಶಿವಭಕ್ತ ವಚನಕಾರರ ವಿಷ್ಣು ರ ಸಂಪ್ರದಾಯವೊಂದಿತ್ತೆಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಚನ್ನರಾಮ ಮತ್ತು ನಿಜಾತ್ಮ ು ರಾಮನಾ ಈ ಎರಡು ಅಂಕಿತಗಳು ಮಾತ್ರ ರಾಮ ಭಕ್ತ ವಚನಕಾರರವು ಎಂಬುದಂತೂ ವಾಗುತ್ತದೆ. ಅವರ ವಚನಗಳಲ್ಲಿ ಶಿವ ತತ್ತ್ವಕ್ಕೆ ಸಂಬಂಧಿಸಿದ ವಸ್ತುವೇ ಅಭಿವ್ಯಕ್ತವಾಗಿದ್ದರೂ ದೇವರು ಮಾತ್ರ ರಾಮನಾಗಿರುತ್ತಾನೆ. ಶ್ವೇತಾಶ್ವತರೋಪನಿಷತ್ತಿನಲ್ಲಿ ಬ್ರಹ್ಮ ತತ್ತ್ವವನ್ನು ರ ಎಂದು ಕರೆದಂತೆ, ಇಲ್ಲಿ ಶಿವನನ್ನು ರಾಮನೆಂದು ಕರೆದು ಸಾಧನೆ ಮಾಡಿರುವುದು ಬರುತ್ತದೆ. ಗುಪ್ತಮಂಚಣ್ಣನ ವಚನಗಳನ್ನು ಪರಿಶೀಲಿಸಿದರಂತೂ ಅವನು ನೇರವಾಗಿ ್ ಪಂಥದ ಶಿವಭಕ್ತ ಎಂಬುದು ಖಚಿತವಾಗುತ್ತದೆ. ಈ ವಚನಕಾರರೂ ಶಿವ ಪುರಾಣದ ನ್ನೇ ತಮ್ಮ ವಚನಗಳಲ್ಲಿ ಎತ್ತಿ ಹಿಡಿದಿರುವುದು ಕಂಡುಬರುತ್ತದೆ. ವಚನಕಾರರ 'ಪುರಾಣ ರ ಗೋಷ್ಠಿ' ಎಂಬ ಮಾತು ವಿಷ್ಣು ಪುರಾಣಕ್ಕೆ ಅನ್ವಯಿಸುತ್ತದೆಯೇ ಹೊರತು, ಶಿವ ಣಕ್ಕಲ್ಲ ಎಂಬುದು ವಚನಗಳ ಅಧ್ಯಯನದಿಂದ ತಿಳಿಯುತ್ತದೆ. ಶಿವ ಪುರಾಣಗಳ

ಪ್ರಸಂಗಗಳನ್ನು ವಚನಗಳಲ್ಲಿ ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ವಚನಕಾರರು ಧಾರಾಳವಾಗಿ ಬಳಸಿದ್ದಾರೆ. ರಾಮ ಶಿವಭಕ್ತನಾಗಿ ಶಿವ ಪುರಾಣಗಳಲ್ಲಿ ಮನ್ನಣೆಗಳಿಸಿದ್ದಾನೆ. ಅದರಂತೆಯೇ ಶಿವಭಕ್ತನಾದ ಶ್ರೀರಾಮನ ಪೂಜೆಯ ಶಿವಭಕ್ತರು ವಚನಕಾರರಾಗಿ ವೀರಶೈವರಲ್ಲಿ ಮಾನ್ಯತೆ ಪಡೆದು ವಚನ ರಚಿಸಿದ್ದಾರೆ. ಅವರಿಗೆ ರಾಮ ಪೂಜೆ ಗೌಣವಾಗಿ ಶಿವ ಪ್ರಧಾನ ಅಥವಾ ರಾಮನ ಮೂಲಕ ಶಿವನ ಸಾಕ್ಷಾತ್ಕಾರಮಾಡಿಕೊಳ್ಳುವ ಗುರಿ ಅವರದ್ದು. ವೀರಶೈವ ಸಾಹಿತ್ಯದಲ್ಲಿ ಬರುವ ಹರಿಹರ, ರಾಘವಾಂಕ, ಸಿದ್ಧರಾಮ, ಲಕ್ಕಮ್ಮ ಲಕ್ಷ್ಮಮ್ಮ- ಮುಂತಾದ ಹೆಸರುಗಳನ್ನು ಪರಿಶೀಲಿಸಿದರೆ, ಅವರು ಶಿವಭಕ್ತರಾದ ವಿಷ್ಣುಪೂಜೆಯ ಸಂಪ್ರದಾಯದವರು ಎಂಬುದು ಸ್ಪಷ್ಟವಾಗುತ್ತದೆ. ಇವರನ್ನು ಭವಿಗಳೆಂದು ಕರಯುವಂತಿಲ್ಲ. ಇವರು ಶಿವ ತತ್ತ್ವವನ್ನೇ ಮುಖ್ಯವಾಗಿ ಪರಿಗಣಿಸಿದ್ದಾರೆ. ಶಿವನೇ ಅವರಿಗೆ ಪೀಠಾಧಿಪತಿ, ಶ್ರೀರಾಮ ಪರಿವಾರದೇವರು. ಆದ್ದರಿಂದ ಅವರು ಶಿವಪುರಾಣ ಸಂಪ್ರದಾಯದ ಶಿವಭಕ್ತ ವಿಷ್ಣುಪೂಜೆಯ ಶಿವಭಕ್ತರು. ಇಂತಹ ಭಕ್ತರನ್ನು ನಾಮಧಾರಿ ಲಿಂಗಾಯಿತರು ಎಂದು ಕರೆಯುವುದರಲ್ಲಿ ಯಾವ ತಪ್ಪೂ ಇರುವುದಿಲ್ಲ. ದೇವರ ದಾಸಿಮಯ್ಯನ ಇಷ್ಟದೈವ ರಾಮನಾಥ. ರಾಮನಾಥ ಎಂದರೆ ರಾಮನ ಒಡೆಯ ಎಂದು ಅರ್ಥ. ಒಡೆಯ ಎಂದರೆ ಈಶ್ವರ ಅಥವಾ ಶಿವ ಎಂಬ ಅರ್ಥವನ್ನು ಹೇಳಲಾಗಿದೆ. ಒಡೆಯ ಎಂದರೆ ವಿಷ್ಣು, ಶಿವ ಮತ್ತು ಬ್ರಹ್ಮರಲ್ಲಿ ಯಾರಾದರೂ ಆಗಬಹುದು. ಆದರೂ ದಾಸಿಮಯ್ಯ ಮೂಲತಃ ಶಿವಭಕ್ತನಾದುದರಿಂದ 'ನಾಥ' ಎಂಬ ಪದಕ್ಕೆ 'ಶಿವ' ಎಂದು ಅರ್ಥೈಸುವುದು ಸೂಕ್ತವಾಗಿದೆ. ಆದರೆ ದೇವರ ದಾಸಿಮಯ್ಯನಿಗೆ ಈಶ್ವರ ಎಷ್ಟು ಮುಖ್ಯವೋ ರಾಮನೂ ಅಷ್ಟೇ ಮುಖ್ಯ. ರಾಮನ ಮೂಲಕ ಈಶ್ವರನ ಸಾಕ್ಷಾತ್ಕಾರ ಅಷ್ಟೆ. ದಾಸಿಮಯ್ಯನ ಕುಲದವರಾದ ದೇವಾಂಗದವರು ತಮ್ಮ ಕುಲ ದೇವತೆಯನ್ನು ರಾಮಲಿಂಗ ಚೌಡೇಶ್ವರಿ ಎಂದು ಕರೆಯುವುದು ರೂಢಿ. ಅವರು ರಾಮನವಮಿಯನ್ನು ಆಚರಿಸುತ್ತಾರೆ. ದೇವಾಂಗದವರಿಗೆ ಶಿವ ಮತ್ತು ವಿಷ್ಣು ಪೂಜೆಯಲ್ಲಿ ಭೇದವಿಲ್ಲ. ಒಟ್ಟಿನಲ್ಲಿ ವಿಷ್ಣು ಪೂಜೆಯ ಸಂಪ್ರದಾಯ ಶಿವಭಕ್ತ ವಚನಕಾರರಲ್ಲಿ ಇತ್ತೆಂಬುದನ್ನು ಗುಪ್ತಮಂಚಣ್ಣ ಮತ್ತು ಇತರರ ವಚನಗಳ ಅಧ್ಯಯನದಿಂದ ಖಚಿತವಾಗುತ್ತದೆ.

೩

ಶಿವಭಕ್ತ ವಚನಕಾರರ ವಿಷ್ಣು ಪೂಜೆಯ ಸಂಪ್ರದಾಯದವರಲ್ಲಿ ಗುಪ್ತಮಂಚಣ್ಣ ಅತ್ಯಂತ ಪ್ರಮುಖನಾದವನು. ಅವನು ಬಸವಣ್ಣ ಮತ್ತು ಬಿಜ್ಜಳ ಇಬ್ಬರಿಗೂ ಆಪ್ತನಾದವನು. ಬಿಜ್ಜಳನ ಆಸ್ಥಾನದಲ್ಲಿ ಉನ್ನತ ಪದವಿ ಪಡೆದಿದ್ದ ಅವನ ಬಗ್ಗೆ ವಿದ್ವಾಂಸರಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳಿವೆ. ಬಸವಣ್ಣನ ಕೀರ್ತಿಯನ್ನು ಸುಳ್ಳು ವದಂತಿ ಹಬ್ಬಿಸಿ ಹೆಚ್ಚಿಸಿದವನೆಂದು ಮಂಚಣ್ಣನ ಬಗ್ಗೆ ಶಿವಭಕ್ತರಿಗೆ ಹೆಚ್ಚು ವಿಶ್ವಾಸ. ಬಿಜ್ಜಳನ ಹಿಂಬಾಲಕರು ಬಸವಣ್ಣ ಮಂಚಣ್ಣನನ್ನು ಕೊಲೆಮಾಡಿಸಿದನೆಂದು ಆಪಾದಿಸಿದ್ದಾರೆ. ಮಂಚಣ್ಣನ ಭಕ್ತಿಯಂತೆ, ಅವನ ಅಂತ್ಯವೂ ಒಂದು ಸಮಸ್ಯಾತ್ಮಕವಾದುದು. ವೀರಶೈವರು ಮಂಚಣ್ಣನನ್ನು ಗುಪ್ತಭಕ್ತನೆಂದೂ, ನಾರದನ ಮತ್ತು ಗುಪ್ತಗಣೇಶ್ವರನ ಅವತಾರ ಎಂದೆಲ್ಲಾ ಕರೆದಿದ್ದಾರೆ. ಆದರೆ ಮಂಚಣ್ಣನ ವಚನಗಳಲ್ಲಿ ಬರುವ

ಅವನ ವ್ಯಕ್ತಿತ್ವವೇ ಬೇರೆಯದಾಗಿದೆ. ಅವನ ವಚನಗಳು ಇತರ ವಚನಗಳಿಗಿಂತ ಭಿನ್ನವಾಗಿದ್ದು, ಬಿಚ್ಚು ಮನಸ್ಸಿನ ನೇರ ನುಡಿಗಳಿಗೆ ಪ್ರಸಿದ್ಧವಾಗಿವೆ. ಅನ್ಯರು ತನ್ನನ್ನು ಗುಪ್ತಭಕ್ತನೆಂದು ಕರೆಯುವುದನ್ನು ಅವನು ಒಪ್ಪುವುದಿಲ್ಲ. ಅವನಿಗೆ ಭಕ್ತಿಯಲ್ಲಿ ಮುಚ್ಚುಮರೆಯ ದ್ವಿಮುಖ ಬದುಕು ಇಚ್ಛೆಯಿಲ್ಲ. 'ನಾ ವಿಶ್ವಾಸಿಯಾದಡೆ ಗುಪ್ತ ಭಕ್ತಿಯ ಮಾಡಲೇಕೆ? ನಾ ವಿಶ್ವಾಸಿಯಾದೊಡೆ ಹರಿವೇಷವಂ ತೊಟ್ಟು, ಹರನ ಹರಣದಲ್ಲಿ ಇರಿಸಿಹೆನೆಂಬ ಸಂದೇಹವೇತಕ್ಕೆ?' ಎಂದು ಪ್ರಶ್ನಿಸುತ್ತಾನೆ. ತನ್ನ ಹೊರ ವೇಷ ಹರಿಯದು ಅಂದರೆ ವಿಷ್ಣು ಪಂಥದ್ದು. ಆದರೆ ಪ್ರಾಣ ಮಾತ್ರ ಶಿವನದು. ಇದರಲ್ಲಿ ಯಾವ ಸಂಶಯವೂ ಬೇಡ ಎಂದು ಸ್ಪಷ್ಟಪಡಿಸುವಲ್ಲಿ ಅವನು ಶಿವಭಕ್ತನಾದ ವಿಷ್ಣುಪೂಜಕ ಎಂಬುದು ಖಚಿತವಾಗಿ, ಅವನು ನಾಮಧಾರಿ ಲಿಂಗಾಯಿತ ಎಂದಾಗುತ್ತದೆ. ಹಣೆಗೆ ಹಚ್ಚುವುದು ನಾಮ, ಮುಡಿಯುವುದು ತುಳಸಿ, ಪಠಿಸುವುದು 'ಓಂ ನಮೋ ನಾರಾಯಣಾಯ' ಎಂಬ ಮೂಲ ಮಂತ್ರ. ಆದ್ದರಿಂದ ತಾನು ಹರಿಭಕ್ತನೇ ಹೊರತು ಶಿವಭಕ್ತನಲ್ಲ ಎಂದು ದಿಟ್ಟತನದಿಂದ ಘೋಷಿಸುತ್ತಾನೆ:

ಆನು ನಾಮದ ದಾಸನಲ್ಲದೆ
ದಾಸೋಹದ ದಾಸನಲ್ಲ
ಹರಿಭಕ್ತನಲ್ಲದೆ, ಶಿವಭಕ್ತನಲ್ಲ
ಎನಗಾ ಹರಿಭಕ್ತಿಯೆ ಸಾಕು. ಎನಗದು ನೆಲೆಗೊಳ್ಳದು
ನಾರಾಯಣಪ್ರಿಯ ರಾಮನಾಥ.

ಸ. ಪು. ವ. ೨ ವ. ೫೮೨ / ೩೭

ನಾಮದ ದಾಸ ವಿಷ್ಣುಭಕ್ತ. ದಾಸೋಹದ ದಾಸ ಶಿವಭಕ್ತ. ಮಂಚಣ್ಣ ಶಿವಭಕ್ತನಾದರೂ, ತನ್ನ ದೀಕ್ಷಾ ಪೂರ್ವದ ದೈವವಾದ ವಿಷ್ಣುಪೂಜೆಯನ್ನು ಬಿಡುವುದಿಲ್ಲ. ಆದರೆ ಅವನಿಗೆ ಶಿವ ಪ್ರಾಣ ಸ್ವರೂಪಿ. ಬಹಿರಂಗದಲ್ಲಿ ವಿಷ್ಣುಪೂಜಕನಾದರೂ, ಅಂತರಂಗದಲ್ಲಿ ಮಾತ್ರ ಶಿವನಲ್ಲಿ ಏಕನಿಷ್ಠೆಯುಳ್ಳವನು. ಮಂಚಣ್ಣ ಮತಾಂತರಿಯಾದರೂ ಶಿವ ಪಂಥದ ವಿಭೂತಿ, ರುದ್ರಾಕ್ಷಿ, ಶಿವ ಮಂತ್ರಕ್ಕೆ, ವಿಷ್ಣು ಪಂಥದಿಂದ ಸಂಪೂರ್ಣ ಬದಲಿಸಲಾರ. ಅವನಿಗೆ ಶಿವಪಂಥದ ಪರಿಕರಗಳು ಒಗ್ಗಿಬರಲಿಲ್ಲ. ಆದ್ದರಿಂದ ಶಿವಭಕ್ತನಾಗಿ ವಿಷ್ಣುಪಂಥದ ಆಚರಣೆಯನ್ನೇ ಮುಂದುವರಿಸಿದನು. ಆದರೆ ಅವನು ಆ ವಿಷಯವಾಗಿ ಒಳಗೊಂದು ಹೊರಗೊಂದು ಅನುಸರಿಸಲು ಇಷ್ಟಪಡಲಿಲ್ಲ. ವಿಷ್ಣುಪೂಜೆಯ ತಾನು ಗುಪ್ತ ಭಕ್ತನಲ್ಲವೆಂದೂ, ಶಿವಭಕ್ತನಾಗಿ ವಿಷ್ಣುವನ್ನು ಪೂಜಿಸುವುದು ಅವಮಾನವಲ್ಲವೆಂದೇ ಅವನ ಭಾವನೆ:

ಕಳವು ಹಾದರಕ್ಕೆ ಗುಪ್ತ
ಶಿವಭಕ್ತಿ, ಶಿವಪೂಜೆ, ಶಿವಜ್ಞಾನ ಇಂತಿವಕ್ಕೆ
ಬಾಹ್ಯಾಡಂಬರವೆ

ಅಱಿವುದೊಂದು ಅಱುಹಿಸಿಕೊಂಬುದೊಂದು
ಇಂತೀ ಉಭಯ ಸುಖ ಸಂಭಾಷಣವಲ್ಲದೆ
ಅಟ್ಟೆಯ ಪೂಜೆ ಕರ್ಕಸದನುಭಾವ
ಡೊಂಬರ ಡೊಳ್ಳ ಕೇಳಿ, ಬಂದವರೆಲ್ಲರು ನಿಂದು ನೋಡಿ
ತಮ್ಮ ತಮ್ಮ ಮಂದಿರಕ್ಕೆ ಹೋ ಹಂತಾಯಿತ್ತು
ಈ ಪಥದ ಸಂದನಾರು ಅಱಿಯರು;
ನಾರಾಯಣಪ್ರಿಯ ರಾಮನಾಥನಲ್ಲಿ ತನ್ನ ತಾನೇ ತಿಳಿದ ಶರಣ ಬಲ್ಲ.

ಸ. ಪು. ವ. ೨ ವ. ೫೮೦/ ೩೫

ಅಡ್ಡಹಾದಿ ಹಿಡಿದವರಿಗೆ ಮುಚ್ಚುಮರ. ಆದರೆ ದೇವರ ಹಾದಿ ಹಿಡಿದವನಿಗೆ 'ಗುಪ್ತ' ಏಕೆ? ವಿಷ್ಣುಭಕ್ತನಾದ ಅವರಿಗೆ ಶಿವಭಕ್ತ ನಿಷಿದ್ಧವಲ್ಲ ಅಥವಾ ಅವಮಾನವಲ್ಲ. ಬಹುಶಃ ಇಂಥ ಬಹುದೇವತೋಪಾಸಕರಿಗೆ ಶಿವಭಕ್ತಿಯಲ್ಲಿ ಗೌರವವಾಗಲಿ, ಸ್ಥಾನಮಾನವಾಗಲಿ ದೊರೆಯದೆ, ಏಕನಿಷ್ಠ ಶಿವ ಭಕ್ತರ ಅಪಹಾಸ್ಯಕ್ಕೆ ತುತ್ತಾಗುತ್ತಿದ್ದರು ಎಂದು ಕಾಣುತ್ತದೆ. ಅಂಥ ಬಹುದೇವತೋಪಾಸಕರು ಶಿವಭಕ್ತರಿಗೆ ಕಾಣದಂತೆ ವಿಷ್ಣುಪೂಜೆಯನ್ನೋ, ವಿಷ್ಣುಭಕ್ತರಿಗೆ ಕಾಣದಂತೆ ಶಿವಭಕ್ತಿಯನ್ನೋ ಆಚರಿಸಿ ಗುಪ್ತಭಕ್ತರಾಗಿ ಸಾಧನೆ ಮಾಡುತ್ತಿದ್ದರು. ಮಂಚಣ್ಣ ಇಂಥ ದ್ವಿಮುಖವಾದ ರಹಸ್ಯ ಸಾಧನೆಯ ಬಹುದೇವತೋಪಾಸನೆಯನ್ನು ಕದ್ದು ಆಚರಿಸದೆ, ನೇರವಾಗಿ ಆಚರಿಸಿ ಧೈರ್ಯವನ್ನು ಮೆರೆದಿದ್ದಾನೆ. ಅಂದರೆ ಏಕದೇವತೋಪಾಸನೆಯ ವೀರಶೈವ ಪಂಥದಲ್ಲಿ ಬಹುದೇವತೋಪಾಸನೆಯನ್ನು ಎತ್ತಿ ಹಿಡಿದು ದಿಟ್ಟತನ ತೋರಿದ ವಚನಕಾರರಲ್ಲಿ ಮೊತ್ತ ಮೊದಲಿಗ ಗುಪ್ತಮಂಚಣ್ಣ ಎಂದರೆ ತಪ್ಪಾಗದು. ಶಿವಭಕ್ತಿ, ಶಿವಪೂಜೆ ಮತ್ತು ಶಿವಜ್ಞಾನಕ್ಕೆ ಗುಪ್ತಮಾರ್ಗ ಅನಗತ್ಯ, ಬಾಹ್ಯವಿಧಿ ಶಿವ ಅಥವಾ ವಿಷ್ಣು ಪಂಥದ್ದಾದರೂ, ಅಂತ್ಯದಲ್ಲಿ 'ಅಱಿವುದೊಂದು ಅಱುಹಿಸಿಕೊಂಬುದೊಂದೆ' ಅಂದರೆ ಅರಿಯುವ ವಸ್ತುವಿನ ಮುಂದೆ ಶಿವ ಅಥವಾ ವಿಷ್ಣು ಪೂಜೆ ಗೌಣವಾದುದು, ಅರಿವ ವಸ್ತು ಮಾತ್ರ ಪ್ರಧಾನವಾದುದು. ಲಾಂಛನ, ಮಂತ್ರ ಮುಂತಾದುವನ್ನು ಹಿಡಿದು ನಡೆಸುವ ಜಗ್ಗಾಟ ಅನಗತ್ಯ ಎಂದೇ ಅವನ ಅಭಿಪ್ರಾಯ:-

ಕೆರೆ ತೊರೆ ಬಟ್ಟೆ ಬಾಗಿಲಲ್ಲಿ ಪೂಜಿಸಿಕೊಂಬವ
ದೈವವೆಂದು ಪ್ರಮಾಣಿಸುವಲ್ಲಿ,
ತಮ್ಮ ಮನಕ್ಕೆ ಸಂದೇಹವಂ ಬಿಡಿಸಿದೆವೆಂದು
ತಮ ತಮಗೆ ಹಿಂಗದ ದೈವವೆಂದು
ನಿಂದು ಹೋರಲಾಗಿ ಕೊಂದನೆ ಶಿವನು?
ಅವ ಅಂಗದ ಪ್ರಮಾಣು ಇದಕ್ಕೆ ಕೊಂಡಾಡಲೇತಕ್ಕೆ
ನಾರಾಯಣಪ್ರಿಯ ರಾಮನಾಥ?

ಸ. ಪು. ವ. ೨ ವ. ೫೮೯ / ೪೪

ಬಹುದೇವತೋಪಾಸನೆಯ ಸ್ವಾತಂತ್ರ್ಯವನ್ನು ಎತ್ತಿಹಿಡಿದಿರುವುದನ್ನು ಕಾಣ ಬಹುದು. ವ್ಯಕ್ತಿಯ ಭಾವ ನಷ್ಟಗೊಳಿಸುವುದು ಸರಿಯಲ್ಲ. ಪೂಜೆಯ ಆತ್ಮಸಾಕ್ಷಿಗೆ ಅವಕಾಶವುಂಟು. ದೇವರ ಹೆಸರಿನಲ್ಲಿ ಹಿಂಸೆ ಸರಿಯಲ್ಲ. ಶಿವ ಅನ್ಯ ದೇವರನ್ನೇನೂ ಕೊಂದಿಲ್ಲ. ಆದ್ದರಿಂದ ದೇವರ ಉಪಾಸನೆಯಲ್ಲಿ ರಕ್ತಪಾತ ಸಲ್ಲದು ಎನ್ನುವ ಮಂಚಣ್ಣನ ಮಾತಿನಲ್ಲಿ ಅಂದಿನ ಕಾಲದಲ್ಲಿ ಮತದ ಹೆಸರಿನಲ್ಲಿ ನಡೆಯುತ್ತಿದ್ದ ದ್ವೇಷಾಸೂಯೆಯ ಖಂಡನೆ ಇದೆ. ದೇವರ ಪೂಜೆ 'ಅವ ಱಂಗದ ಪ್ರಮಾಣು' ಎಂಬ ಮಾತು ತುಂಬಾ ಅರ್ಥಗರ್ಭಿತವಾಗಿದೆ. ದೇಹದ ಮೇಲೆ ಧರಿಸುವ ನಾಮ ಅಥವಾ ವಿಭೂತಿ ಶಿವ ಸಾಕ್ಷಾತ್ಕಾರದ ಅರಿವಿನ ಸಾಧನೆಗೆ ಅಡ್ಡಿ ಬರುವುದಿಲ್ಲ ಎಂಬ ಧ್ವನಿ ಇದೆ. ಅವರವರ ಆಚರಣೆಯ ಸಂಪ್ರದಾಯದ ಅನುರಣೆಯಿಂದ ತಾತ್ತ್ವಿಕ ಸಾಧನೆಗೆ ಭಂಗಬರುವುದಿಲ್ಲ ಎಂಬ ಸೂಚನೆ ಇದೆ. ಧಾರ್ಮಿಕ ಆಚರಣೆಯನ್ನು ಮೀರಿ ನಿಂತಿರುವುದು ತಾತ್ತ್ವಿಕ ವಸ್ತು ಕಲ್ಪನೆ. ಧಾರ್ಮಿಕ ಹಂತದಲ್ಲಿ ಭೇದ, ಘರ್ಷಣೆ ಮತ್ತು ರಕ್ತಪಾತಕ್ಕೆ ಅವಕಾಶವಿದ್ದರೂ, ಅದರ ತಾತ್ತ್ವಿಕ ಹಂತದಲ್ಲಿ ಸಾಮರಸ್ಯ, ಸಿದ್ಧಿಯಾಗಿ ಎಲ್ಲಾ ತರತಮವೂ ಛಿದ್ರವಾಗುತ್ತದೆ. ಅರಿಯಸಿಕೊಳ್ಳುವ ವಸ್ತು ಮತ್ತು ಅರಿಯುವ ಭಕ್ತರ ನಡುವೆ ಯಾವ ಮಧ್ಯವರ್ತಿ ಸಾಧನ ಮಾಧ್ಯಮಗಳೂ ಗೌಣವಾಗುತ್ತವೆ. ಆದ್ದರಿಂದ ವಸ್ತುವಿನಲ್ಲಿ ಏಕನಿಷ್ಠ ಶಿವಭಕ್ತ ನಾಮಧರಿಸಿ ಹರಿಭಕ್ತನಾಗಿ ಶಿವಸಾಕ್ಷಾತ್ಕಾರವನ್ನು ಮಾಡಬಹುದು. ಆಗ ಮಾತ್ರ ಶಿವಪಥದ ಸಂದು ಅರಿವಾಗುತ್ತದೆ. ಆದರೆ ಬಹುದೇವತೋಪಾಸಕ ಶಿಭಕ್ತನಿಗಿಂತ ಶಿವನಲ್ಲಿ ಏಕನಿಷ್ಠೆ ಹೊಂದಿರುವೆನೆಂಬ ವೇಷಧಾರಿ ಡಾಂಭಿಕ ಭಕ್ತನ ಸಾಧನೆ ವ್ಯರ್ಥವೇ ಸರಿ:-

ಡಂಬಕದ ಪೂಜೆ ಹೋಹ ಹೊತ್ತಿನ ಕೇಡು
ಆಡಂಬರದ ಪೂಜೆ ತಾಮ್ರದ ಮೇಲಣ ಸುವರ್ಣದ ಛಾಯೆ
ಇಂತೀ ಪೂಜೆಗೆ ಹೂಸೊಪ್ಪನಿಕ್ಕಿ ಮನ ಹೂಣದೆ ಮಾಡುವ ಪೂಜೆ
ಬೇರು ನನೆಯದ ನೀರು, ಆಯವಿಲ್ಲದ ಘಾಯ,
ಭಾವವಿಲ್ಲದ ಘಟ ವಾಯವೆಂದೆ
ನಾರಾಯಣಪ್ರಿಯ ರಾಮನಾಥಾ.

ಸ. ಪು. ವ ೨ ವ. ೫೯೯/ ೫೪

ಡಂಬಕ ಪೂಜೆ ವ್ಯರ್ಥವಾದುದು. ಅಲ್ಲದೆ ಆಡಂಬರದ ಪೂಜೆಯನ್ನು 'ತಾಮ್ರದ ಮೇಲಣ ಸುವರ್ಣದ ಛಾಯೆ' ಎಂದು ಕರೆದಿರುವುದು ಅರ್ಥವತ್ತಾಗಿದೆ. 'ಗಿಲಿಟ್ಟ'ನ ಮಾತು ನೆನಪಾಗುತ್ತದೆ. ಗುಪ್ತ ಭಕ್ತಿಗಿಂತ, ಬಹು ದೇವತೋಪಾಸನೆಗಿಂತ ಅಪಾಯಕಾರಿಯಾದುದು ಏಕದೇವತೋಪಾಸಕರ ಡಾಂಭಿಕತನದ ಪೂಜೆ:-

ಲಿಂಗಪೂಜೆಯ ಮಾಡುವಲ್ಲಿ ಮನ
ಗುಱಿಯ ತಾಗಿದ ಕೋಲಿನಂತಿರಬೇಕು
ಶಿವಲಿಂಗಪೂಜೆಯ ಮಾಡುವಲ್ಲಿ,
ಶ್ರವಕ್ಕೆ ಸಂಜೀವನ ಹುಟ್ಟಿದಂತಿರಬೇಕು

ಹೀಗಲ್ಲದೆ ಪೂಜೆಯಲ್ಲ
ಒಳಗಳ ಹುಳುಕು ಮೇಲಕ್ಕೆ ನಯ ಉಂಟೆ,
ಆ ತರು ಒಣಗುವವಲ್ಲದೆ
ಇಂತೀ ಬಱುಬರ ಅರ್ಚನೆ ಹುಱಿಯ ಬೊಂಬೆಯಂತೆ
ಇಂತೀ ಅಱುಗುಱುಗಳ ಪೂಜೆ ಬಱುಕಟೆಯಂತೆ
ನಾರಾಯಣಪ್ರಿಯ ರಾಮನಾಥಾ.

ಸ. ಪು. ವ. ೨. ವ. ೫೯೯ / ೫೪

ಲಿಂಗಪೂಜೆ ಬಾಣ ಬಿಟ್ಟಂತೆ ನೇರವಾಗಿ ಹೋಗಿ ಗುರಿತಾಗಬೇಕು. ಇಲ್ಲದಿದ್ದರೆ ಒಳಗಿನ ಹುಳುಕು ಇರುವ ಮರ ಒಂದಲ್ಲ ಒಂದುದಿನ ಬತ್ತಿಹೋಗುವಂತೆ ಆಡಂಬರದ ಪೂಜೆ ವ್ಯರ್ಥ. ಕೀರ್ತಿಗಾಗಿ ಜಗತ್ತನ್ನು ಕೊಂಡು ಮಾಡುವ ಭಕ್ತಿಯಾಗಲಿ, ಜಗತ್ತನ್ನು ಮೆಚ್ಚಿಸಬೇಕೆಂದು ಮಾಡುವ ಭಕ್ತಿಯಾಗಲಿ ಪ್ರಯೋಜನವಿಲ್ಲ.

ಈಶ್ವರಮೂರ್ತಿಯ ಕರಕಮಲಕ್ಕೆ ತಂದಲ್ಲಿ,
ಕಣ್ಮನ ಮೂರ್ತಿಧ್ಯಾನ ಹೆರ ಹಿಂಗದ ಅಕ್ಕಱಿಂದ,
ಭಾವ ಭ್ರಮಿಸದೆ, ಚಿತ್ತ ಸಂಚಾರಿಸದೆ
ಮನ ವಚನ ಕಾಯ ಭಿನ್ನಭಾವವಿಲ್ಲದೆ
ಪೂಜಿಸುವ ಕೈಯೂ ತಾನಾಗಿ, ಅಱಿದ ಮನವೂ ತಾನಾಗಿ,
ಹೊತ್ತಿಪ್ಪ ಅಂಗದ ಮೇಲೆಯೂ ತಾನಾಗಿ
ಹೆಱೆ ಹಿಂಗದ ಪೂಜೆಯ ಮಾಡುತಿರ್ಪ
ಆತನ ಅಂಗವೆ ಲಿಂಗ, ಆತನಿದ್ದುದೆ ಅವಿಮುಕ್ತಿ ಕ್ಷೇತ್ರ
ಇಂತಪ್ಪ ಮಹಾಮಹಿಮ
ನಾರಾಯಣಪ್ರಿಯ ರಾಮನಾಥ ತಾನು ತಾನೆ.

ಸ. ಪು. ವ. ೨ ವ. ೫೯೮ / ೫೩

ಇದರಲ್ಲಿ ಶಿವನಲ್ಲಿ ಏಕನಿಷ್ಠೆಯ ಭಾವ ವ್ಯಕ್ತವಾಗಿದೆ. ಏಕನಿಷ್ಠೆಗೆ ಬಹು ದೇವತೋಪಾಸನೆ ಅಡ್ಡಿ ಬರುವುದಿಲ್ಲ. ಏತಕ್ಕೆಂದರೆ ಮಂಚಣ್ಣನ ಇಷ್ಟದೈವ ವಿಷ್ಣು, ಶಿವಭಕ್ತ:-

ಎನ್ನ ಹರಿಭಕ್ತಿಯಿಂದ ಸಾವಿರ ಕಮಲ ಕುಸುಮತಂದು
ಪಶುಪತಿಯ ಚರಣಕ್ಕೆ ಒಸೆದು ಮಾಡುತಿರಲಾಗಿ,
ಶಶಿಧರ ಒಂದು ಕುಸುಮದ ಕಡಿಮೆ ಮಾಡಲಾಗಿ,
ಹುಸಿಯ ಹೊಱಲಾರದೆ ತೆಗೆದಿಕ್ಕಿದ ಕಣ್ಣು
ಕಾಲ ಸಂಹಾರನ ಕಾಲಲಿದೆ
ಇದು ಕಾರಣ ನಾರಾಯಣಪ್ರಿಯ ರಾಮನಾಥ.

ಸ. ಪು. ವ. ೨ವ. ೫೮೩ / ೩೮

ಇಲ್ಲಿ ಬರುವ ವಿಷ್ಣುವಿನ ಶಿವಭಕ್ತಿ ಶಿವಪುರಾಣದಲ್ಲಿ ಬರುವ ವಿಷ್ಣು ವರ್ಣನೆಗೆ ಸಾಕ್ಷಿ. ವಿಷ್ಣು ದಿನ ನಿತ್ಯದ ಶಿವನ ಪೂಜೆಯಲ್ಲಿ ಒಂದು ಹೂ ಕಡಿಮೆ ಬರಲು ತನ್ನ ಕಣ್ಣನ್ನೇ ಶಿವನಿಗೆ ಅರ್ಪಿಸಿ ಶಿವಪೂಜೆಯನ್ನು ಪೂರ್ಣಗೊಳಿಸಿ ಶಿವನಲ್ಲಿ ಏಕನಿಷ್ಠೆಯನ್ನು ತೋರಿದ ಮಹಾ ಶಿವಭಕ್ತ ವಿಷ್ಣು. ಅಂಥ ಶಿವಭಕ್ತ ವಿಷ್ಣುವಿನ ಸೇವಕನಾಗಿ ಮಾಡುವ ಪೂಜೆ ಶಿವಭಕ್ತಿಗೆ ವಿರುದ್ಧವಲ್ಲ ಎಂಬುದು ಮಂಚಣ್ಣನ ಮಾತಿನಿಂದ ಸ್ಪಷ್ಟವಾಗುತ್ತದೆ. ಅದೂ ಅಲ್ಲದೆ ವಿಷ್ಣುವಿನ ದಶಾವತಾರ ಶಿವನ ಸೇವೆಗಾಗಿ:-

ಹರಿ ಮಾಡಿದ ಭಕ್ತಿಗೆ ಕಡೆ ನಡು ಮೊದಲಿಲ್ಲ
ಜಗದ ಕಂಟಕ ಬಂದಲ್ಲಿ,
ದಶಾವತಾರನಾಗಿ ಪಶುಪತಿಯ ಸೇವೆ ಮಾಡಿದ
ಶಶಿಶೇಖರನ ಆಲಯದಲ್ಲಿ ಪತಿಭಕ್ತಿಯಾಗಿಪ್ಪ
ನಾರಾಯಣನ ಜಗವೇಷವಂ ತಾಳಿ
ಇಂತಿವರೆಲ್ಲರೂ
ಎನ್ನ ರಾಮನಾಥ ಗೋವಿಂದ ಗೋವಿಂದ ಎನುತಿದ್ದರು.

ಸ. ಪು. ವ. ೨ ವ. ೫೮೪/ ೩೯

ವಿಷ್ಣು ಲೋಕಕ್ಕೆ ಕಂಟಕ ಬಂದಾಗ, ದಶವತಾರ ಎತ್ತಿ ಅದನ್ನು ರಕ್ಷಿಸಿ ಶಿವನ ಸೇವೆ ಸಲ್ಲಿಸಿದನು. ದಶಾವತಾರದಲ್ಲಿಯೂ ಶಿವನ ಭಕ್ತನಾಗಿ ವಿಷ್ಣು ಶಿವನ ಸೇವೆ ಸಲ್ಲಿಸಿದನು. ಅಂಥ ವಿಷ್ಣುವಿನ ಸ್ವರೂಪವಾದ ಜಗತ್ತಿನಲ್ಲಿ ಗೋವಿಂದ ಗೋವಿಂದ ಎಂದು ಭಜಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಭಕ್ತ ಶಿವನ ಸ್ವರೂಪವೇ ಸರಿ. ಶಿವಭಕ್ತನ ಸೇವೆ ಶಿವನ ಸೇವೆ. ಅಂದರೆ ವಿಷ್ಣುವಿನ ಪೂಜೆ ಶಿವನ ಪೂಜೆಯೇ ಆಗುತ್ತದೆ. ವಿಷ್ಣು ಶಿವನಿಂದ ಬೇರೆ ಅಲ್ಲ. ಶಿವ ಪೂರ್ಣನಾದರೆ ವಿಷ್ಣು ಅವನ ಅಂಶ:-

ವಸ್ತು ಭಾವದ ಶಕ್ತಿ ಸ್ವರೂಪವು ವಿಷ್ಣು
ವಿಷ್ಣು ಭಾವದ ಶಕ್ತಿ ಸ್ವರೂಪವು ಬ್ರಹ್ಮ
ಆ ವಿಷ್ಣುವಿನ ಅವತಾರ ಅರುಹಂತ
ಇಂತಿವೆಲ್ಲವು ವಸ್ತು ಬುಡವೆಂದಱಿದು
ಹೇಳುತ್ತದೆ ಪ್ರಣವದಲ್ಲಿ, ಸಾಗಿಸುತ್ತದೆ ವೇದ ಶಾಸ್ತ್ರ ಸಂದೇಹವಿಲ್ಲದೆ,
ಕೂಗುತ್ತದೆ ಪುರಾಣ ಪುಣ್ಯಗತಿ ಮತಿ ಒಬ್ಬನೆ ಎಂದು.
ಮುಕುರವ ಹಿಡಿದು ಮುಖವ ಕೇಳಲೇಕೆ;
ನಾರಾಯಣಪ್ರಿಯ ರಾಮನಾಥ?

ಸ. ಪು. ವ. ೨ ವ. ೫೯೨ / ೪೭

ಈ ವಚನದಲ್ಲಿ ಶಿವಭಕ್ತ ವಿಷ್ಣುವಿನ ಸ್ಥಾನ ಮತ್ತಷ್ಟು ಸ್ಪಷ್ಟವಾಗುತ್ತದೆ. ವಿಷ್ಣು ಶಿವನಿಂದ ಭಿನ್ನವಲ್ಲ,

ಶಿವನ ಒಂದು ಅಂಶ. ವಸ್ತು ಎಂಬುದು ವಚನಗಳಲ್ಲಿ ಉಪನಿಷತ್ತಿನ ಬ್ರಹ್ಮ ತತ್ತ್ವಕ್ಕೆ ಸಂವಾದಿಯಾಗಿ ಬರುತ್ತದೆ. ವಸ್ತುವಿಗೆ ಲಿಂಗ, ಬೆಳಕು, ಶಿವ ಎಂದೆಲ್ಲಾ ಅರ್ಥಗಳಿವೆ. ಅಂದರೆ ಶಿವ ಪುರುಷನಾಗಿ, ವಿಷ್ಣು ಶಕ್ತಿಯಾಗಿ ಈ ವಚನದಲ್ಲಿ ವರ್ಣಿತವಾಗಿದೆ. ಶಿವ ಶಕ್ತಿಯರ ಸಂಬಂಧದ ಅರ್ಥವೇ ಶಿವ ಮತ್ತು ವಿಷ್ಣುವಿನ ಸಂಬಂಧಕ್ಕೂ ಅನ್ವಯವಾಗುತ್ತದೆ. ಶಿವ ಪುರುಷ, ವಿಷ್ಣು ಶಕ್ತಿ-ಪುರಾಣಗಳಲ್ಲಿ ಶಿವ ವಿಷ್ಣುವನ್ನು ಕೂಡುವ ಕತೆಗಳು ಬರುತ್ತವೆ. ಇದು ಸಾಂಖ್ಯ ತತ್ತ್ವದಲ್ಲಿ ಬರುವ ಪುರಷ ಶಕ್ತಿಯ ಸಂಯೋಗ ತತ್ತ್ವದ ವ್ಯಾಖ್ಯಾನವಾಗಿದೆ. ಅದೂ ಅಲ್ಲದೆ ಅದರಲ್ಲಿ ತಾಂತ್ರಿಕ ಮತದ ಧಾರ್ಮಿಕ ವಿಧಿಯ ತತ್ತ್ವವೂ ಅಡಕವಾಗಿದೆ:-

ಬ್ರಹ್ಮ ಆಧಾರ ಚಕ್ರವಾದಲ್ಲಿ, ವಿಷ್ಣು ಯೋನಿಯಾದಲ್ಲಿ,
ರುದ್ರ ಪ್ರಜಾಪತಿಯಾಗಿ ಸಂಯೋಗವಾದಲ್ಲಿ ಜಗದ ವ್ಯಾಪಾರ.
ಇದು ಕಾರಣ, ತಲ್ಲೀಯವಾಗಲ್ಪಟ್ಟುದು,
ಲಿಂಗವೆಂದು ಹಿಂಗಿದೆ
ಅವನೆ ಇತ್ತ ಸಂಗದ ನಿಜವೆ ಅದೆ.
ನಾರಾಯಣಪ್ರಿಯ ರಾಮನಾಥನಲ್ಲಿ
ನಾಮ ರೂಪು ಲೇಪವಾದ ಶರಣ.

ಸ. ಪು. ವ. ೨ ವ. ೫೮೮ / ೪೩

ಯೋಗ ಸಾಧನೆಯ ಅನುಭಾವದ ಪಾರಿಭಾಷೆಯ ಶಬ್ದಗಳಲ್ಲಿ ಲಿಂಗಾಂಗ, ಶಿವ ಶಕ್ತಿ ಶಿವ ವಿಷ್ಣುವಿನ ಸಂಯೋಗದ ಸಾಮರಸ್ಯದಿಂದಲೇ ಜಗತ್ತಿನ ವ್ಯಾಪಾರ ನಡೆಯುತ್ತಿರುವುದರ ವರ್ಣನೆಯಿದೆ. ಆದ್ದರಿಂದ ವಿಷ್ಣುವಿನ ಶಿವಭಕ್ತಿ ಶರಣ ಸತಿ ಲಿಂಗ ಪತಿ ತತ್ತ್ವಕ್ಕೆ ವಿರುದ್ಧವಲ್ಲ. ಶಿವ ಪುರಾಣದ ಶಿವ ವಿಷ್ಣು ಸಾಮರಸ್ಯದ ಕಲ್ಪನೆ ವಚನಗಳಲ್ಲಿಯೂ ಮುಂದುವರಿದಿರುವುದನ್ನು ಕಾಣಬಹುದು. ವಚನಕಾರರ ಕಾಲಕ್ಕಿಂತ ಬಹು ಹಿಂದಿನಿಂದಲೇ ನಾಮಧಾರಿ ಲಿಂಗಾಯಿತರು ಅಸ್ತಿತ್ವದಲ್ಲಿದ್ದು ವಚನ ಕಾಲದಲ್ಲಿಯೂ ಮುಂದುವರಿದಿರುವುದು ನಿರ್ವಿವಾದವಾದ ಸಂಗತಿಯಾಗಿದೆ. ಆದರೆ ವೀರಶೈವ ತತ್ತ್ವಕ್ಕೆ ಇಂಥ ಒಂದು ಪಂಥ ವಿರುದ್ಧವಿಲ್ಲ. ಅನ್ಯದೇವರು ಹಾದರ ಎನ್ನುವ ತೀವ್ರಗಾಮಿ ಮತಾಂಧರ ತತ್ತ್ವವನ್ನು ವಿರೋಧಿಸುವ, ವಿಷ್ಣು ಮತ್ತು ಶಿವ ಪಂಥಗಳ ಸಾಮರಸ್ಯ ಸಾಧನೆಯಿಂದ, ಮತ ಮತ ಘರ್ಷಣೆಯಿಂದ ನಡೆಯುವ ರಕ್ತಪಾತ ತಪ್ಪಿಸುವ ಪ್ರಯತ್ನದ ಒಂದು ಪಂಥ ಎಂದೇ ನಾಮಧಾರಿ ಲಿಂಗಾಯಿತರ ಪಣವನ್ನು ಗುರುತಿಸಬಹುದು. ಆದರೆ ಬಹುದೇವತೋಪಾಸನೆಯಲ್ಲಿಯೇ ಏಕದೇವತೋಪಾಸನೆಯ ಸಾಧಕರು ನಾಮಧಾರಿ ಲಿಂಗಾಯಿತರು. ವಚನಗಳಲ್ಲಿ ಬರುವ ಬ್ರಹ್ಮ ವಿಷ್ಣು ಮತ್ತು ರುದ್ರ-ಈ ತ್ರಿಮೂರ್ತಿ ತತ್ತ್ವಪುರಾಣಗಳಲ್ಲಿ ಬರುವ ತತ್ತ್ವಕ್ಕಿಂತ ಭಿನ್ನವಾಗಿರುತ್ತದೆ. ತ್ರಿಮೂರ್ತಿ ತತ್ತ್ವ ಪುರಾಣಗಳಲ್ಲಿ ಬ್ರಹ್ಮತತ್ತ್ವಕ್ಕೆ ಸಂವಾದಿಯಾಗಿ ಬಂದರೆ, ವಚನಗಳಲ್ಲಿ ಬರುವ ತ್ರಿಮೂರ್ತಿಗಳು ಕರ್ಮ ಬದ್ಧರು ಮತ್ತು ಕಾಲವಶರು. ರುದ್ರ ದೈವವಾದರೆ ಕಪಾಲವನ್ನು ಹೊತ್ತು ತಿರುಗುವುದೇತಕ್ಕೆ? ವಿಷ್ಣು ದೈವವಾದರೆ

ದಶಾವತಾರಕ್ಕೊಳಗಾಗುವುದೇಕೆ? ಬ್ರಹ್ಮ ದೈವವಾದಡೆ ಶಿರವ ಹೋಗಾಡಲೇಕೆ?' ಇವು ಮೂರು 'ಅಳಿವಿಂಗೊಳಗು'. ತ್ರಿಮೂರ್ತಿಗಳು ಅನಾದಿ ಚಿಚ್ಛಕ್ತಿಯ ಅಂಶೀಭೂತ ಮಾಯಿಕ ಸಂಬಂಧ ದೇಹಿಕರು. ಅವತಾರ ಮೂರ್ತಿಗಳಾದ ಇವರು ರಣ ಜಗದ ದೈವಗಳು. ಈ ತ್ರೈಮೂರ್ತಿಗಳು ಚಿಚ್ಛಕ್ತಿಯ ಸಾಕಾರದ ಶಾಖೆ. ತ್ರಿಮೂರ್ತಿಗಳೂ ಅರಿವಿನಿಂದ ಲಿಂಗಾಂಗ ಸಾಮರಸ್ಯ ಸಾಧಿಸಿ ಕರ್ಮ ಮತ್ತು ಕಾಲ ರಹಿತರಾಗಿ ಆತ್ಮಕರಿಗೊಂಡಾಗ ಮಾತ್ರ ಅವರ ಬದುಕು ಸಾರ್ಥಕವಾಗುವುದು. ಮಾಯಿಕ ಸಂಬಂಧ ದೇಹಿಕ ದೇಹಿಗಳಾದ ತ್ರಿಮೂರ್ತಿಗಳು ದೀಕ್ಷೆ ಹೊಂದಿ ಸಾಧನೆ ಮಾಡುತ್ತ ಭಕ್ತ ದೇವಕ ದೇಹಿಗಳಾಗುತ್ತಾರೆ. ಆದ್ದರಿಂದ ವಚನಗಳಲ್ಲಿ ಬರುವ ತ್ರಿಮೂರ್ತಿಗಳೂ ಸಾಧಕರಾದ ಶಿವಭಕ್ತರು.

ಗುಪ್ತ ಮಂಚಣ್ಣನೇನೊ ಬರುವಾಗ ಹರಿಭಕ್ತನಾಗಿ ಬಂದ. ಅನಂತರ ಶಿವ ದಾಸನಾದನು. ಪಚ್ಚೆಯ ನಾಮವ ದೃಷ್ಟಿಯಲ್ಲಿಟ್ಟು ಸಾಧನೆಯನ್ನು ಮಾಡಿದನು. ಎರಡು ಭ್ರೂಮಧ್ಯದ ನಡುವಿನ ಸಿಂಹಾಸನ ಶಿವನದು. ಯೋಗ ಸಾಧನೆಯಲ್ಲಿ ಭ್ರೂಮಧ್ಯ ಶಿವನ ಪೀಠ. ಮೂರು ನಾಮಗಳು ತ್ರಿಮೂರ್ತಿ ತತ್ತ್ವದ ಸಂಕೇತವಾಗುತ್ತದೆ. ವಿಷ್ಣು ಪಂಥದಲ್ಲಿ ನಡುವಿನ ನಾಮ ವಿಷ್ಣುವಾಗಿ, ಬಲ ಮತ್ತು ಎಡದ ನಾಮ ಬ್ರಹ್ಮ ಮತ್ತು ರುದ್ರರದಾಗಿರುತ್ತದೆ. ಶಿವ ಪಂಥದಲ್ಲಿ ದೃಷ್ಟಿಮಧ್ಯದ ಪಚ್ಚೆಯನಾಮ ಶಿವಯೋಗ ಸಾಧನೆಯ ಸಂಕೇತವಾಗುತ್ತದೆ. ತನುಗುಣದ ಸಾಧನೆಯಲ್ಲಿ ವಿಷ್ಣುಪೂಜಕನಾದ ಗುಪ್ತಮಂಚಣ್ಣ ಪ್ರಾಣಗುಣದ ಸಾಧನೆಯಲ್ಲಿ ಶಿವಭಕ್ತನಾಗುತ್ತಾನೆ. ಅಂದರೆ ಸಾಕಾರ ಹಂತದಲ್ಲಿ ಬಹುದೇವತೋಪಾಸನೆ ದೀಕ್ಷಾ ಬದ್ಧ ಶಿವ ಭಕ್ತನಿಗೆ ನಿಷಿದ್ಧವಲ್ಲ ಎಂಬ ತತ್ತ್ವವನ್ನು ಸಾಧಿಸಿ ತೋರಿಸಿದ ಗುಪ್ತ ಮಂಚಣ್ಣ ವಚನಕಾರರಿಗಿಂತ ಭಿನ್ನ ಮಾರ್ಗ ಹಿಡಿದು ಶಿವಭಕ್ತನಾದ ವಿಷ್ಣು ಪೂಜಕನಾಗಿ ನಾಮಧಾರಿ ಲಿಂಗಾಯಿತನಾದನು.

ಶಿವಭಕ್ತನಾದ ಮಂಚಣ್ಣ ವಿಷ್ಣು ವೇಷ ಧರಿಸಿ ಬಸವಣ್ಣನ ಪರವಾಗಿ ಬಿಜ್ಜಳನಲ್ಲಿ ಗೂಢಚರ್ಯೆ ನಡೆಸಿದನೊ ಅಥವಾ ವಿಷ್ಣುಭಕ್ತನಾಗಿ ಶಿವ ವೇಷಧರಿಸಿ ಬಿಜ್ಜಳನ ಪರವಾಗಿ ಬಸವಣ್ಣನಲ್ಲಿ ಗೂಢಚರ್ಯೆ ನಡೆಸಿದನೊ ಎಂಬುದು ಸಂದಿಗ್ಧವಾಗಿದೆ. ಅವನ ಶಿವ ಮತ್ತು ವಿಷ್ಣು ಭಕ್ತಿ ಏಕದೇವತಾ ನಿಷ್ಠೆ ವೀರಶೈವರಿಗಂತೂ ನುಂಗಲಾರದ ತುತ್ತಾಗಿದೆ. ಅಲ್ಲದೆ ಅವನು ವಚನಕಾರನಾಗಿ ವಚನ ರಚಿಸಿರುವುದಂತೂ ವೀರಶೈವರನ್ನು ಇಕ್ಕಟ್ಟಿಗೆ ಸಿಕ್ಕಿಸಿದೆ. ಅವನನ್ನು ಶಿವನ ಅವತಾರ ಎಂದು ಕರೆದು ಅವನಿಗೆ ಅಂಟಿದ ವಿಷ್ಣುವಿನ ಕೊಳೆಯನ್ನು ತೊಡೆಯಲು ಪ್ರಯತ್ನಿಸಿದ ಐತಿಹಾಸಿಕ ವ್ಯಕ್ತಿತ್ವದ ಗುಪ್ತ ಮಂಚಣ್ಣನ ಬದುಕಿಗೆ ವೀರಶೈವರು ಪುರಾಣದ ಬಣ್ಣ ಬಳಿದರು.

೪

ಸಮಕಾಲೀನ ಲಿಂಗಾಯಿತರಲ್ಲಿ ವಿಷ್ಣು ಪೂಜೆಯ ಸಂಪ್ರದಾಯದ ಶಿವಭಕ್ತರನ್ನು ಇಂದಿಗೂ ಗುರುತಿಸಬಹುದಾಗಿದೆ. ಇದು ಹನ್ನೆರಡನೆಯ ಶತಮಾನದ ಶಿವಭಕ್ತ ವಚನಕಾರನಾದ ವಿಷ್ಣು ಪೂಜೆಯ ಗುಪ್ತಮಂಚಣ್ಣ ಮತ್ತು ಇತರ ವಚನಕಾರರ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ತುಮಕೂರು ಜಿಲ್ಲೆಯಲ್ಲಿ ನಡೆಸಿರುವ ಕ್ಷೇತ್ರಕಾರ್ಯದಿಂದ ಈ ಅಂಶ ಸ್ಪಷ್ಟವಾಗಿರುತ್ತದೆ. ಶಿವಪುರಾಣ ಕಾಲದ ಹರಿಹರ

ಸಾಮರಸ್ಯ ಸಾಧಿಸುವ ಒಂದು ಕಲ್ಪನೆ ಮತ್ತು ವಚನಕಾರರ ಕಾಲದಲ್ಲಿ ಮತಾಂತರಗೊಂಡ ಶಿವಭಕ್ತ ವಿಷ್ಣುಪೂಜೆಯ ಪದ್ಧತಿ - ಈ ಎರಡೂ ಸಂಪ್ರದಾಯಗಳು ಸಮಕಾಲೀನ ಲಿಂಗಾಯಿತರ ಆಚರಣೆಯಲ್ಲಿ ಇಂದಿಗೂ ಜೀವಂತವಾಗಿರುವುದು ಕಂಡುಬರುತ್ತದೆ. ಪಂಚಾಚಾರ್ಯರು ಮತ್ತು ಬಸವ ಪಂಥದ ಅಚ್ಚ ಶಿವಭಕ್ತರು ವಿಷ್ಣು ಪೂಜೆಯ ಶಿವಭಕ್ತರನ್ನು ಕುಲದಲ್ಲಿ ಕಡಿಮೆಯಾಗಿ ಭಾವಿಸುವುದು ಸ್ಪಷ್ಟವಾಗಿದೆ. ಪಂಚಾಚಾರ್ಯರಲ್ಲಿ ವಿಷ್ಣುಪೂಜೆಯ ಶಿವಭಕ್ತರಿಲ್ಲ. ಶಿವಭಕ್ತರಾದ ವಿಷ್ಣುಪೂಜಕರು ಬಸವ ಪಂಥದ ಒಳಪಂಗಡಗಳಲ್ಲಿ ಮಾತ್ರ ಕಂಡುಬರುತ್ತಾರೆ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಶಿವಭಕ್ತ ವಿಷ್ಣು ಪೂಜಕರ ಸಂಖ್ಯೆ ಅಧಿಕವಾಗಿ ಕಂಡು ಬಂದರೂ, ಕರ್ನಾಟಕಾದ್ಯಂತ ಇಂಥ ನಾಮಧಾರಿ ಲಿಂಗಾಯಿತರು ಇರುವುದನ್ನು ಗುರುತಿಸಬಹುದು.

ತುಮಕೂರು ಜಿಲ್ಲೆಯಲ್ಲಿ ವೀರಶೈವರ ಎಲ್ಲಾ ಪಂಗಡಗಳೂ ಇವೆ. ಅವುಗಲ್ಲಿ ಪಂಚಪೀಠದ ಪಂಚಾಚಾರ್ಯರು, ಬಸವ ಪಂಥದ ಗೌಡ ಲಿಂಗಾಯಿತರು, ನೊಣಬ ಲಿಂಗಾಯಿತರು ಮತ್ತು ಸಾದು ಲಿಂಗಾಯಿತರು ಪ್ರಮುಖರು. ಪಂಚಾಚಾರ್ಯರಲ್ಲಿ ರೇಣುಕ ಪೀಠದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಬಸವ ಪಂಥೀಯರಲ್ಲಿ ನೊಣಬ ಲಿಂಗಾಯಿತರ ಸಂಖ್ಯೆ ಅಧಿಕವಾಗಿದೆ. ಪಂಚಾಚಾರ್ಯರ ಪ್ರಭಾವ ಧಾರ್ಮಿಕ ಕ್ಷೇತ್ರದಲ್ಲಿ ಸಾಕಷ್ಟಿದ್ದರೂ, ಒಳಪಂಗಡದ ಬಸವ ಪಂಥೀಯರ ಸಂಖ್ಯೆಗಿಂತ ಅಧಿಕವಾಗಿಲ್ಲ. ಪಂಚಾಚಾರ್ಯರು ಮುಖ್ಯವಾಗಿ ವರ್ತಕರು, ಆರ್ಥಿಕವಾಗಿ ಗರಿಗಟ್ಟಿದವರು. ಗೌಡ ಲಿಂಗಾಯಿತರು ಬೆಂಗಳೂರು ಗ್ರಾಮಂತರ ಮತ್ತು ತುಮಕೂರು ಜಿಲ್ಲೆಯಲ್ಲಿ ಹಂಚಿಹೋಗಿದ್ದರೂ ವಿದ್ಯಾಕ್ಷೇತ್ರದಲ್ಲಿ ಮಾತ್ರ ಪ್ರಗತಿ ಸಾಧಿಸಿರುತ್ತಾರೆ. ನೊಣಬ ಲಿಂಗಾಯಿತರ ಸಂಖ್ಯೆ ಈ ಜಿಲ್ಲೆಯಲ್ಲಿ ಅಧಿಕವಾಗಿದ್ದು ರಾಜಕೀಯ ಜಾಗ್ರತಿಯಿಂದಾಗಿ ಸಂಘಟಿತರಾಗಿದ್ದು, ರಾಜಕೀಯ ಕ್ಷೇತ್ರದಲ್ಲಿ ಹಿಡಿತ ಸಾಧಿಸಿದ್ದಾರೆ. ಸಾದು ಲಿಂಗಾಯಿತರ ಸಂಖ್ಯೆ ಅಲ್ಲಲ್ಲಿ ಇದ್ದರೂ ಅವರ ಪ್ರಭಾವ ಇಲ್ಲವೆಂದರೆ ತಪ್ಪಲ್ಲ. ಇನ್ನು ಕುಂಬಾರ ಲಿಂಗಾಯಿತರು, ಅಗಸ ಲಿಂಗಾಯಿತರು, ದೇವಾಂಗ ಲಿಂಗಾಯಿತರು (ಹಟಗಾರರು), ನಯನಜ ಕ್ಷತ್ರಿಯ ಲಿಂಗಾಯಿತರು (ಹಜಾಮ ಲಿಂಗಾಯಿತರು) ಮತ್ತಿತರ ಹದಿನೆಂಟು ಪಣದ ಲಿಂಗಾಯಿತರು ಇದ್ದರೂ ಬೆರಳೆಣಿಸುವಷ್ಟು ಸಂಖ್ಯೆ ಮಾತ್ರ ಇದ್ದು, ಆರ್ಥಿಕವಾಗಿ ತೀರ ಹಿಂದುಳಿದಿದ್ದು, ಪಂಚಾಚಾರ್ಯರು ಮತ್ತು ಬಸವ ಪಂಥದವರಿಂದ ಕಡೆಗಣಿಸಲ್ಪಟ್ಟು, ಅತ್ತ ಲಿಂಗಾಯಿತರಲ್ಲಿಯೂ ಸಲ್ಲದೆ, ಇತ್ತ ತಮ್ಮ ಪೂರ್ವ ಜಾತಿಯವರಲ್ಲಿಯೂ ಸಲ್ಲದೆ ತ್ರಿಶಂಕು ಸ್ಥಿತಿ ಅನುಭವಿಸುತ್ತ ಉತ್ತಮ ಜಾತಿಯ ಲಿಂಗಾಯಿತರ ಧಾರ್ಮಿಕ ಜೀತದಾಳುಗಳಾಗಿ ಬದುಕನ್ನು ನೂಕುತ್ತಿರುವುದಂತೂ ತುಂಬಾ ಶೋಚನೀಯವಾಗಿದೆ.

ಪಂಚಾಚಾರ್ಯರು ಪಂಚಪೀಠಗಳ ವ್ಯವಸ್ಥೆಗೆ ಒಳಪಟ್ಟು ಉತ್ತಮ ವ್ಯವಸ್ಥೆಯ ಪಂಗಡವಾಗಿದ್ದಾರೆ. ಶೆಟ್ಟಿ ಮತ್ತು ಯಜಮಾನ ವ್ಯವಸ್ಥೆಯಿಂದ ಪಂಚಾಚಾರ್ಯರ ಸಮಾಜದಲ್ಲಿ ಕಟ್ಟುಪಾಡಿದ್ದು ಒಂದು ಬಿಗಿ ಇದೆ. ಧಾರ್ಮಿಕ ಶಿಸ್ತು ಇದೆ. ಪಂಚಾಚಾರ್ಯರು ಅಚ್ಚ ಶೈವ ವೈದಿಕ ಸಂಪ್ರದಾಯದವರು. ಹುಟ್ಟಿನ ಸಿದ್ಧಾಂತದ ಮಹತ್ವವನ್ನು ಎತ್ತಿ

ಹಿಡಿಯುತ್ತಾರೆ. ವೀರಶೈವ ಸಮಾಜದ ಧಾರ್ಮಿಕ ಶ್ರೇಣಿಯ ಪ್ರಥಮಸ್ಥಾನ ತಮ್ಮದೆಂದೇ ಭಾವಿಸುತ್ತಾರೆ. ಈ ಜಿಲ್ಲೆಯ ಎಲ್ಲಾ ವೀರಶೈವ ಮಠಗಳೂ ಮತ್ತು ಪೀಠಗಳೂ ಒಂದಲ್ಲ ಒಂದು ಕಾಲದಲ್ಲಿ ಪಂಚಪೀಠಕ್ಕೆ ಸೇರಿದ ಪಟ್ಟಾಧಿಕಾರಿ ಅಥವಾ ಜಂಗಮ ವಿರಕ್ತ ಶೂನ್ಯಪೀಠದ ಶಾಖಾ ಮಠಗಳಾಗಿದ್ದು ಕ್ರಮೇಣ ಸ್ಥಳೀಯ ಪರಿಸರದ ಒತ್ತಡದಿಂದ ಅಲ್ಲೊಂದು ಇಲ್ಲೊಂದು ಭಕ್ತ ವಿರಕ್ತ ಮಠಗಳಾಗಿ ಸ್ವತಂತ್ರ್ಯವಾಗಿವೆಯೇ ಹೊರತು, ಅಧಿಕ ಸಂಖ್ಯೆಯ ಮಿಕ್ಕ ಮಠಗಳು ಇಂದಿಗೂ ಜಂಗಮ ಮಠದ ಶಾಖಾ ಮಠಗಳೆಂದೇ ಪ್ರತಿಷ್ಠೆಯಿಂದ ಹೇಳುತ್ತಾರೆ. ಆದರೆ ಸಾಧನೆಯ ಸಿದ್ಧಾಂತವನ್ನು ಎತ್ತಿಹಿಡಿದು ಹುಟ್ಟಿನ ಸಿದ್ಧಾಂತವನ್ನು ಅಲ್ಲಗಳೆಯುವ ಬಸವ ಪಂಥದ ಒಳಪಂಗಡದವರು ಪಂಚಾಚಾರ್ಯರ ವೀರಶೈವ ಸಮಾಜದ ಹುಟ್ಟಿನ ಸಿದ್ಧಾಂತದ ಜಂಗಮ ಮಹತ್ವ ತತ್ತ್ವವನ್ನು ಒಪ್ಪುವುದಿಲ್ಲ. ಒಳಪಂಗಡದ ಭಕ್ತ ವಿರಕ್ತಮಠಗಳು ತಮ್ಮವು ಸ್ವತಂತ್ರ ಸಂಸ್ಥಾನಗಳೆಂದೇ ಘೋಷಿಸುತ್ತ ಬಸವಾದಿ ಪ್ರಮಥರ ಶೂನ್ಯಪೀಠದ ಮೂಲಕ್ಕೆ ತಮ್ಮ ಪೀಠಗಳ ಇತಿಹಾಸವನ್ನು ಗುರುತಿಸಿಕೊಳ್ಳುತ್ತಾರೆ. ಪಂಚಾಚಾರ್ಯರು ಸಂಸ್ಕೃತ ಗ್ರಂಥಗಳನ್ನೇ ತಮ್ಮ ಆಧಾರ ಗ್ರಂಥಗಳನ್ನಾಗಿ ಸ್ವೀಕರಿಸಿದರೆ, ಕನ್ನಡದ ಬಸವ ಪಂಥದ ಭಕ್ತ ವಿರಕ್ತ ಪೀಠಗಳೂ, ಪಂಚಾಚಾರ್ಯರು ಮತ್ತು ಬ್ರಾಹ್ಮಣರೊಂದಿಗೆ ಸ್ಪರ್ಧಿಸಿ ಪ್ರತಿಷ್ಠಿತ ಸ್ಥಾನಮಾನ ಪಡೆಯಲು ಸಂಸ್ಕೃತ ಗ್ರಂಥಗಳನ್ನೇ ಆಧಾರ ಗ್ರಂಥವೆಂದು ಸ್ವೀಕರಿಸಿ ಅನುಕರಣೆ ಮಾಡುತ್ತಿದ್ದಾರೆ. ಬಸವಾದಿ ಪ್ರಮಥರ ವಚನಗಳನ್ನು ಬಾಯಿ ಪಾಠ ಮಾಡಿ ಪುಂಖಾನು ಪುಂಖವಾಗಿ ಹೇಳಿದರೂ, ಧಾರ್ಮಿಕ ವಿಧಿಯ ಆಚರಣೆ ಮಾತ್ರ ಸಂಸ್ಕೃತೀಕರಣವಾಗುತ್ತಿರುವುದು ಕಂಡು ಬರುತ್ತದೆ. ಆದರೆ ಬಸವ ಪಂಥದ ಒಳಪಂಗಡಗಳಲ್ಲಿ ಒಂದು ವ್ಯವಸ್ಥೆ ಶಿಸ್ತು ಮತ್ತು ಕಟ್ಟುಪಾಡು ಕಂಡು ಬರುವುದಿಲ್ಲ. ಒಳಪಂಗಡಗಳಲ್ಲಿ ಕೆಲವರಿಗೆ ಮಠಗಳು ಮುಖ್ಯವಾದರೆ, ಮತ್ತೆ ಕೆಲವರಿಗೆ ದೇವಾಲಯಗಳು ಮುಖ್ಯವಾಗುತ್ತವೆ. ಮತ್ತೂ ಕೆಲವರಿಗೆ ಶಿವದೇವಾಲಯಗಳಾಗಲಿ, ಶೈವ ಮಠವಾಗಲಿ ಪ್ರಮುಖವಾಗದೆ ವಿಷ್ಣುದೇವಾಲಯಗಳು ಧಾರ್ಮಿಕ ಚಟುವಟಿಕೆಯ ಕೇಂದ್ರಗಳಾಗಿರುತ್ತವೆ. ನೊಣಬ ಲಿಂಗಾಯಿತರಿಗೆ ಸಿದ್ಧರಾಮ ಗದ್ದುಗೆ ಅಥವಾ ಸಿದ್ಧರಾಮ ದೇವಾಲಯಗಳು ಅತ್ಯಂತ ಮುಖ್ಯವಾದುವು. ಅಲ್ಲದೆ ಗೋಡೇಕೆರೆ ಮಠಕ್ಕೆ ನೊಣಬರ ಒಂದು ಗುಂಪು ನಡೆದುಕೊಂಡರೆ ಮತ್ತೊಂದು ಗುಂಪು ಯಾವ ಮಠಕ್ಕೂ ಒಕ್ಕಲಾಗಿರುವುದಿಲ್ಲ. ನಾಮಧಾರಿ ಲಿಂಗಾಯಿತರಿಗಂತೂ ಶಿವದೇವಾಲಯಗಳಾಗಲಿ, ಮಠಗಳಾಗಲಿ ಮುಖ್ಯವಾಗದೆ ರಾಮ, ಆಂಜನೇಯ, ರಂಗನಾಥ, ನರಸಿಂಹಸ್ವಾಮಿ ದೇವಾಲಯಗಳು ಮುಖ್ಯ ಕೇಂದ್ರಗಳಾಗಿವೆ. ಬಸವ ಪಂಥದ ಒಳಪಂಗಡಗಳಲ್ಲಿಯೇ ಧಾರ್ಮಿಕ ನಾಯಕತ್ವಕ್ಕೆ ತೀವ್ರವಾದ ತಿಕ್ಕಾಟವಿದೆ. ಪಂಚಾಚಾರ್ಯರ ಪಂಚಪೀಠಗಳಲ್ಲಿ ಒಂದು ವ್ಯವಸ್ಥೆಯಿದ್ದು ಯಾವುದಾದರೂ ಒಂದು ಪೀಠದವರು ಗುರುಗಳಾದರೆ, ಮಿಕ್ಕ ಪೀಠದವರು ಜಂಗಮರಾಗುತ್ತಾರೆ. ಹೀಗೆ ಅವರಲ್ಲಿ ಪರಸ್ಪರ ಅರಿವು ಇದ್ದು ವೈದಿಕ ಸಂಪ್ರದಾಯವನ್ನು ಅನುಸರಿಸುತ್ತಾರೆ. ಬಸವ ಪಂಥವರಲ್ಲಿ ತೀವ್ರವಾದ ಭಿನ್ನಾಭಿಪ್ರಾಯವಿದ್ದರೂ, ವೈದಿಕ ವಿರೋಧಿ ತತ್ತ್ವವನ್ನು ಅನುಸರಿಸುತ್ತಿದ್ದರು. ಆದರೆ ವೀರಶೈವರು ಬ್ರಾಹ್ಮಣೀಕರಣಕ್ಕೆ ಒಳಗಾಗಿ, ಸಂಸ್ಕೃತೀಕರಣವನ್ನು ಸಂಪೂರ್ಣವಾಗಿ

ಅನುಕರಿಸುತ್ತಿದ್ದು, ಬಸವ ಪಂಥದ ಮೂಲ ಸೆಲೆ ಬತ್ತುತ್ತಿದೆ. ಇಂದಿಗೂ ಪಂಚಾಚಾರ್ಯರು ಮತ್ತು ಬಸವ ಪಂಥದವರಲ್ಲಿ ತ್ರಿಕೋಣ ಸ್ಪರ್ಧೆಯನ್ನು ಗುರುತಿಸಬಹುದಾಗಿದೆ. ಹುಟ್ಟಿನ ಸಿದ್ಧಾಂತದ ಪಂಚಾಚಾರ್ಯರಲ್ಲಿ ಪಟ್ಟಾಧಿಕಾರಿಗಳಿಗೂ ಮತ್ತು ಜಂಗಮ ವಿರಕ್ತರಿಗೂ ಕೆಲವು ಧಾರ್ಮಿಕ ಹಕ್ಕುಗಳಿಗಾಗಿ ಕಿತ್ತಾಟವಿದ್ದರೂ, ಭಕ್ತಪಂಥದ ವಿರಕ್ತರನ್ನು ಕಡೆಗಾಣಿಸುವಲ್ಲಿ ಪಟ್ಟಾಧಿಕಾರಿ ಮತ್ತು ಜಂಗಮ ವಿರಕ್ತರು ಸಂಘಟಿತರಾಗುತ್ತಾರೆ. ಸಾಧನೆಯ ಸಿದ್ಧಾಂತದ ಬಸವ ಪಂಥದ ಒಳಪಂಗಡಗಳು ಪಂಚಾಚಾರ್ಯರ ಹುಟ್ಟಿನ ಜಂಗಮ ಸಿದ್ಧಾಂತವನ್ನು ವಿರೋಧಿಸುವಲ್ಲಿ ಸಂಘಟಿತರಾದರೂ, ಒಳಪಂಗಡಗಳಲ್ಲಿಯೇ ಧಾರ್ಮಿಕ ಅನುಶ್ರೇಣಿಯ ಬಗ್ಗೆ ಕಿತ್ತಾಟವಿದೆ. ಹೀಗಾಗಿ ಪಂಚಾಚಾರ್ಯರು ಮತ್ತು ಬಸವ ಪಂಥದವರನ್ನು ನಿಯಂತ್ರಿಸುವ ಯಾವ ಏಕ ಮೂಲ ಗ್ರಂಥವಾಗಲಿ, ಧಾರ್ಮಿಕ ನಾಯಕನಾಗಲಿ ಕೇಂದ್ರ ಮಠವಾಗಲಿ, ಕೇಂದ್ರ ದೇವಾಲಯವಾಗಲಿ, ಒಂದು ಸಿದ್ಧಾಂತವಾಗಲಿ ಇಲ್ಲದೆ, ಒಂದು ಕೇಂದ್ರ ವ್ಯವಸ್ಥೆಯ ಅಭಾವದಿಂದ ಮೇಲು ನೋಟಕ್ಕೆ ಕೆಲವು ಸೌಲಭ್ಯಗಳಿಗಾಗಿ ಅನ್ಯಮತೀಯರ ವಿರುದ್ಧ ವೀರಶೈವರು ಸಂಘಟಿತರಾದಂತೆ ಕಂಡುಬಂದರೂ ಆಂತರಿಕವಾಗಿ ತಿಕ್ಕಾಟ ತೀವ್ರ ಸ್ವರೂಪದ್ದಾಗಿರುವುದರಲ್ಲಿ ಸಂಶಯವಿಲ್ಲ. ರಾಜಕೀಯ ಸಂಘಟನೆಗೆ ತೀವ್ರ ಪ್ರಯತ್ನ ನಡೆದಿದೆಯೇ ಹೊರತು ಧಾರ್ಮಿಕ ಸಂಘಟನೆಗೆ ಪ್ರಯತ್ನ ನಡೆಯುತ್ತಿಲ್ಲ. ರಾಜಕೀಯ ಸಂಘಟನೆ ಧಾರ್ಮಿಕ ವಿಘಟನೆಯನ್ನು ಮುಚ್ಚಿರುವಂತೆ ಕಂಡುಬರುತ್ತದೆ.

ಪಂಚಾಚಾರ್ಯರಿಗೆ ಗೋತ್ರ, ಸೂತ್ರ ಮತ್ತು ಪ್ರವರ ಮುಖ್ಯವಾದರೆ, ಬಸವ ಪಂಥದ ಒಳಪಂಗಡದವರಿಗೆ ಸಮಯ ಮತ್ತು ಬೆಡಗು ಮುಖ್ಯವಾದವು. ಮುರುಘಾಮಠ, ಗದುಗಿನ ಡಂಬಲ್ ಮಠ, ಸಂಪಾದನೆ ಮಠ, ಜಡೆಮಠ, ಕಪನಿಮಠ ಇವು ಸಮಯಕ್ಕೆ ಉದಾಹರಣೆಗಳು, ಗೌಡಲಿಂಗಾಯಿತರಲ್ಲಿ ಪೆಟ್ಟಿಗೆಯವರು ಮತ್ತು ಬಿಜ್ಜಣಿಗೆಯರು, ನೊಣಬರಲ್ಲಿ ಮೂರು ದಿವಸದವರು ಮತ್ತು ನಾಲ್ಕು ದಿವಸದವರು, ಸಾದರಲ್ಲಿಯೂ, ಸಜ್ಜನರಲ್ಲಿಯೂ ಅನೇಕ ಬೆಡಗುಗಳಿವೆ. ಆಳವಾದ ಅಧ್ಯಯನದಿಂದ ಸಮಯ ಮತ್ತು ಬೆಡಗುಗಳಲ್ಲಿ, ಕೆಲವು ಧಾರ್ಮಿಕ ವಿಧಿಗಳಲ್ಲಿ ಆಚಾರ ಭಿನ್ನತೆಯನ್ನು ಗುರುತಿಸಬಹುದು. ಉದಾಹರಣೆಗೆ ನೊಣಬರಲ್ಲಿ ಮೂರು ದಿವಸ ಮತ್ತು ನಾಲ್ಕು ದಿವಸದರವಲ್ಲಿ "ದೇವರನ್ನು ಮಾಡುವುದರಲ್ಲಿ" ವ್ಯತ್ಯಾಸವಿದೆ. ನಾಲ್ಕು ದಿವಸದವರು ಹೊಂಗೇಸ್ವಾಮಿ ಅಥವಾ ತಿಪ್ಪೇಸ್ವಾಮಿಯನ್ನು ವಿವಾಹ ಕಾಲದಲ್ಲಿ ಮಾಡುತ್ತಾರೆ, ಅಲ್ಲಿಗೆ ಮೂರು ದಿವಸದವರನ್ನಾಗಲಿ, ಅನ್ಯರನ್ನಾಗಲಿ ಸೇರಿಸದೆ, ಸರಿರಾತ್ರಿಯಲ್ಲಿ ರಹಸ್ಯವಾಗಿ ರಕ್ತಸಂಬಂಧಿಗಳೇ ಸೇರಿಕೊಂಡು ಮಾಡುವ ಧಾರ್ಮಿಕ ವಿಧಿ. ರೆಡ್ಡಿಗಳಲ್ಲಿ ನರವಲ ರೆಡ್ಡಿ ಮತ್ತು ಪಾಕನಾಟ ರೆಡ್ಡಿಗಳು ಶಿವಭಕ್ತರು. ನಾಮದ ರೆಡ್ಡಿಗಳು ವಿಷ್ಣುಭಕ್ತರು, ವಿಷ್ಣುಭಕ್ತ ನಾಮದ ರೆಡ್ಡಿಗಳನ್ನು ನಾಮಧಾರಿ ಲಿಂಗಾಯಿತ ರೆಡ್ಡಿ ಎಂದೂ ಕರೆಯುತ್ತಾರೆ. ಪಾಕನಾಟ ಶಿವಭಕ್ತ ಲಿಂಗಾಯಿತರು ಮದುವೆ ಸಂದರ್ಭದ ಒಂದು ಧಾರ್ಮಿಕ ವಿಧಿಯಲ್ಲಿ ಹೆಣ್ಣಿನ ತಲೆಯ ಮುಸುಕನ್ನು ಎಂದಿಗಿಂತ ಬದಲಾಗಿ ವಿರುದ್ಧ ದಿಕ್ಕಿನಲ್ಲಿ ಹಾಕುತ್ತಾರೆ. ಅದು ಅವರ ಮತಾಂತರದ ಪೂರ್ವ ಪದ್ಧತಿಯ ಸಂಪ್ರದಾಯವಾಗಿದೆ. ನಾಲ್ಕು ದಿವಸದವರು ಮಾಡುವ ದೇವರು

ಕಳ್ಳದೇವರಾಗಿದ್ದು ಅದು ಅವರ ಮತಾಂತರದ ಪೂರ್ವ ಜಾತಿಯ ಪದ್ಧತಿಯಾಗಿದೆ. ತುಮಕೂರು ಜಿಲ್ಲೆಯಲ್ಲಿ ಅನೇಕ ಪವಿತ್ರ ಸ್ಥಳಗಳು ಇಂದಿಗೂ ಎರಡು ಸಂಸ್ಕೃತಿಗಳ ಸಂಗಮವಾಗಿವೆ. ಗುಬ್ಬಿ ತಾಲ್ಲೂಕು ಅಳಲಘಟ್ಟದ ಸಾಕ್ಷಂದ್ರದ ಕೆಂಪಮ್ಮ ದೇವರು ಲಿಂಗಾಯಿತರು ಮತ್ತು ಗಂಗಟಿಕಾರ ಒಕ್ಕಲಿಗರಿಗೆ ಮನೆ ದೇವರಾಗಿದೆ. ದಂಡಿನಶಿವರದ ಗಂಗಟಿಕಾರ ಒಕ್ಕಲಿಗರು ಮತ್ತು ಚೇಳೂರ ಲಿಂಗಾಯಿತ ಒಕ್ಕಲಿಗರು ಹಿಂದೆ ಅಣ್ಣತಮ್ಮಂದಿರು. ಕೆಲವರು ಮತಾಂತರವಾದರೆ ಮತ್ತೆ ಕೆಲವರು ಹಾಗೆಯೆ ಉಳಿದರು. ಆದರೆ ಮತಾಂತರವಾದವರೂ ತಮ್ಮ ಹಿಂದಿನ ಮನೆದೇವರನ್ನು ಮಾತ್ರ ಬಿಡದೆ ಮುಂದುವರಿಸಿದರು. ಹತ್ಯಾಳು ನರಸಿಂಹ, ದೇವರಾಯನ ದುರ್ಗದ ನರಸಿಂಹ ಮತ್ತು ಸೀಬಿಯ ನರಸಿಂಹ ಭಕ್ತರು ಲಿಂಗಾಯಿತರಾಗಿದ್ದು ಇಂದಿಗೂ ಮುಂದುವರಿದಿದ್ದಾರೆ. ಹುಳಿಯಾರು ಬಳಿ ಪ್ರಸಿದ್ಧ ರಂಗನಾಥ ದೇವಾಲಯವೂ ಇಂಥ ಒಂದು ಕೇಂದ್ರವಾಗಿದೆ. ವಚನಕಾರರು ಕ್ಷುದ್ರ ದೇವರನ್ನು ಮತ್ತು ಅನ್ಯದೇವರನ್ನು ಎಷ್ಟೇ ತೀವ್ರವಾಗಿ ಖಂಡಿಸಿದ್ದರೂ ಮತಾಂತರವಾದ ವೀರಶೈವ ಬಸವ ಪಂಥದ ಒಳಪಂಗಡಗಳಲ್ಲಿ ಇಂದಿಗೂ ಅನ್ಯದೇವರು ಮತ್ತು ಕ್ಷುದ್ರದೇವರ ಆರಾಧನೆಯನ್ನು ಗುರುತಿಸಬಹುದು. ಅಲ್ಲದೆ ಅವರ ಪೂರ್ವ ಜಾತಿಯ ಆಚಾರ ವಿಚಾರಗಳೇ ಮುಂದುವರಿದಿವೆ. ನಾಲ್ಕು ದಿವಸದ ನೊಣಬರಲ್ಲಿ ಕತ್ತಿ ಪೂಜೆಯ ಸಂಪ್ರದಾಯವಿದೆ. ಅದು ನಾಯಕ ಜನಾಂಗದವರಲ್ಲಿಯೂ ಇದೆ. ನಾಲ್ಕು ದಿವಸದವರ ಕತ್ತಿಪೂಜೆಗೆ ನಾಯಕರೂ, ನಾಯಕರ ಕತ್ತಿಪೂಜೆಗೆ ನಾಲ್ಕು ದಿವಸದ ನೊಣಬ ಲಿಂಗಾಯಿತರೂ ಹೋಗಿ ಬರುವ ಪದ್ಧತಿ ಇದೆ. ಒಳಪಂಗಡದವರ ಮದುವೆ ಕಾಲದ ಧಾರ್ಮಿಕ ವಿಧಿಯ ಅಧ್ಯಯನದಿಂದ ಅನೇಕ ಸಾಂಸ್ಕೃತಿಕ ಅಂಶಗಳು ಬೆಳಕಿಗೆ ಬರುತ್ತವೆ. ಕುಂಚಿಟಿಗ ಸಾದು ಒಕ್ಕಲಿಗರಲ್ಲಿ ಹಲವು ಕುಟುಂಬಗಳು ಮತಾಂತರವಾಗಿವೆ. ಸಾದು ಕುಂಚಿಟಿಗ ಒಕ್ಕಲಿಗರಲ್ಲಿ ಅನೇಕರು ಮಾಂಸಾಹಾರಿಗಳಲ್ಲ. ಮಾಂಸಾಹಾರಿಗಳಲ್ಲದ ಸಾದು ಕುಂಚಿಟಿಗರಿಗೂ, ಮತಾಂತರಿಯಾದ ಲಿಂಗಾಯಿತ ಸಾದು ಕುಂಚಿಟಿಗರಿಗೂ ಹಿಂದಿದ್ದ ಸಂಬಂಧ ಹಲವು ಕಡೆ ಮುಂದುವರೆದಿದೆ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿ ಇಂಥ ಸಂಬಂಧ ನೂರಾರು ವರ್ಷಗಳಿಂದ ನಡೆದು ಬಂದಿರುತ್ತದೆ. ಗೌಡ ಲಿಂಗಾಯತ ವಿಷ್ಣು ಪೂಜಕರಿಗೆ ಮಾಗಡಿ ರಂಗನಾಥ ಕೇಂದ್ರ ಸ್ಥಳ. ಮನೆ ದೇವರಾದ ಹತ್ಯಾಳು ನರಸಿಂಹನಿಗೆ ಕೆಲವು ಲಿಂಗಾಯಿತರು, ಅನ್ಯರಿಂದ ಮಾಂಸಾಹಾರದ ಎಡೆಮಾಡಿಸುವ ಪದ್ಧತಿಯೂ ಇದೆ. ಮತಾಂತರಿ ಲಿಂಗಾಯಿತರ ಮನೆಗಳಲ್ಲಿ ಪೆಟ್ಟಿಗೆ ದೇವರುಗಳಿವೆ. ಅವರು ಎಂದೂ ಪೆಟ್ಟಿಗೆಯನ್ನು ತೆರೆದು ನೋಡುವುದಿಲ್ಲ ಅಥವಾ ಯಾರಿಗೂ ತೆರೆದು ನೋಡಲು ಅವಕಾಶ ಕೊಡುವುದಿಲ್ಲ. ಪೆಟ್ಟಿಗೆ ದೇವರು ಲಿಂಗಾಯಿತರ ಪೂರ್ವ ಜಾತಿಯ ಮನೆ ದೇವರುಗಳೇ ಆಗಿರುತ್ತವೆ. ವರ್ಷಕ್ಕೊಮ್ಮೆ ಪೆಟ್ಟಿಗೆಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ಬನಶಂಕರಿ ಪೆಟ್ಟಿಗೆ ಉತ್ತಮ ಉದಾಹರಣೆಯಾಗಿದೆ. ದೇವಾಂಗದವರಿಗೆ ಬನಶಂಕರಿ ಕುಲದೇವತೆ. ದೇವಾಂಗದವರು ಲಿಂಗಾಯಿತರಾಗಿ ಮತಾಂತರಿಗಳಾಗಿ ಶಿವನನ್ನು ಕುಲದೇವರಾಗಿ ಸ್ವೀಕರಿಸಿದ ಅನಂತರ ತಮ್ಮ ಮನೆ ದೇವರಾದ ಬನಶಂಕರಿಯನ್ನು ಬಹಿರಂಗವಾಗಿ ಪೂಜಿಸುವುದನ್ನು ಬಿಟ್ಟರೂ

ಅಂತರಂಗಿಕವಾಗಿ ತಲೆತಲಾಂತರದಿಂದ ಪೂಜಿಸಿಕೊಂಡು ಬಂದ ಮನೆ ದೇವರನ್ನು ತೊರೆಯಲು ಹೆದರಿಕೆಯಾಗುತ್ತದೆ. ಅದನ್ನು ರಹಸ್ಯವಾಗಿ ಪೂಜಿಸಿಕೊಂಡು ಬರುತ್ತಾರೆ. ಅದನ್ನೇ ಕಳ್ಳ ದೇವರು ಎನ್ನುತ್ತಾರೆ. ಪೂರ್ವ ಮತದ ಮನೆ ದೇವರು ಮತಾಂತರಿಗೆ ಕಳ್ಳದೇವರಾಗಿ ಅವರು ಆ ದೇವರಿಗೆ ಕಳ್ಳ ಒಕ್ಕಲಾಗುತ್ತಾರೆ. ತಿರುಪತಿ ತಿಮ್ಮಪ್ಪನಿಗೆ ಲಿಂಗಾಯಿತ ಕಳ್ಳ ಒಕ್ಕಲ ಸಂಖ್ಯೆ ಅಧಿಕವಾಗಿದೆ. ಇಡೀ ಗ್ರಾಮ ಅಥವಾ ಕುಟುಂಬ ಮತಾಂತರವಾದಾಗ ಹೊಸ ದೇವರು ಒಗ್ಗಿ ಬರದೆ, ಧರ್ಮದ ತತ್ವಕ್ಕೆ ವಿರುದ್ಧವಾದರೂ ತಮ್ಮ ಪೂರ್ವದ ಮನೆದೇವರನ್ನೇ ಲಿಂಗಾಯಿತರಾದ ಅನಂತರವೂ ಮನೆ ದೇವರೆಂದೇ ಘೋಷಿಸಿಕೊಂಡು ಬಹಿರಂಗವಾಗಿಯೇ ಪೂಜಿಸುತ್ತಾರೆ. ಅಂಥ ಲಿಂಗಾಯಿತ ಭಕ್ತರಲ್ಲಿ ವಿಷ್ಣು ಪೂಜೆಯ ಶಿವಭಕ್ತರನ್ನು ಉದಾಹರಿಸಬಹುದು. ಅಂಥ ಒಳಪಂಗಡದವರಲ್ಲಿ 'ಉಡುವಲ್ಲಿ ಉಂಬುವಲ್ಲಿ' ಕುಲಾಚಾರ ಅಡ್ಡಿ ಬರದಿದ್ದರೂ ಹೆಣ್ಣನ್ನು 'ಕೊಡುವಲ್ಲಿ ಕೊಂಬಲ್ಲಿ' ಕುಲಾಚಾರದ ತೊಡಕು ಬರುತ್ತದೆ. ಎಲ್ಲರೂ ಶಿವ ದೀಕ್ಷೆಯ ಶಿವ ಸಹೋದರರಾದರೂ ಮತ್ತೆ ಪೂರ್ವ ಮತದ ರಕ್ತಸಂಬಂಧದ ಆಚಾರ ಸಂಬಂಧ ಬೆಳಸುವಲ್ಲಿ ಅಡ್ಡಿ ಬರುತ್ತದೆ. ಸಾಧನೆ ಮಹತ್ವದ ಒಳ ಪಂಗಡದ ಬಸವ ಪಂಥದಲ್ಲಿಯೂ ಮತ್ತೆ ಹುಟ್ಟಿನ ಸಿದ್ಧಾಂತವೇ ತಲೆಹಾಕಿ ಒಳಪಂಗಡದಲ್ಲಿಯೇ ಧಾರ್ಮಿಕ ಸ್ಥಾನಮಾನದ ಅನುಶ್ರೇಣಿಯ ಪ್ರಥಮ ಸ್ಥಾನಕ್ಕಾಗಿ ತೀವ್ರವಾದ ತಿಕ್ಕಾಟ ನಡೆದಿರುತ್ತದೆ. ಒಳಪಂಗಡದ ಆಯಾ ಮಠಗಳು, ಆಯಾ ಒಳಪಂಗಡದ ಮಾತಿರಲಿ, ಆಯಾ ರಕ್ತಸಂಬಂಧದ ಅನುವಂಶಿಕ ಧಾರ್ಮಿಕ ಸಂತಾನವನ್ನು ತಮ್ಮ ತಮ್ಮ ಪೀಠಗಳಲ್ಲಿ ಸ್ಥಾಪಿಸಿಕೊಳ್ಳುತ್ತಿರುವುದು ಅಧ್ಯಯನದಿಂದ ಕಂಡುಬರುತ್ತದೆ. ವರ್ಣ ವ್ಯವಸ್ಥೆಯ ಒಂದು ಪರ್ಯಾಯ ಸಮಾಜವಾಗಿ ವೀರಶೈವ ಸಮಾಜ ರೂಪುಗೊಂಡಿದ್ದು ಸ್ವಸಂಪೂರ್ಣ ಸಮಾಜದಂತೆ ಮೇಲು ನೋಟಕ್ಕೆ ಕಂಡರೂ ಆಂತರ್ಯದಲ್ಲಿ ಹಲವು ಜಾತಿಗಳ ತಿಕ್ಕಾಟ ತೀವ್ರ ಸ್ವರೂಪದ್ದಾಗಿದ್ದು, ಧಾರ್ಮಿಕ ಶ್ರೇಣಿಯ ಸ್ಥಾನಮಾನ ನಿರ್ಧರಿಸುವುದು ಕ್ಲಿಷ್ಟವಾಗಿದೆ. ವರ್ಣ ಮತ್ತು ಜಾತಿ ಸಮಸ್ಯೆಗಳು ಅಂತರ್ಗತಗೊಂಡಿರುವ ವೀರಶೈವ ಸಮಾಜದಲ್ಲಿ ಗೊಂದಲಕ್ಕೆ ಅವಕಾಶವಾಗಿ ಗೋಜು ಗೋಜಾಗಿದೆ. ಬದಲಾಗಿರುವ ಸಾಮಾಜಿಕ ಸ್ಥಿತಿಗತಿಯಲ್ಲಿ ಒಳಪಂಗಡಗಳು ಜಾಗ್ರತವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಪಂಚಾಚಾರ್ಯರ ಪ್ರಭಾವವನ್ನು ಕುಗ್ಗಿಸಲು ಪ್ರಯತ್ನಿಸಿ, ತಮ್ಮಲ್ಲಿಯೇ ಗೌಡ ಜಂಗಮ, ಸಾದು ಜಂಗಮ ಮತ್ತು ನೊಣಬ ಜಂಗಮ ವರ್ಗದ ಸೃಷ್ಟಿಗೆ ಕಾರಣವಾಗಿದ್ದಾರೆ. ಹೀಗೆ ಮತ್ತೆ ಮತ್ತೆ ಛಿದ್ರ ಛಿದ್ರವಾಗುತ್ತಿರುವ ವೀರಶೈವ ಸಮಾಜದಲ್ಲಿ ವಿದ್ವಾಂಸರು, ಶ್ರೀಮಂತರ ಕಡಿಮೆ ಸಂಖ್ಯೆ ಮುಗ್ಧರು, ಅಜ್ಞಾನಿಗಳು ಮತ್ತು ಬಡ ವೀರಶೈವರ ಅಧಿಕ ಸಂಖ್ಯೆಯ ಸೃಷ್ಟಿಗೆ ಕಾರಣರಾಗುತ್ತಿರುವುದು ಅತ್ಯಂತ ಶೋಚನೀಯವಾಗಿರುತ್ತದೆ. ಈ ಅಧಿಕ ಸಂಖ್ಯೆಯ ಬಡ ವೀರಶೈವರನ್ನು ಅಲ್ಪಸಂಖ್ಯಾತ ಉಚ್ಚವರ್ಗದ ಬುದ್ಧಿವಂತ ವೀರಶೈವರು, ಅನ್ಯ ಜಾತೀಯರ ವಿರುದ್ಧ ಭಾವೋದ್ರೇಕ ಸ್ಥಿತಿಗತಿ ಸೃಷ್ಟಿಸಿ ಅವರನ್ನು ಬಳಸಿಕೊಂಡು ತಾವು ಮಾತ್ರ ಲಾಭ ಪಡೆಯುತ್ತಿದ್ದಾರೆಂಬುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ವೀರಶೈವರಲ್ಲಿ ವಿಚಾರ ಕ್ರಾಂತಿ ಬಿತ್ತುವ ಬದಲು ಪೀಠಾಧಿಪತಿಗಳು, ವಿದ್ಯಾವಂತರು ಕಂದಾಚಾರದ ಮೂಢ ನಂಬಿಕೆಯ ಪ್ರಾಚೀನ ಅದ್ದೂರಿ ಆಚರಣೆಗಳನ್ನೇ ಮತ್ತೆ

ಜಾರಿಗೆ ತಂದು, ಆಧುನಿಕ ವಿಜ್ಞಾನ ಪ್ರಚಾರದ ತಂತ್ರ ಮಾಧ್ಯಮಗಳ ಸಹಾಯವನ್ನು ಬಳಸಿಕೊಂಡು ವೀರಶೈವ ಬಡಜನರನ್ನು ಮೋಸಗೊಳಿಸುತ್ತಿರುವುದು ದಿನೇ ದಿನೇ ಹೆಚ್ಚುತ್ತಿದೆ. ಕೆಲವು ಮಂದಿ ನಾಯಕರು ತಮ್ಮ ರಾಜಕೀಯ ಸ್ವಾರ್ಥಸಾಧನೆಗೆ ಆಗಾಗ್ಗೆ ಲಕ್ಷಾಂತರ ಸಂಖ್ಯೆಯಲ್ಲಿ ತಮ್ಮ ಜನಾಂಗದವರನ್ನು ಕಲೆ ಹಾಕಿ ಪ್ರದರ್ಶನದ ವಸ್ತುಗಳನ್ನಾಗಿ ಶರಣರನ್ನು ಬಳಸಿಕೊಳ್ಳುತ್ತಿರುವುದು ಆಧ್ಯಾತ್ಮಿಕ ದುರ್ಬಲತೆಯನ್ನು ಎತ್ತಿ ತೋರಿಸುತ್ತದೆ. ಪಂಚಾಚಾರ್ಯ ಬಡಜಂಗಮರು ತಮ್ಮ ಪ್ರಾಚೀನದ ಧಾರ್ಮಿಕ ಅನುಶ್ರೇಣಿಯ ಪ್ರಥಮ ಸ್ಥಾನಮಾನವನ್ನೇ ಬಂಡವಾಳವನ್ನಾಗಿಸಿಕೊಂಡು ಲೌಕಿಕ ಹಿಡಿತ ಸಾಧಿಸುವಲ್ಲಿ ಬೀಗಿದರೆ, ಒಳಪಂಗಡದವರು ಅಧಿಕ ಸಂಖೆಯನ್ನೇ ರಾಜಕೀಯ ಸ್ಥಾನಮಾನದಿಂದ ಸಂಪತ್ತನ್ನು ಗಳಿಸಿ ಬಂಡವಾಳವನ್ನಾಗಿ ಬಳಸಿ ಧಾರ್ಮಿಕ ಕ್ಷೇತ್ರದ ಹಿಡಿತ ಸಾಧಿಸಬಯಸುತ್ತಿದ್ದಾರೆ. ಇದರಿಂದ ಧಾರ್ಮಿಕ ಮೌಲ್ಯಗಳು ಸ್ಥಾಯಿಸ್ಥಿತಿ ಕಂಡು, ಅವು ಕೇವಲ ಲೌಕಿಕ ಸಾಧನೆಯ ಬಂಡವಾಳವಾಗುತ್ತಿರುವುದು ಧರ್ಮದ ಅವನತಿಗೆ ಸಾಕ್ಷಿಯಾಗಿದೆ. ದ್ವೇಷವೇ ಸಾತ್ವಿಕ ಮುಖದ ಆಯುಧವಾಗಿ ಪ್ರಯೋಗವಾಗುತ್ತಿರುವುದು ಶರಣರ ಡಾಂಭಿಕ ತತ್ವದ ಕಳೆಯ ಬೆಳೆಗೆ ಪ್ರೋತ್ಸಾಹ ಸಿಕ್ಕಿದಂತಾಗಿದೆ.

ವಿಷ್ಣು ಮತ್ತು ಶಿವ ಪಂಥ ಭೇದ ತಾಂತ್ರಿಕ ಮತದಿಂದ ಹಿಡಿದು ಭಾರತದ ಯಾವ ಪಂಥವನ್ನೂ ಬಿಟ್ಟಿಲ್ಲ. ಪ್ರಧಾನವಾಗಿ ವೀರಶೈವ ಧರ್ಮ ಶೈವ ಪಂಥವಾದರೂ ವಿಷ್ಣು ಪಂಥದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವೀರಶೈವ ಧರ್ಮ ವಿಷ್ಣು ಪಂಥವನ್ನು ಗ್ರಂಥಗಳಲ್ಲಿ ಎಷ್ಟೇ ಖಂಡಿಸಿದರೂ, ವೀರಶೈವ ಜನರ ಆಚಾರದಲ್ಲಿ ಮಾತ್ರ ವಿಷ್ಣುಪಂಥ ನುಸುಳಿರುವುದು ಕಂಡುಬರುತ್ತದೆ. ಶಿವದ್ವೇಷಿ ಮಾಧ್ವ ಪಂಥೀಯರೂ ಶಿವನ ಅರ್ಚಕರಾಗಿರುವುದು ಕಂಡುಬರುತ್ತದೆ. ವೀರಶೈವರು ವಿಷ್ಣುಪೂಜೆಯನ್ನು, ಮಾಧ್ವರು ಶಿವಪೂಜೆಯನ್ನು ಸಮರ್ಥಿಸಿಕೊಳ್ಳುವುದಂತೂ ಬಹಳ ವಿಚಿತ್ರವಾಗಿದೆ. ಧಾರ್ಮಿಕ ಪ್ರಪಂಚದ ತತ್ವ ಭೇದವು ಆರ್ಥಿಕ ಪ್ರಪಂಚದಲ್ಲಿ ಹೊಂದಾಣಿಕೆಯಾದಾಗ, ಅದನ್ನು ಒಪ್ಪದೆ ಧಾರ್ಮಿಕವಾಗಿ ಹಲವು ಕತೆಕಟ್ಟಿ ಸಮರ್ಥಿಸಿಕೊಳ್ಳುವುದು ಬದಲಾವಣೆಹೊಂದುತ್ತಿರುವ ಸ್ಥಿತಿಗತಿಗೆ ಸಾಕ್ಷಿಯಾಗಿದೆ. ವೀರಶೈವರು ವಿಷ್ಣು ಪೂಜೆಯನ್ನು ಶಿವಪೂಜೆ ಎಂದೇ ಭಾವಿಸುತ್ತಾರೆ. ಮಾಧ್ವರು ಶಿವದೇವಾಲಯದಲ್ಲಿ ಶಿವನ ವಿಗ್ರಹದ ಬಳಿ ಚಿಕ್ಕ ವಾಯು ದೇವರನ್ನು ಪ್ರತಿಷ್ಠಾಪಿಸಿ, ತಮ್ಮ ಶಿವನ ಪೂಜೆ ವಾಯು ದೇವರಿಗೆ ಸಲ್ಲುವುದೆಂದೇ ಭಾವಿಸುತ್ತಾರೆ. ಇದು ಪರಸ್ಪರ ಪ್ರೀತಿ ದ್ವೇಷದ ಸಂಕೇತವಾಗಿದೆ. ಇದು ಜೋಳವಾಳಿ ಮತ್ತು ವೇಳಾವಾಳಿಗೂ ನಡೆದಿರುವ ತಿಕ್ಕಾಟದ ಕುರುಹಾಗಿರುತ್ತದೆ.

ಗೌಡ ಲಿಂಗಾಯಿತ, ನೊಣಬ ಲಿಂಗಾಯಿತ, ಸಾದು ಲಿಂಗಾಯಿತ ಮತ್ತಿತರ ಹದಿನೆಂಟು ಪಣದ ಬಸವ ಪಂಥದ ಒಳಪಂಗಡದ ಲಿಂಗಾಯಿತರಲ್ಲಿ ಮುಖ್ಯವಾಗಿ ಶಿವ ಮತ್ತು ವಿಷ್ಣುಪೂಜಕರಿದ್ದಾರೆ. ಬಸವಂಥದವರು ಮುಖ್ಯವಾಗಿ ದೀಕ್ಷೆಯಿಂದ ಮತಾಂತರಗೊಂಡು ವೀರಶೈವರಾದವರು. ಎಲ್ಲರೂ ಲಿಂಗ ಧರಿಸುತ್ತಾರೆ. ಒಳಪಂಗಡದವರಲ್ಲಿ ಶನಿವಾರದ

ಲಿಂಗಾಯಿತರು ಮತ್ತು ಸೋಮವಾರದ ಲಿಂಗಾಯಿತರು ಎಂದು ಎರಡು ಗುಂಪುಗಳಿವೆ. ಶನಿವಾರದ ಲಿಂಗಾಯಿತರೇ ವಿಷ್ಣುಪೂಜೆಯ ಶಿವಭಕ್ತರು. ಅವರೇ ನಾಮಧರಿಸುವ ನಾಮಧಾರಿ ಲಿಂಗಾಯಿತರು. ಸೋಮವಾರದ ಲಿಂಗಾಯಿತರು ಅಚ್ಚ ಶಿವಭಕ್ತರು. ಸೋಮವಾರದ ಲಿಂಗಾಯಿತರು ನಾಮಧರಿಸುವುದಿಲ್ಲ. ವಿಷ್ಣು ಪೂಜೆ ಅವರಿಗೆ ನಿಷಿದ್ಧ. ಶನಿವಾರದ ಲಿಂಗಾಯಿತರಿಗೆ ವಿಭೂತಿ ಮತ್ತು ಶಿವಪೂಜೆ ನಿಷಿದ್ಧವಲ್ಲ. ಇಬ್ಬರಲ್ಲಿಯೂ ಆಚಾರ ವಿಚಾರದಲ್ಲಿ ಕೆಲವು ಭೇದಗಳಿವೆ. ಕೆಲವು ಕಡೆ ಊಟ ಉಪಚಾರ ಕೊಳುಕೊಡೆ ನಿಷಿದ್ಧವಾದರೂ ಮತ್ತೆ ಕೆಲವು ಕಡೆ ಯಾವ ಭೇದವೂ ಇರುವುದಿಲ್ಲ. ಸೋಮವಾರದ ಲಿಂಗಾಯಿತರು ನೊಣಬರಲ್ಲಿ ಸಾಮಾನ್ಯವಾಗಿ ಸಿದ್ಧರಾಮನ ಭಕ್ತರು. ಗೌಡ ಲಿಂಗಾಯಿತರಲ್ಲಿ ಸಾಮಾನ್ಯವಾಗಿ ಸೋಮವಾರದವರು ಸಿದ್ಧಲಿಂಗನ ಭಕ್ತರು, ಶನಿವಾರದವರು ರಂಗನಾಥನ ಭಕ್ತರು. ನೊಣಬರಲ್ಲಿ ಶನಿವಾರದವರು ಮುಖ್ಯವಾಗಿ ನರಸಿಂಹನ ಭಕ್ತರು. ಅಥವಾ ಆಯಾ ಸ್ಥಳೀಯ ವಿಷ್ಣುದೇವಾಲಯದ ಪ್ರಭಾವಕ್ಕೆ ಒಳಗಾದವರು. ಸೋಮವಾರದ ಲಿಂಗಾಯಿತರಿಗೆ ಸಿದ್ಧರಾಮನ ಗದ್ದುಗೆಗಳು ಮತ್ತು ಗೋಡೆಕೆರೆ ಮಠ ಕೇಂದ್ರವಾಗಿರುವುದು ಕಂಡುಬರುತ್ತದೆ. ಶನಿವಾರದ ಲಿಂಗಾಯಿತರಿಗೆ ಇಂಥ ಶಿವ ದೇವಾಲಯಗಳಾಗಲಿ, ಗದ್ದುಗೆಗಳಾಗಲಿ ಕೇಂದ್ರವಾಗಿರುವುದು ಕಂಡುಬರುವುದಿಲ್ಲ. ಶನಿವಾರದವರಲ್ಲಿಯೇ ಕುಟುಂಬದ ಒಬ್ಬ ನಿತ್ಯಸ್ನಾನಿಯಾಗಿ 'ಅಯ್ಯನಾಗಿ' ದೀಕ್ಷೆ ಕೊಡುವ, ಧಾರ್ಮಿಕ ವಿಧಿಯ ಕಾರ್ಯವನ್ನು ತೂಗಿಸುವುದು ರೂಢಿಯಾಗಿದೆ. ಗುಬ್ಬಿ ಹೊಸಳ್ಳಿಯ ಅರಸು ಮನೆತನದ ನಾಲ್ಕು ದಿವಸದ ನೊಣಬ ಲಿಂಗಾಯಿತರು ಮಾತ್ರ ವೀರಭದ್ರನ ಒಕ್ಕಲಾಗಿ ರೇಣುಕ ಪೀಠದವರಿಂದಲೇ ದೀಕ್ಷೆ ಪಡೆಯುವ ಸಂಪ್ರದಾಯ ನಡೆದುಬಂದಿದೆ. ಅವರನ್ನು ಅರಸು ಲಿಂಗಾಯಿತರು ಎಂದು ಕರೆಯುತ್ತಾರೆ. ಪೂರ್ವದಲ್ಲಿ ಸಂಸ್ಥಾನದ ಆಧಿಪತ್ಯ ನಡೆಸಿದ ಅವರ ಅರಮನೆಗೆ ಪಂಚಾಚಾರ್ಯರ ರೇಣುಕ ಪೀಠ ಗುರುಮನೆಯಾಗಿ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಅರಸು ಲಿಂಗಾಯಿತರಲ್ಲಿ ವಿಷ್ಣು ಪೂಜಕರಿಲ್ಲ. ಆದರೆ ವಿಜಯದಶಮಿ ಕಾಲದಲ್ಲಿ ಆಯುಧ ಪೂಜೆ ಸಲ್ಲಿಸುತ್ತಾರೆ. ಇಂದಿಗೂ ಅವರು 'ಮುತ್ತಿನ ಮುಮ್ಮಡಿ ಏಳುನಾಡು ಪ್ರಭುಗಳು' ಎಂಬ ಬಿರುದು ಹೊತ್ತು ಸಂಸ್ಥಾನಾದ್ಯಂತ ತಿರುಗಿ ಕಪ್ಪಕಾಣಿಕೆ ವಸೂಲಿಮಾಡುತ್ತಾರೆ. ಏಕಸುಳಿ ಸಂತಾನದ ಅರಸು ಲಿಂಗಾಯಿತ ಮನೆತನದಲ್ಲಿ ಪಟ್ಟ ನಡೆಯುವ ಪದ್ಧತಿ ಇಂದಿಗೂ ನಡೆದುಕೊಂಡು ಬಂದಿರುತ್ತದೆ. ಶನಿವಾರದ ಲಿಂಗಾಯಿತರು ನರಸಿಂಹ, ರಂಗನಾಥ ಮತ್ತು ಆಂಜನೇಯನ ಭಕ್ತರೇ ಅಲ್ಲದೆ ತಿರುಪತಿ ತಿಮ್ಮಪ್ಪನ ಒಕ್ಕಲೂ ಆಗಿ, ಮನೆಯಲ್ಲಿ ತಿಮ್ಮಪ್ಪ ದೇವರನ್ನು ಪೂಜಿಸುತ್ತಾರೆ. ಲಿಂಗಾಯಿತರಾಗಿ ತಿಮ್ಮಪ್ಪನನ್ನು ಪೂಜಿಸುವುದು ಸರಿಯೆ ಎಂದರೆ ತಿಮ್ಮಪ್ಪ ಹಿಂದೆ ವೀರಭದ್ರನಾಗಿದ್ದ ಎಂದು ಸಮಾಧಾನ ಹೇಳಿ ಸಮರ್ಥಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ ಎನ್ನಿಸುತ್ತದೆ. ವಿಷ್ಣು ಪೂಜೆಯ ಲಿಂಗಾಯಿತರ ಆಚಾರ ವಿಚಾರಗಳನ್ನು ಅಧ್ಯಯನ ಮಾಡಿದರೆ, ಅವರಲ್ಲಿ ಸಂಪೂರ್ಣವಾಗಿ ವಿಷ್ಣುಪಂಥದ ಆಚರಣೆಗಳನ್ನು ಗುರುತಿಸಬಹುದಾಗಿದೆ. ವಿಷ್ಣುಪೂಜಕ ಲಿಂಗಾಯಿತರು ನಾಮಧರಿಸುತ್ತಾರೆ, ತುಳಸಿ ಬಳಸುತ್ತಾರೆ, ಕಾರ್ತೀಕ ಸೋಮವಾರಕ್ಕಿಂತ ಶ್ರಾವಣ ಶನಿವಾರವನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಹುಟ್ಟು ಸಾವು,

ಶುಭ ಅಶುಭ ಕಾರ್ಯಗಳಲ್ಲಿ 'ಅಯ್ನೋರಿಗಿಂತ' ದಾಸಯ್ಯ ಬಂದು ಧಾರ್ಮಿಕ ವಿಧಿಯ ಕಾರ್ಯವನ್ನು ತೂಗಿಸುತ್ತಾನೆ. ದೀಕ್ಷೆಗೆ ಮಾತ್ರ ಅಯ್ನೋರ್ನ ಕರೆದರೆ ಮಿಕ್ಕ ಕಾಲದಲ್ಲಿ ದಾಸಯ್ಯನೇ ಪುರೋಹಿತನಾಗಿ ಕಾರ್ಯ ನಿರ್ವಹಿಸುತ್ತಾನೆ. ಶ್ರಾವಣ ಶನಿವಾರದಲ್ಲಿ ದಾಸಯ್ಯನನ್ನು ಕರೆದು ಬೊವನಾಸಿ ತುಂಬಿಸಿ, ಶಂಖದ ಕೂಗುಹಾಕಿಸಿ, ಜಾಗಟೆ ಬಡಿಸಿ ಗೋವಿಂದನನ್ನು ಇಕ್ಕಿಸಿ ಕಾಲಿಗೆ ಬೀಳುತ್ತಾರೆ. ಮದುವೆ ಕಾಲದಲ್ಲಿ ಮನೆ ದೇವರು ವಿಷ್ಣುವನ್ನೇ ಪೂಜಿಸುತ್ತಾರೆ. ಮಕ್ಕಳ ಮುಡಿಯನ್ನು ವಿಷ್ಣುದೇವರಿಗೇ ಕೊಡುತ್ತಾರೆ. ಮದುವೆಯ ನಾಗೋಲೆ ಶಾಸ್ತ್ರದಲ್ಲಿ ಸಂಬಂಧಿ ಒಬ್ಬ ದಾಸಯ್ಯನ ವೇಷಧರಿಸಿ ಮಣೇವು ಹಾಕಿಸುವ ಪದ್ಧತಿಯೂ ಉಂಟು. ಲಿಂಗಾಯಿತರಲ್ಲಿ ಪ್ರಸಾದ ಎಂದರೆ ಅತ್ಯಂತ ಪವಿತ್ರವಾದುದು ಮತ್ತು ಪ್ರಮುಖವಾದುದು. ನಾಮಧಾರಿ ಲಿಂಗಾಯಿತರು ಅಂಥ ಪ್ರಸಾದ ಸ್ವೀಕರಿಸುವಾಗ 'ಶ್ರೀಮದ್ರರಮಾರಮಣಗೋವಿಂದ ಗೋವಿಂದ' ಎಂದು ಹರಿಯ ಗೋವಿಂದನನ್ನು ಮೊದಲು ಇಕ್ಕಿ, ಅನಂತರ 'ಜಯ ಜಯ ನಮಃ ಪಾರ್ವತೀ ಪತೇ ಹರ ಹರ ನಮಃ' ಎಂದು ಹರನನ್ನು ಸ್ತುತಿಸುವ ಪದ್ಧತಿ ಇಂದಿಗೂ ಇದೆ. ನಾಮಧಾರಿ ಲಿಂಗಾಯಿತರಲ್ಲಿ ದಾಸಯ್ಯ ಮತ್ತು ಅಯ್ನೋರನ್ನು ಒಂದೇ ದಿನ, ಒಂದೇ ಕಾಲದಲ್ಲಿ ಮನೆಗೆ ಕರೆದು ಧಾರ್ಮಿಕ ಕೆಲಸಕಾರ್ಯವನ್ನು ತೂಗಿಸುವುದು ರೂಢಿಯಲ್ಲಿದೆ. ಅಯ್ನೋರು ಲಿಂಗಾಯಿತರಾದುದರಿಂದ ಒಳಗೆ ದೇವರ ಮನೆಯಲ್ಲಿ, ದಾಸಯ್ಯ ತಮಗಿಂತ ಕೀಳುಕುಲದವನಾದುದರಿಂದ ನಡುಮನೆಯಲ್ಲಿ - ಹೀಗೆ ಏಕ ಕಾಲದಲ್ಲಿ ಹರಿ ಮತ್ತು ಹರನ ಸೇವೆಗೆ ಏರ್ಪಾಟು ಮಾಡುವ ಸಂದರ್ಭಗಳೂ ಉಂಟು. ವಿಷ್ಣುದೇವಾಲಯಗಳಲ್ಲಿ ಕೆಳವರ್ಗದ ಪೂಜಾರಿಗಳಿಂದ ತೀರ್ಥ ಪ್ರಸಾದ ಸ್ವೀಕರಿಸುವುದಕ್ಕೆ ನಾಮಧಾರಿ ಲಿಂಗಾಯಿತರಿಗೆ, ಪೂಜಾರಿಯ ಜಾತಿ ಅಡ್ಡಿ ಬರುವುದಿಲ್ಲ. ಅಲ್ಲದೆ ಅನೇಕ ವಿಷ್ಣು ದೇವಾಲಯಗಳಲ್ಲಿ ಲಿಂಗಾಯಿತರೇ ಪೂಜಾರಿಗಳಾಗಿ ಸೇವೆ ಸಲ್ಲಿಸುತ್ತಿರುವುದು ತಮಗೆ ಅವಮಾನ ಎಂದು ನಾಮಧಾರಿ ಲಿಂಗಾಯಿತರು ಎಂದೂ ಭಾವಿಸುವುದಿಲ್ಲ. ನಾಮಧಾರಿ ಲಿಂಗಾಯಿತರು ಗುಪ್ತಭಕ್ತರಲ್ಲ, ವಿಷ್ಣುವಿನ ಕಳ್ಳ ಒಕ್ಕಲಲ್ಲ, ಶಿವಕುಲದ ವಿಷ್ಣುವಿನ ನಿಷ್ಠಾವಂತ ಬಹಿರಂಗ ಭಕ್ತರು. ಇವರು ಲಿಂಗಾಯಿತ ಬ್ರಾಹ್ಮಣ ಪುರೋಹಿತರಾದ ಜಂಗಮರನ್ನು ತಲೆ ಮೇಲೆ ಹೊತ್ತು ಮೆರೆಸುವುದಿಲ್ಲ. ಅಂತೆಯೇ ಕೆಳವರ್ಗದ ಪುರೋಹಿತರನ್ನು ಕಡೆಗಾಣಿಸುವುದಿಲ್ಲ. ನಾಮಧಾರಿ ಲಿಂಗಾಯಿತರ ಸಂಸ್ಕೃತಿಯ ಅಧ್ಯಯನ ಕರ್ನಾಟಕದ ಸಂಸ್ಕೃತಿ ಅಧ್ಯಯನಕ್ಕೆ ವಿಶೇಷ ಕಾಣಿಕೆ ಸಲ್ಲಿಸುವುದರಲ್ಲಿ ಸಂಶಯವಿಲ್ಲ. ಅಷ್ಟಾವರಣ,ಷಟ್‌ಸ್ಥಲ, ಪಂಚಾಚಾರ, ಏಕದೇವತಾನಿಷ್ಠೆ ಅಥವಾ ಯಾವ ವೀರಶೈವ ಪೀಠಾಧಿಪತಿಯಾಗಲಿ, ವೀರಶೈವ ಧರ್ಮ ಪ್ರಚಾರಕರಾಗಲಿ ನಾಮಧಾರಿ ಲಿಂಗಾಯಿತರ ವಿಷ್ಣು ಪೂಜೆಯನ್ನು ಬದಲಿಸಲು ಮಾತ್ರ ಶತಮಾನಗಳಿಂದ ಸಾಧ್ಯವಾಗಿಲ್ಲ. ವಿಷ್ಣುಪೂಜಕರನ್ನು ಲಿಂಗಧಾರಿಗಳನ್ನಾಗಿ ಮತಾಂತರಿಸಿರಬಹುದೇ ಹೊರತು, ಅವರನ್ನು ಏಕನಿಷ್ಠ ಶಿವಪೂಜಕರನ್ನಾಗಿ ಸಂಪೂರ್ಣ ಪರಿವರ್ತಿಸುವಲ್ಲಿ ವೀರಶೈವ ಧರ್ಮ ವಿಫಲವಾಗಿದೆ. ದೀಕ್ಷೆಗೆ ವಿರುದ್ಧವಾಗಿ ಬಹುದೇವತೋಪಾಸಕರಾದ ವಿಷ್ಣು ಪೂಜೆಯ ಲಿಂಗಾಯಿತರನ್ನು ವಾರದಲ್ಲಿ ಒಂದು ದಿನದ ವಿಷ್ಣು ಪೂಜಕರು ಎಂದು ಕರೆದಿರುವ ವಿದ್ವಾಂಸರ

ಅಭಿಪ್ರಾಯ ಆಳವಾದ ಅಧ್ಯಯನದಿಂದ ಬಂದ ತೀರ್ಮಾನವಲ್ಲ. ಪಂಚಾಚಾರ್ಯರು ಮತ್ತು ಉಚ್ಚ ವರ್ಗದಿಂದ ಮತಾಂತರವಾದ ಬಸವ ಪಂಥದ ಅಚ್ಚ ಶಿವಭಕ್ತರು ನಾಮಧಾರಿ ಲಿಂಗಾಯಿತರನ್ನು ಒಂದು ಬಣ್ಣ ಕಡಿಮೆಯಾಗಿ ಕಂಡು, ತಾವೇ ಶ್ರೇಷ್ಠ ಎಂದು ಭಾವಿಸುತ್ತಾರೆ. ಧಾರ್ಮಿಕ ಪ್ರತಿಷ್ಠಿತರು, ಬುದ್ಧಿಜೀವಿಗಳು ಮತ್ತು ಶ್ರೀಮಂತರು ಮಾತ್ರ ನಿತ್ಯ ಸ್ನಾನಿಗಳಾಗುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಯಾವುದೇ ಜಾತಿಯ ಕೆಳವರ್ಗ ನಿತ್ಯ ಸ್ನಾನಿಗಳಾಗಿರುವುದಿಲ್ಲ. ಅವರ ಆರ್ಥಿಕ ದುಃಸ್ಥಿತಿಯೇ ಧಾರ್ಮಿಕ ಸ್ಥಿತಿಗತಿಯನ್ನೂ ನಿಯಂತ್ರಿಸುತ್ತದೆ. ಹಳ್ಳಿಯ ಪರಿಸರವೇ ಅವರನ್ನು ವಾರ ಸ್ನಾನಿಗಳು, ಪಕ್ಷ ಸ್ನಾನಿಗಳು ಮತ್ತು ಮಾಸ ಸ್ನಾನಿಗಳನ್ನಾಗಿಸುತ್ತದೆ. ಧಾರ್ಮಿಕ ವಿಧಿ ಕೆಳವರ್ಗಕ್ಕೆ ವೃತ್ತಿಯಾಗುವುದಿಲ್ಲ. ದುಡಿಮೆಯಿಂದ ಪ್ರಾಮಾಣಿಕವಾಗಿ ಬೆವರು ಸುರಿಸಿ ಗಂಜಿಕುಡಿವ ಅವರಿಗೆ ಧಾರ್ಮಿಕ ಪೂಜೆಗೆ ಪ್ರತ್ಯೇಕವಾದ ಕಾಲವನ್ನು ಮೀಸಲಿಡಲು ಸಮಯವೂ ಇರುವುದಿಲ್ಲ ಮತ್ತು ಅವರ ಆರ್ಥಿಕ ಸ್ಥಿತಿಗತಿ ಅನುಕೂಲವೂ ಆಗಿರುವುದಿಲ್ಲ. ಧರ್ಮ ತತ್ವಗಳು ಅವರ ಉಸಿರಿನಷ್ಟೇ ಬದುಕಿನ ಸಹಜ ಅಂಗವಾಗಿರುತ್ತವೆ. ಲಿಂಗಾಯಿತರಿಗೂ ಇತರ ಕೋಮಿನವರಿಗೂ ವಾರದ ಆಚರಣೆಯಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ವಾರಕ್ಕೊಮ್ಮೆ ಕೆಳವರ್ಗದ ಉತ್ತಮ ಜಾತಿಯವರು ತಪ್ಪದೆ ಸ್ನಾನಮಾಡಿ ಮನೆ ದೇವರನ್ನು ಪೂಜಿಸುತ್ತಾರೆ. ವಾರದ ಇಡೀ ದಿನವನ್ನು ಹಬ್ಬದ ದಿನದಂತೆ ವಿಶೇಷವಾಗಿ ಆಚರಿಸುತ್ತಾರೆ. ತಪ್ಪದೆ ದೇವರ ಪೂಜೆಯನ್ನು ಮಡಿ ಉಪವಾಸದಿಂದ ನಿಷ್ಠಾವಂತರಾಗಿ ಮಾಡುತ್ತಾರೆ. ಕುಟುಂಬ ಆಚರಿಸುವ ವಾರವೇ ಅದು ಶಿವ ಪಂಥದ್ದೊ ಅಥವಾ ವಿಷ್ಣು ಪಂಥದ್ದೊ ಎಂಬುದು ನಿರ್ಧಾರವಾಗುತ್ತದೆ. ಶನಿವಾರ ಆಚರಿಸುವವರು ವಿಷ್ಣುಪಂಥದವರೆಂದೂ, ಸೋಮವಾರ ಆಚರಿಸುವವರು ಶಿವ ಪಂಥದವರೆಂಬುದಂತೂ ನಿರ್ವಿವಾದ ಸಂಗತಿ. ಅನೇಕ ಕುಟುಂಬಗಳು ಮನೆಯಲ್ಲಿ ವಾರವನ್ನೂ ಆಚರಿಸದಷ್ಟು ಅನಾನುಕೂಲ ಸ್ಥಿತಿಯಲ್ಲಿದ್ದು, ಆಗೊಮ್ಮೆ ಈಗೊಮ್ಮೆ ಕೆರೆಯಲ್ಲಿ ಸ್ನಾನಮಾಡಿ ತಮ್ಮ ತಮ್ಮ ದೇವರಿಗೆ ಕೈಮುಗಿಯುವುದರಲ್ಲಿಯೇ ಅವರ ಪಂಥನಿಷ್ಠೆ ಮಿತಗೊಂಡಿರುತ್ತೆ. ಆದ್ದರಿಂದ ನಾಮಧಾರಿ ಲಿಂಗಾಯಿತರು ವಾರದಲ್ಲಿ ಒಂದು ದಿನ ನಾಮಧರಿಸುವ ಲಿಂಗಾಯಿತರಲ್ಲ. ಅವರ ಬದುಕಿನಲ್ಲಿ ವಿಷ್ಣು ಪಂಥದ ಸಂಪ್ರದಾಯ ಆಳವಾಗಿ ಬೇರುಬಿಟ್ಟು ಹಾಸುಹೊಕ್ಕಾಗಿ ಹೆಣೆದಿರುವುದು ಸ್ಪಷ್ಟವಾಗುತ್ತದೆ. ಹುಟ್ಟಿನಿಂದ ಸಾಯುವ ತನಕ ನಾಮಧಾರಿ ಲಿಂಗಾಯಿತರ ಧಾರ್ಮಿಕ ವಿಧಿಯಲ್ಲಿ ವಿಷ್ಣು ಪಂಥದ ಆಚರಣೆಯ ಅನುಸರಣೆ ಕಂಡುಬಂದು ವಿಷ್ಣು ಪೂಜಕರು ನಾಮಧಾರಿ ಲಿಂಗಾಯಿತರು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಕುಲದೇವರು, ಮನೆದೇವರು ಮತ್ತು ಇಷ್ಟದೇವರು ಈ ಮೂರು ದೇವರು ವ್ಯಕ್ತಿ, ಕುಟುಂಬ ಮತ್ತು ಸಮಾಜಕ್ಕೆ ಅನ್ವಯಿಸುತ್ತದೆ. ಕುಲದೇವರು ಆ ವ್ಯಕ್ತಿ ಯಾವ ಕುಲಕ್ಕೆ ಸೇರಿದವನೆಂಬುದನ್ನು ತೋರಿಸುತ್ತದೆ. ಮನೆ ದೇವರು ವ್ಯಕ್ತಿಯು ಯಾವ ವಂಶ ಮತ್ತು ಕುಟುಂಬಕ್ಕೆ ಸೇರಿದವನು ಎಂಬುದನ್ನು ತಿಳಿಸುತ್ತದೆ. ಇಷ್ಟದೇವರು ವ್ಯಕ್ತಿಯ ವೈಯಕ್ತಿಕ ಅಭಿರುಚಿಯನ್ನು ತೋರಿಸುತ್ತದೆ. ಈ ಮೂರಕ್ಕೂ ವ್ಯಕ್ತಿಗೂ ಸಂಬಂಧವಿರುತ್ತದೆ. ವ್ಯಕ್ತಿಯ

ಮೂರು ದೇವರನ್ನು ಪ್ರಶ್ನಿಸುವುದರಿಂದ ಅವನ ಕುಲ, ವಂಶ ಮತ್ತು ಅವನ ಸ್ವಭಾವವನ್ನು ಪತ್ತೆ ಹಚ್ಚಬಹುದು. ಕೆಲವರಿಗೆ ಈ ಮೂರು ದೇವರು ಒಂದೇ ಆಗಿರುತ್ತದೆ. ಮತ್ತೆ ಕೆಲವರಿಗೆ ಭಿನ್ನ ಭಿನ್ನವಾಗಿರುತ್ತವೆ. ಕುಲದೇವರು ಆ ಕುಲದ ಸಮಾಜದ ಎಲ್ಲಾ ಸದಸ್ಯರಿಗೂ ಒಂದೇ ಆಗಿರುತ್ತದೆ. ಲಿಂಗಾಯಿತರಿಗೆ ಕುಲದೇವರು ಶಿವ. ಆದರೆ ಮನೆ ದೇವರು ಮತ್ತು ಇಷ್ಟದೇವರು ಬೇರೆ ಬೇರೆಯಾಗಬಹುದು. ಕುಟುಂಬದ ವ್ಯಕ್ತಿ ವ್ಯಕ್ತಿಗೂ ಇಷ್ಟದೇವರು ಬೇರೆ ಬೇರೆಯಾಗಬಹುದು. ಆದರೆ ಕುಟುಂಬದ ಎಲ್ಲಾ ವ್ಯಕ್ತಿಗಳಿಗೂ ಮನೆ ದೇವರು ಒಂದೇ ಆಗಿರುತ್ತದೆ. ಒಂದೆ ಕುಲದ ಬೇರೆ ಬೇರೆ ಕುಟುಂಬಗಳಿಗೆ ಕುಲ ದೇವರು ಒಂದೇ ಆಗಿ ಮನೆ ದೇವರು ಬೇರೆ ಬೇರೆಯಾಗಿ ಇರಲು ಸಾಧ್ಯ. ಕುಟುಂಬ ಅಥವಾ ವ್ಯಕ್ತಿ ಮತಾಂತರಿಯಾದಾಗ ಕುಲ ಅಥವಾ ಇಷ್ಟದೇವರು ಬದಲಾಗಲು ಸಾಧ್ಯ. ಆದರೆ ಮನೆ ದೇವರು ಅಷ್ಟು ಸುಲುಭವಾಗಿ ಬದಲಾಗುವುದಿಲ್ಲ. ಅನುವಂಶದ ರಕ್ತ ಸಂಬಂಧ ಮನೆ ದೇವರ ಆರಾಧನೆಯಲ್ಲಿ ಅಡಗಿರುತ್ತದೆ. ಯಾರೂ ಒಂದು ಪಕ್ಷ ಕುಲ ಬಿಟ್ಟರೂ ಮನೆ ದೇವರನ್ನು ಮಾತ್ರ ಅಷ್ಟು ಸುಲಭವಾಗಿ ಬಿಡುವುದಿಲ್ಲ. 'ಮನೆ ದೇವರನ್ನು ಬಿಟ್ಟರೆ ಮನೆ ಹಾಳು' ಎಂಬ ಗಾದೆಯೇ ಹುಟ್ಟಿದೆ. ಮದುವೆ ಮುಂತಾದ ಸಂದರ್ಭದಲ್ಲಿ ನಡೆಸುವ ದೇವತಾಕಾರ್ಯದಿಂದ ಮನೆ ದೇವರು ಪತ್ತೆಯಾಗುತ್ತದೆ. ವ್ಯಕ್ತಿಯನ್ನು ಮತಾಂತರಿಸಬಹುದೇ ಹೊರತು; ಅವನ ಮನೆ ದೇವರನ್ನು ಮತಾಂತರಿಸುವುದು ಸುಲಭ ಸಾಧ್ಯವಲ್ಲ. ಆದ್ದರಿಂದ ವಿಷ್ಣು ಮನೆ ದೇವರಾದ ನಾಮಧಾರಿ ಲಿಂಗಾಯಿತರ ಮನೆ ದೇವರು ಬದಲಾಗುವುದಿಲ್ಲ. ವಿಷ್ಣು ವಿರೋಧಿ ಏಕನಿಷ್ಠ ವೀರಶೈವರಿಗೆ ನಾಮಧಾರಿ ಲಿಂಗಾಯಿತರು ಎಂದು ಕರೆದುಕೊಳ್ಳುವುದಕ್ಕೆ ಇರಸು ಮುರುಸಾದರೂ ಅಂಥ ಸಂಪ್ರದಾಯದ ಪಂಥದವರು ಇರುವುದನ್ನು ಅಲ್ಲಗಳೆಯುವುದಂತೂ ಸಾಧ್ಯವಿಲ್ಲ. ವಿಷ್ಣುಭಕ್ತರಾದ ಲಿಂಗಾಯಿತರು ತಿಮ್ಮಪ್ಪ, ಗೋವಿಂದ, ನರಸಿಂಹ, ರಂಗನಾಥ, ಶ್ರೀನಿವಾಸ ಮುಂತಾದ ವಿಷ್ಣು ಭಕ್ತರ ಹೆಸರನ್ನು ಇಟ್ಟುಕೊಳ್ಳುವುದಕ್ಕೆ ನಾಚುವುದಿಲ್ಲ. ಚಿತ್ರದುರ್ಗದ ಮುರುಘಾ ಮಠದವರ ನಿರೂಪದಲ್ಲಿ 'ದ್ರಾಕ್ಷಾರಾಮ ಕ್ಷೇತ್ರ ರಾಮನಾಥ ಲಿಂಗೋದ್ಭವ ಪ್ರಭು ಪರಂಪರಾನ್ವಯ' ಎಂಬ ಮಾತು ವಿಷ್ಣುಭಕ್ತರ ಕುತೂಹಲವನ್ನು ಕೆರಳಿಸುತ್ತದೆ.

ತುಮಕೂರು ಜಿಲ್ಲೆಯಲ್ಲಿ ಹತ್ಯಾಳು ನರಸಿಂಹ, ಸೀಬಿ ನರಸಿಂಹ ಮತ್ತು ದೇವರಾಯನದುರ್ಗದ ನರಸಿಂಹ ನಾಮಧಾರಿ ಲಿಂಗಾಯಿತರ ಪವಿತ್ರ ಸ್ಥಳಗಳು. ನಾಮಧಾರಿ ಲಿಂಗಾಯಿತರು ಲಗ್ನಪತ್ರಿಕೆಗಳಲ್ಲಿ 'ನರಸಿಂಹಾಯ ನಮಃ' ಎಂದೇ ಮನೆ ದೇವರ ಹೆಸರನ್ನು ಮುದ್ರಿಸುತ್ತಾರೆ. ಹತ್ಯಾಳಿನ ನರಸಿಂಹಸ್ವಾಮಿಯ ಪೂಜಾರಿ ಲಿಂಗಾಯಿತರು, ನಿತ್ಯ ನಾಮಧರಿಸಿ ಎದೆಯ ಮೇಲೆ ಲಿಂಗವಿದ್ದೇ ಗೋವಿಂದನನ್ನು ಇಕ್ಕಿ ನರಸಿಂಹನ ಪೂಜೆಮಾಡುವುದನ್ನು ಕಾಣಬಹುದು. ಈ ಸ್ಥಳಗಳಲ್ಲಿ ವಿಷ್ಣುಭಕ್ತ ಲಿಂಗಾಯಿತರ ಮಂಟಪಗಳಿವೆ. ಜಾತ್ರೆ ಕಾಲದಲ್ಲಿ ಪರ ಮಾಡಿ ನರಸಿಂಹದೇವರಿಗೆ ಎಡೆ ಅರ್ಪಿಸುತ್ತಾರೆ. ಸಂಜೆ ಹೊತ್ತು ಹತ್ಯಾಳು ನರಸಿಂಹನಿಗೆ ಮಾಂಸದ ಎಡೆಯೂ ಆಗುತ್ತದೆ. ಲಿಂಗಾಯಿತ ಪೂಜಾರಿ ಅದಕ್ಕೆ ವಿರೋಧಿಸುವುದಿಲ್ಲ. ಅವನೂ ಪ್ರಸಾದವನ್ನು ಬಳಸುತ್ತಾನೆ. ಪರೀಕ್ಷೆ ಮಾಡಿದವರಿಗೆ ಮಾಂಸ ಬಾಳೆಕಾಯಿ ಮತ್ತು

ಹಲಸಿನಕಾಯಿಯ ಪಲ್ಯವಾಗಿ ಕಂಡಿದೆಯಂತೆ! ಇಂಥ ಸಂಪ್ರದಾಯ ಗುಟ್ಟಾಗಿ ನಡೆಯುತ್ತಿದೆ. ಇಂಥ ಪದ್ಧತಿಯಿಂದ ಆಶ್ಚರ್ಯ ಪಡುವ ಅಗತ್ಯವಿಲ್ಲ. ಬಸವಣ್ಣನವರ ವಚನವೇ ಇಂಥ ಪದ್ಧತಿಯ ಸಮರ್ಥನೆಗೆ ಸಾಕ್ಷಿಯಾಗಿದೆ:

> **ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ**
> **ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ**
> **ಅವರ ಲಿಂಗವೆಂಬೆ, ಸಂಗವೆಂಬೆ**
> **ಕೂಡಲ ಸಂಗಮದೇವಾ, ಅವರ ಮುಖ ಲಿಂಗಿಗಳೆಂಬೆ॥ ಬ.ವ.೭೯**

ಇದರಲ್ಲಿ ಅನಾಚಾರಿಯಾದರೂ ಲಿಂಗಧಾರಿಯಾದರೆ ಸಾಕೆಂಬ ಅಭಿಪ್ರಾಯವಿದೆ. ಅದಕ್ಕೆ ತದ್ವಿರುದ್ಧವಾದ ವಚನಗಳೂ ಇವೆ. ಇದು ದ್ವಂದ್ವವಾಗಿ ಕಂಡರೂ ವಿಚಿತ್ರ ಆಚರಣೆಗಳು ಮಾತ್ರ ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಒಂದೇ ಪಂಥದಲ್ಲಿ ಶಿಷ್ಟ ಮತ್ತು ಜಾನಪದ ಸಂಪ್ರದಾಯಗಳು ಏರ್ಪಟ್ಟಿದ್ದರಿಂದಲೇ ಇಂಥ ಆಚರಣೆಗಳಿಗೆ ಅವಕಾಶವಾಯಿತು. ಧರ್ಮಸ್ಥಳದ ಮಂಜುನಾಥ ದೇವಾಲಯದ ಪದ್ಧತಿಯೂ ವಿಚಿತ್ರವಾಗಿದೆ. ಅಲ್ಲಿಯ ಧರ್ಮಾಧಿಕಾರಿ ನಾಸ್ತಿಕ ಮತವಾದ ಜೈನ ವಂಶಸ್ಥರು, ದೇವರು ಮಾತ್ರ ಶಿವ ಪಂಥದ ಮಂಜುನಾಥ, ಪೂಜಾರಿಗಳಾದರೊ ಶಿವ ದ್ವೇಷಿ ವಿಷ್ಣು ಭಕ್ತ ಮಾಧ್ವರು. ಆದರೆ ಕ್ಷೇತ್ರದ ಭಕ್ತರ ಅಧಿಕ ಸಂಖ್ಯೆ ಅನಕ್ಷರಸ್ಥರಾದ ಕೆಳವರ್ಗದವರು! ಕೆಲವು ಸಂದರ್ಭದಲ್ಲಿ ಧರ್ಮದಿಂದ ಲೋಕ ಕಲ್ಯಾಣವಾದರೆ ಮತ್ತೆ ಕೆಲವು ಸಂದರ್ಭದಲ್ಲಿ ಕೆಲವು ವ್ಯಕ್ತಿಗಳು ಧರ್ಮವನ್ನು ತಮ್ಮ ಕಲ್ಯಾಣ ಸಾಧನೆಗೆ ದುಡಿಸಿಕೊಳ್ಳುತ್ತಾರೆ. ನರಸಿಂಹಸ್ವಾಮಿಯ ಬಗ್ಗೆ ಮಾಧ್ವರು ಚಟಾಕಿ ಹಾರಿಸುವ ಮಾತು ನೆನಪಿಗೆ ಬರುತ್ತದೆ: 'ಹತ್ಯಾಳು ನರಸೀಯ ಶೂದ್ರ ನರಸೀಯ, ಸೀಬಿಯ ನರಸೀಯ ಸ್ಮಾರ್ತ ನರಸೀಯ, ದೇವರಾಯನದುರ್ಗದ ನರಸೀಯ ಭಲೋ ವೈಷ್ಣವ ನರಸೀಯ.' ಏಕೆಂದರೆ ದೇವರಾಯನದುರ್ಗದ ನರಸಿಂಹನ ಪೂಜಾರಿ ವೈಷ್ಣವರು! ನರಸಿಂಹನಿಗೆ ಭಕ್ತರಿಂದ ಜಾತಿ ಅಂಟಿರುವುದು ಕಂಡು ಬರುತ್ತದೆ. ಇಂಥ ಆಚಾರಗಳ ಅಧ್ಯಯನದಿಂದ ಆಯಾ ಸಾಂಸ್ಕೃತಿಕ ಸಂದರ್ಭವನ್ನು ಅರಿಯಲು ಸಾಧ್ಯವಾಗುತ್ತದೆ. ನಾಮಧಾರಿ ಲಿಂಗಾಯಿತರ ಮತ್ತಷ್ಟು ಅಧ್ಯಯನದಿಂದ ಕರ್ನಾಟಕ ಸಂಸ್ಕೃತಿಗೆ ಹೊಸ ಬೆಳಕು ಚೆಲ್ಲುವುದು ಸಾಧ್ಯ. ◆